‘12 ಅಡಿ ಪಿಲ್ಲರ್ ನಿರ್ಮಾಣವೇ ಅವೈಜ್ಞಾನಿಕ’

ನಮ್ಮ ಮೆಟ್ರೊ ಕಬ್ಬಿಣದ ಚೌಕಟ್ಟು ಉರುಳಿಬಿದ್ದಿದ್ದ ಪ್ರಕರಣ • ಪರಿಶೀಲನಾ ವರದಿ ಸಿದ್ಧಪಡಿಸಿದ ಐಐಟಿ ತಜ್ಞರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಣ್ಣೂರು ಕ್ರಾಸ್ ಬಳಿ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿಬಿದ್ದು ತಾಯಿ–ಮಗು ಮೃತಪಟ್ಟಿದ್ದ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದ ಹೈದರಾಬಾದ್ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ತಜ್ಞರು, ‘ಸ್ಥಳದಲ್ಲಿ ನಿರ್ಮಿಸಲಾಗುತ್ತಿದ್ದ 12 ಅಡಿ ಎತ್ತರದ ಮೆಟ್ರೊ ಪಿಲ್ಲರ್ ನಿರ್ಮಾಣವೇ ಅವೈಜ್ಞಾನಿಕ’ ಎಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ ಎಂದು ಗೊತ್ತಾಗಿದೆ.

ಪೊಲೀಸರ ಕೋರಿಕೆ ಮೇರೆಗೆ ಜ. 13ರಂದು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದ ಐಐಟಿ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಎಸ್. ಸುರಿಯಾ ಪ್ರಕಾಶ್ ಹಾಗೂ ಪ್ರಾಧ್ಯಾಪಕ ಡಾ. ಸುಬ್ರಮಣಿಯಂ ನೇತೃತ್ವದ ತಂಡ ಪರಿಶೀಲನೆ ನಡೆಸಿತ್ತು.

ಮಾದರಿಗಳ ಪರೀಕ್ಷೆ ಹಾಗೂ ಎಂಜಿನಿಯರ್‌ಗಳ ಹೇಳಿಕೆಗಳನ್ನು ಆಧರಿಸಿ ವರದಿ ಸಿದ್ಧಪಡಿಸಿರುವ ತಜ್ಞರು, ‘ಬಿಎಂಆರ್‌ಸಿಎಲ್ ಹಾಗೂ ನಾಗಾರ್ಜುನ್ ಕನ್‌ಸ್ಟ್ರಕ್ಷನ್ ಕಂಪನಿ (ಎನ್‌ಸಿಸಿ) ಎಂಜಿನಿಯರ್‌ಗಳ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ’ ಎಂಬ ಅಂಶವನ್ನೂ ಉಲ್ಲೇಖಿಸಿರುವುದಾಗಿ ಮೂಲಗಳು ಹೇಳಿವೆ.

‘ಕಬ್ಬಿಣ ಆಧರಿಸಿ ಎತ್ತರದ ಪಿಲ್ಲರ್ ನಿರ್ಮಾಣ ಮಾಡುವಾಗ, ಕೆಲ ಹಂತಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಆದರೆ, ಮೆಟ್ರೊ ಪಿಲ್ಲರ್ ನಿರ್ಮಾಣದಲ್ಲಿ ಕೆಲ ಹಂತಗಳನ್ನೇ ಕೈಬಿಡಲಾಗಿದೆ. ಹೀಗಾಗಿ, ಆಸರೆ ಇಲ್ಲದೇ 12 ಅಡಿ ಎತ್ತರದ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದಿದೆ’ ಎಂಬುದಾಗಿ ತಜ್ಞರು ಅಭಿಪ್ರಾಯಪಟ್ಟಿದ್ದಾರೆಂದು ಮೂಲಗಳು ತಿಳಿಸಿವೆ.

‘ಹಂತ ಹಂತವಾಗಿ ಕಬ್ಬಿಣದ ಜೊತೆ ಕಾಂಕ್ರೀಟ್ ಹಾಕುತ್ತ, ಪಿಲ್ಲರ್ ನಿರ್ಮಿಸಬೇಕು. ಇದಕ್ಕಾಗಿ ಕೆಲ ದಿನಗಳನ್ನು ಮೀಸಲಿಡಬೇಕು. ಆದರೆ, ಕಡಿಮೆ ಸಮಯದಲ್ಲಿ ಪಿಲ್ಲರ್ ನಿರ್ಮಿಸಬೇಕೆಂಬ ಅವಸರದಲ್ಲಿ ಎಂಜಿನಿಯರ್‌ಗಳು ಅವೈಜ್ಞಾನಿಕ ಕಾಮಗಾರಿ ನಡೆಸಿರುವುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ’ ಎಂದು ತಿಳಿಸಿವೆ. ಗೋವಿಂದಪುರ ಠಾಣೆ ಪೊಲೀಸರಿಗೆ ಸದ್ಯದಲ್ಲೇ ವರದಿ ಸಲ್ಲಿಸುವ ಸಾಧ್ಯತೆ ಇದೆ.

ಹೆಣ್ಣೂರು ಕ್ರಾಸ್ ಬಳಿ ಜ. 10ರಂದು ಸಂಭವಿಸಿದ್ದ ಅವಘಡದಲ್ಲಿ ತೇಜಸ್ವಿನಿ ಸುಲಾಖೆ (28) ಹಾಗೂ ಎರಡೂವರೆ ವರ್ಷದ ವಿಹಾನ್ ಮೃತಪಟ್ಟಿದ್ದರು.

ನಿರ್ಮಾಣ ಹಂತದ ಫಿಲ್ಲರ್ ತೆರವು: ವರದಿ ಅಂಶಗಳು ಗೊತ್ತಾಗುತ್ತಿದ್ದಂತೆ ಕಾರ್ಯಾಚರಣೆ ಆರಂಭಿಸಿರುವ ಪೊಲೀಸರು, ನಿರ್ಮಾಣ ಹಂತದ ಮೆಟ್ರೊ ಕಾಮಗಾರಿ ಸ್ಥಳದಲ್ಲಿರುವ 12 ಅಡಿ ಹಾಗೂ ಅದಕ್ಕಿಂತ ಎತ್ತರದ ಪಿಲ್ಲರ್‌ಗಳನ್ನು ಗುರುತಿಸುತ್ತಿದ್ದಾರೆ. ಅಂಥ ಪಿಲ್ಲರ್‌ಗಳನ್ನು ಎಂಜಿನಿಯರ್‌ಗಳ ಸಮ್ಮುಖದಲ್ಲಿ ತೆರವು ಸಹ ಮಾಡುತ್ತಿದ್ದಾರೆ.


ಹೆಣ್ಣೂರು ಕ್ರಾಸ್ ಬಳಿ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಕಬ್ಬಿಣದ ಚೌಕಟ್ಟು ಉರುಳಿ ಬಿದ್ದ ಸ್ಥಳಕ್ಕೆ ಜ. 13ರಂದು ಭೇಟಿ ನೀಡಿದ್ದ ಐಐಟಿ– ಹೈದರಾಬಾದ್ ತಜ್ಞರು ಅವಶೇಷಗಳನ್ನು ವೀಕ್ಷಿಸಿದ್ದರು – ಪ್ರಜಾವಾಣಿ ಚಿತ್ರ

‘ಅಗತ್ಯಬಿದ್ದರೆ ಮತ್ತೊಮ್ಮೆ ಮೆಟ್ರೊ ಎಂ.ಡಿ ವಿಚಾರಣೆ’

‘ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್‌ನ ಕಬ್ಬಿಣದ ಚೌಕಟ್ಟು ಉರುಳಿಬೀಳಲು ಎಂಜಿನಿಯರ್‌ಗಳ ನಿರ್ಲಕ್ಷ್ಯವೇ ಕಾರಣವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ಇದಕ್ಕೆ ಸಂಬಂಧಪಟ್ಟಂತೆ ಪುರಾವೆಗಳನ್ನು ಸಂಗ್ರಹಿಸಲಾಗುತ್ತಿದ್ದು, ಅಗತ್ಯಬಿದ್ದರೆ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಅಂಜುಂ ಪರ್ವೇಜ್ ಅವರನ್ನು ಮತ್ತೊಮ್ಮೆ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶನಿವಾರ ವಿಚಾರಣೆಗೆ ಹಾಜರಾಗಿದ್ದ ಅಂಜುಂ ಅವರಿಂದ ಕೆಲ ಪ್ರಶ್ನೆಗಳಿಗೆ ಉತ್ತರ ಪಡೆಯಲಾಗಿದೆ. ಕಾಮಗಾರಿಗೆ ಸಂಬಂಧಪಟ್ಟಂತೆ ಕೆಲ ದಾಖಲೆಗಳನ್ನು ಹಾಜರುಪಡಿಸುವಂತೆ ತಿಳಿಸಲಾಗಿದೆ’ ಎಂದೂ ತಿಳಿಸಿವೆ.

‘ಲಂಚದ ಆಸೆಗಾಗಿ ಒಪ್ಪಿಗೆ’

‘ನಿರ್ಮಾಣ ಹಂತದ ಪಿಲ್ಲರ್ ಸ್ಥಳದಲ್ಲಿ ಪರಿಶೀಲನೆ ನಡೆಸಿದ್ದ ಎಂಜಿನಿಯರ್‌ಗಳು, ಅವೈಜ್ಞಾನಿಕ ಕಾಮಗಾರಿ ಎಂಬುದು ಗೊತ್ತಿದ್ದರೂ ಸುಮ್ಮನಾಗಿದ್ದರು. ಲಂಚದ ಆಸೆಗಾಗಿ ಅವರು, ಕಾಮಗಾರಿ ಮುಂದುವರಿಸಲು ಒಪ್ಪಿಗೆ ನೀಡಿದ್ದರೆಂಬ ಮಾಹಿತಿ ಇದೆ. ಈ ಆಯಾಮದಲ್ಲೂ ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸುದ್ದಿ 2 ನಿಮಿಷ

ದಯಾನಂದ ಸಾಗರ್ ಕಾಲೇಜಿಗೆ ನೀರು ನಿರ್ವಹಣೆ ಪ್ರಶಸ್ತಿ

ಬೆಂಗಳೂರು: ಇಂಡಿಯನ್ ವಾಟರ್ ವರ್ಕ್ಸ್ ಅಸೋಸಿಯೇಷನ್ ಪುಣೆಯಲ್ಲಿ ಹಮ್ಮಿಕೊಂಡಿದ್ದ 55ನೇ ವಾರ್ಷಿಕ ಸಮ್ಮೇಳನದಲ್ಲಿ ದಯಾನಂದಸಾಗರ್ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ನೀರು ನಿರ್ವಹಣಾ ವಿಭಾಗದಲ್ಲಿ ಪ್ರಶಸ್ತಿ ಪಡೆದಿದ್ದಾರೆ.

ಈ ಪ್ರಶಸ್ತಿಗೆ 36 ಕೇಂದ್ರಗಳಿಂದ 81 ನಾಮನಿರ್ದೇಶನಗಳು ಬಂದಿದ್ದವು. ಸಂಸ್ಥೆಯು 2019ರಿಂದ ನೀರು ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಶಸ್ತಿಗಳನ್ನು ನೀಡುತ್ತಿದೆ. 20ರಿಂದ 25 ವರ್ಷದೊಳಗಿನವರು ಈ ಪ್ರಶಸ್ತಿಗೆ ಅರ್ಹರಾಗಿದ್ದರು. ದಯಾನಂದಸಾಗರ್ ಎಂಜಿನಿಯರಿಂಗ್ ಕಾಲೇಜು ವಿದ್ಯಾರ್ಥಿಗಳು ಸತತ ಮೂರನೇ ಬಾರಿ ಈ ಪ್ರಶಸ್ತಿ ಪಡೆದಿದ್ದಾರೆ.

‘ನಮ್ಮ ವಿದ್ಯಾರ್ಥಿಗಳು ಈ ಪ್ರಶಸ್ತಿ ಪಡೆದಿರುವುದು ಹೆಮ್ಮೆಯನ್ನುಂಟು ಮಾಡಿದೆ’ ಎಂದು ಕಾಲೇಜಿನ ಉಪ ಪ್ರಾಂಶುಪಾಲ ಡಾ.ಎಚ್.ಕೆ. ರಾಮರಾಜು ಸಂತಸ ವ್ಯಕ್ತಪಡಿಸಿದ್ದಾರೆ.

‘ಬಹುತ್ವ ಸಂಸ್ಕೃತಿಯೇ ಜೀವಾಳ’



ಬೆಂಗಳೂರು: ‘ವಿವಿಧತೆಯಲ್ಲಿ ಏಕತೆ, ಬಹು ಸಂಸ್ಕೃತಿ, ಸಾಮರಸ್ಯ, ಪರಧರ್ಮ ಸಹಿಷ್ಣುತೆ ನಮ್ಮ ದೇಶದ ಅಂತಃಸತ್ವ. ಶತಮಾನಗಳಿಂದ ಭಾರತವು ಜಗತ್ತಿಗೆ ಮಾದರಿಯಾಗಿ ನಿಲ್ಲಲು ಇಲ್ಲಿನ ಬಹು ಸಂಸ್ಕೃತಿಯೇ ಮುಖ್ಯ ಕಾರಣ’ ಎಂದು ವಚನ ಸಾಹಿತಿ ವೀರಣ್ಣ ಕಲಕೇರಿ ಹೇಳಿದರು.

ಯಲಹಂಕದ ಉಪನಗರದ ಸಿಇಎಸ್ ಪ್ಯಾಷನ್ ಸಂಸ್ಥೆಯಲ್ಲಿ ನಡೆದ ದೂರದರ್ಶನ ನಿವೃತ್ತ ನಿರ್ದೇಶಕ ಹಾಗೂ ರಾಜ್ಯೋತ್ಸವ ಪುರಸ್ಕೃತ ಡಾ.ಜಿ.ಎಂ.ಶಿರಹಟ್ಟಿ ಅವರ ಸತ್ಕಾರ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಭಾಷೆ, ಧರ್ಮ,ಕಲೆ, ಬದುಕು, ಆಹಾರ, ಉಡುಗೆ, ತೊಡಗೆ ಹೀಗೆ ಪ್ರತಿಯೊಂದರಲ್ಲೂ ಬಹು ಸಂಸ್ಕೃತಿ ಕಾಣುತ್ತೇವೆ. ಈ ವೈವಿಧ್ಯದ ನಡುವೆಯೂ ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ಸಾಮರಸ್ಯದಿಂದ ಬದುಕುತ್ತಿದ್ದೇವೆ. ಪ್ರಭುತ್ವ ಯಾವುದಿದ್ದರೇನು ಅದರ ಪ್ರಗತಿಗೆ ಅಲ್ಲಿಯ ಜನರ ವೈವಿಧ್ಯಮಯ ಜೀವನವೇ ಕಾರಣವಾಗುತ್ತದೆ’ ಎಂದು ಅಭಿಪ್ರಾಯಪಟ್ಟರು.

ಆಕಾಶವಾಣಿ, ದೂರದರ್ಶನ, ಕಲೆ, ಸಾಹಿತ್ಯ, ಸಾಂಸ್ಕೃತಿಕ, ಮಾಧ್ಯಮ ಮತ್ತು ಸಾಹಿತ್ಯ ಕ್ಷೇತ್ರ ಸೇರಿದಂತೆ ಸಮಾಜ ಮತ್ತು ಬಹುತ್ವ ಸಂಸ್ಕೃತಿಗೆ ಜಿ.ಎಂ. ಶಿರಹಟ್ಟಿ ಅವರ ಕೊಡುಗೆ ಅನನ್ಯ ಎಂದು ಕಲಕೇರಿ ಶ್ಲಾಘಿಸಿದರು.

ಡಾ. ದೇವಿಂದ್ರನ್, ಶಿವರಾಜ ಹೆಳವರ, ಬಸವರಾಜ ಖಾನಾಪೂರ ಹಾಗೂ ಸಂಸ್ಥೆ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಚಾಮರಾಜಪೇಟೆ ಈದ್ಗಾ ಮೈದಾನದಲ್ಲಿ ಗಣರಾಜ್ಯೋತ್ಸವ

ಬೆಂಗಳೂರು: ಚಾಮರಾಜಪೇಟೆ ಆಟದ ಮೈದಾನದಲ್ಲಿ (ಈದ್ಗಾ) ಗಣರಾಜ್ಯೋತ್ಸವ ಆಚರಿಸಲು ಸರ್ಕಾರ ಅನುಮತಿ ನೀಡಿದೆ.

ಸರ್ವೆ ನಂ. 40 ಗುಟ್ಟಹಳ್ಳಿ ಚಾಮರಾಜಪೇಟೆ ಮೈದಾನದಲ್ಲಿ ಜ.26ರಂದು ಗಣರಾಜ್ಯೋತ್ಸವ ಆಚರಿಸಲು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಅವರೊಂದಿಗೆ ಚರ್ಚಿಸಿ ಅನುಮತಿ ನೀಡಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

ಸರ್ಕಾರದ ವತಿಯಿಂದಲೇ ಕಾರ್ಯಕ್ರಮ ನಡೆಯಲಿದ್ದು, ಉಪವಿಭಾಗಾಧಿಕಾರಿ ಧ್ವಜಾರೋಹಣ ಮಾಡಬೇಕೆಂದು ಸೂಚಿಸಲಾಗಿದೆ ಎಂದರು. ‘ಚಾಮರಾಜಪೇಟೆ ಆಟದ ಮೈದಾನದಲ್ಲಿ ಗಣರಾಜ್ಯೋತ್ಸವ ಆಚರಣೆಗೆ ಅವಕಾಶ ನೀಡಬೇಕೆಂದು ಎರಡು ಸಂಘಟನೆಗಳು ಮನವಿ ಸಲ್ಲಿಸಿದ್ದವು. ಈ ಸಂಬಂಧ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಯವರಿಗೆ ಪತ್ರ ಬರೆಯಲಾಗಿತ್ತು’ ಎಂದು ನಗರ ಜಿಲ್ಲಾಧಿಕಾರಿ ದಯಾನಂದ ತಿಳಿಸಿದರು.

‘ಆಟದ ಮೈದಾನದಲ್ಲಿ ಗಣರಾಜ್ಯೋತ್ಸವ ಆಚರಣೆಗೆ ಅವಕಾಶ ನೀಡಬೇಕು ಎಂದು ಜ.31ರಂದು ಚಾಮರಾಜಪೇಟೆ ನಾಗರಿಕರ ಒಕ್ಕೂಟದ ವತಿಯಿಂದ ಸಂಸದ ಪಿ.ಸಿ. ಮೋಹನ್ ಅವರು ಜಿಲ್ಲಾಧಿಕಾರಿಯವರಿಗೆ ಮನವಿ ಸಲ್ಲಿಸಿದ್ದರು’ ಎಂದು ಒಕ್ಕೂಟದ ಶಶಾಂಕ್ ಹೇಳಿದರು.

ಮೈದಾನದ ಮಾಲೀಕತ್ವದ ಬಗ್ಗೆ ವಕ್ಫ್ ಹಾಗೂ ಬಿಬಿಎಂಪಿ ನಡುವೆ ಗೊಂದಲ ಉಂಟಾಗಿತ್ತು. ಹೈಕೋರ್ಟ್ ಕಂದಾಯ ಇಲಾಖೆಗೆ ಮಾಲೀಕತ್ವವನ್ನು ನೀಡಿತ್ತು. ನಂತರ, ಕಳೆದ ವರ್ಷ ಸ್ವಾತಂತ್ರ್ಯ ದಿನಾಚರಣೆಯನ್ನು ಈ ಮೈದಾನದಲ್ಲಿ ಆಚರಿಸಲಾಗಿತ್ತು. ನಂತರ ಗಣೇಶ ಉತ್ಸವಕ್ಕೆ ಅವಕಾಶ ನೀಡಬೇಕೆಂದು ವಿವಿಧ ಸಂಘಟನೆಗಳು ಒತ್ತಾಯಿಸಿದ್ದವು. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿತ್ತು. ಯಾವುದೇ ಉತ್ಸವಕ್ಕೆ ಅವಕಾಶ ನೀಡಿರಲಿಲ್ಲ.

ಮೆಟ್ರೊ ಬ್ಯಾರಿಕೇಡ್‌ನಿಂದ ಕಾರು ಜಖಂ

ಶೇಕಡ 10 ಭಾಗ ರಸ್ತೆಗೆ ವಾಲಿದ್ದ ಬ್ಯಾರಿಕೇಡ್‌ನಿಂದ ಅಪಘಾತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡನೆಕ್ಕುಂದಿ ಜಂಕ್ಷನ್‌ನಲ್ಲಿ ಮೆಟ್ರೊ ನಿರ್ಮಾಣ ಕಾಮಗಾರಿ ಸ್ಥಳದಲ್ಲಿ ನಿಲ್ಲಿಸಿದ್ದ ಬ್ಯಾರಿಕೇಡ್‌ನಿಂದ ಅಪಘಾತ ಸಂಭವಿಸಿದ್ದು, ಕಾರು ಜಖಂಗೊಂಡಿದೆ. ಕಾರಿನಲ್ಲಿದ್ದ ಇಬ್ಬರು ಪ್ರಯಾಣಿಕರು ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ.


‘ಭಾನುವಾರ ಮಧ್ಯಾಹ್ನ 3.30ರ ಸುಮಾರಿಗೆ ಅಪಘಾತ ಸಂಭವಿಸಿರುವುದಾಗಿ ಗೊತ್ತಾಗಿದೆ. ಅಪಘಾತದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ. ಆದರೆ, ಯಾರೊಬ್ಬರೂ ದೂರು ನೀಡಿಲ್ಲ’ ಎಂದು ಎಚ್‌ಎಎಲ್ ಸಂಚಾರ ಠಾಣೆ ಪೊಲೀಸರು ಹೇಳಿದರು.

ರಸ್ತೆಗೆ ವಾಲಿದ್ದ ಬ್ಯಾರಿಕೇಡ್: ‘ದೊಡ್ಡನೆಕ್ಕುಂದಿ ಜಂಕ್ಷನ್‌ನಿಂದ ಮಹದೇವಪುರ ಮುಖ್ಯರಸ್ತೆ ಮಧ್ಯದಲ್ಲಿ ಮೆಟ್ರೊ ನಿರ್ಮಾಣ ಕಾಮಗಾರಿ ನಡೆಯುತ್ತಿದೆ.

ಕಾಮಗಾರಿ ನಡೆಯುವ ಸ್ಥಳದ ಎರಡು ಬದಿಯಲ್ಲಿ ಕಬ್ಬಿಣದ ಬ್ಯಾರಿಕೇಡ್‌ಗಳನ್ನು ಸಾಲಾಗಿ ನಿಲ್ಲಿಸಲಾಗಿದೆ’ ಎಂದು ಸ್ಥಳೀಯರೊಬ್ಬರು ಹೇಳಿದರು.

‘ಬ್ಯಾರಿಕೇಡ್‌ವೊಂದರ ಶೇ 10ರಷ್ಟು ಭಾಗ ರಸ್ತೆಗೆ ವಾಲಿತ್ತು. ಇದೇ ಮಾರ್ಗದಲ್ಲಿ ವೇಗವಾಗಿ ಹೊರಟಿದ್ದ ಕಾರು, ಬ್ಯಾರಿಕೇಡ್‌ನ ವಾಲಿದ್ದ ಭಾಗಕ್ಕೆ ಡಿಕ್ಕಿ ಹೊಡೆದಿತ್ತು. ಇದರಿಂದಾಗಿ ಬ್ಯಾರಿಕೇಡ್ ಸಂಪೂರ್ಣವಾಗಿ ಕಿತ್ತು ಬಂದು ಕಾರಿಗೆ ಅಪ್ಪಳಿಸಿತ್ತು. ಕಾರು ಭಾಗಶಃ ಜಖಂಗೊಂಡಿತು’ ಎಂದು ತಿಳಿಸಿದರು.

‘ಕಾರಿನಲ್ಲಿ ಇಬ್ಬರು ಪ್ರಯಾಣಿಕರಿದ್ದರು. ಅವರಿಗೆ ಯಾವುದೇ ಗಾಯಗಳಾಗಿಲ್ಲ. ಕಾರಿನಿಂದ ಇಳಿದ ಅವರು, ಸ್ಥಳದಲ್ಲಿದ್ದ ಮೆಟ್ರೊ ಕಾಮಗಾರಿ ಕಾರ್ಮಿಕರನ್ನು ಪ್ರಶ್ನಿಸಿದ್ದರು. ಮೆಟ್ರೊ ಎಂಜಿನಿಯರ್ ಸಹ ಸ್ಥಳಕ್ಕೆ ಬಂದು ಪರಿಶೀಲಿಸಿದರು’ ಎಂದು ಹೇಳಿದರು.


ಅಪಘಾತದಲ್ಲಿ ಜಖಂಗೊಂಡ ಕಾರಿನ ಮುಂಭಾಗ

‘ಕಾರು ದುರಸ್ತಿ ಭರವಸೆ, ದೂರು ನೀಡದ ಚಾಲಕ’

‘ಬ್ಯಾರಿಕೇಡ್ ರಸ್ತೆಗೆ ವಾಲಿದ್ದರಿಂದಲೇ ಅಪಘಾತ ಸಂಭವಿಸಿದೆ. ಘಟನಾ ಸ್ಥಳದಲ್ಲಿದ್ದ ಕೆಲ ಅಧಿಕಾರಿಗಳು, ಕಾರು ದುರಸ್ತಿ ಮಾಡಿಸಿಕೊಡುವುದಾಗಿ ಚಾಲಕನಿಗೆ ಭರವಸೆ ನೀಡಿದರು. ಅದೇ ಕಾರಣಕ್ಕೆ ಚಾಲಕ, ಪೊಲೀಸರಿಗೆ ದೂರು ನೀಡದೇ ಸ್ಥಳದಲ್ಲಿದ್ದ ಕಾರು ತೆಗೆದುಕೊಂಡು ಹೋದರು’ ಎಂದು ಸ್ಥಳೀಯರೊಬ್ಬರು ತಿಳಿಸಿದರು. ಘಟನೆ ಬಗ್ಗೆ ಪ್ರತಿಕ್ರಿಯಿಸಿದ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್, ‘ಬ್ಯಾರಿಕೇಡ್ ಬಿದ್ದಿಲ್ಲ. ಚಾಲಕನೇ ವೇಗವಾಗಿ ಕಾರು ಚಲಾಯಿಸಿ ಬ್ಯಾರಿಕೇಡ್‌ಗೆ ಗುದ್ದಿಸಿದ್ದಾರೆ. ಇದರಿಂದಾಗಿ ಕಾರು ಜಖಂಗೊಂಡಿದೆ’ ಎಂದರು.


ಬಿಎಂಶ್ರೀ ಪ್ರತಿಷ್ಠಾನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಬಿ.ಎ.ವಿವೇಕ ರೈ ಅವರಿಗೆ ‘ಶ್ರೀಸಾಹಿತ್ಯ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ಎಡದಿಂದ) ಪ್ರತಿಷ್ಠಾನದ ಗೌರವ ಕೋಶಾಧಿಕಾರಿ ಪ್ರಭಾಕರ ಬೆಲವಾಡಿ, ಕಮಲಿನಿ ಬಾಲುರಾವ್, ನಿಕಟಪೂರ್ವ ಅಧ್ಯಕ್ಷ ಆರ್.ಲಕ್ಷ್ಮೀನಾರಾಯಣ, ಗೌರವ ಅಧ್ಯಕ್ಷ ಪಿ.ವಿ. ನಾರಾಯಣ, ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಸಾಹಿತಿ ಹಂ.ಪ. ನಾಗರಾಜಯ್ಯ, ಪ್ರತಿಷ್ಠಾನದ ಕಾರ್ಯದರ್ಶಿ ಶಾಂತರಾಜು ಇದ್ದರು –ಪ್ರಜಾವಾಣಿ ಚಿತ್ರ

‘ವಿದ್ವತ್ತಿನ ಕ್ಷೇತ್ರದಲ್ಲಿ ಬರಗಾಲ’

ಬೆಂಗಳೂರು: ‘ವಿದ್ವತ್ತಿನ ಕ್ಷೇತ್ರದಲ್ಲಿ ನಮಗಿಂದು ಬರಗಾಲ ಬಂದಿದೆ. ಮತ್ತೆ ಅದು ಸುಗಮ ಸ್ಥಿತಿಗೆ ಬರಬೇಕಾದರೆ ಸೃಜನಶೀಲ ವಿದ್ವಾಂಸರ ಅಗತ್ಯವಿದೆ’ ಎಂದು ಸಾಹಿತಿ ಹಂ.ಪ ನಾಗರಾಜಯ್ಯ ಹೇಳಿದರು.

ನಗರದ ಬಿ.ಎಂ.ಶ್ರೀ ಪ್ರತಿಷ್ಠಾನದಲ್ಲಿ ಭಾನುವಾರ ಆಯೋಜಿಸಿದ್ದ ‘ಶ್ರೀಸಾಹಿತ್ಯ’ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಾನಪದ ವಿದ್ವಾಂಸ ಬಿ.ಎ. ವಿವೇಕ ರೈ ಅವರಿಗೆ ₹1 ಲಕ್ಷ ನಗದು ಮತ್ತು ಫಲಕ ಒಳಗೊಂಡ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

‘ಸೃಜನಶೀಲತೆ ಮತ್ತು ವಿದ್ವತ್ತು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಇವೆರಡನ್ನು ಜೊತೆಗೆ ತೆಗೆದುಕೊಂಡು ಹೋಗುವಂತಹ ಕಾರ್ಯ ವಿವೇಕ ರೈ ಮಾಡುತ್ತಿದ್ದಾರೆ’ ಎಂದರು.

ಬಿ.ಎ. ವಿವೇಕ ರೈ, ‘ಕನ್ನಡವನ್ನು ಪ್ರೀತಿಸುವುದೆಂದರೆ ಕನ್ನಡದ ಜನರನ್ನು ಮತ್ತು ಅವರ ಮನೋಧರ್ಮವನ್ನು ಪ್ರೀತಿಸುವುದು ಎಂಬ ಬಿ.ಎಂ. ಶ್ರೀ ಅವರ ಮಾತು ಮತ್ತು ಕೆಲಸವನ್ನು ಇಂದಿನ ಕಾಲಕ್ಕೆ ಅಳವಡಿಸಿಕೊಂಡು ಭಾಷೆಯನ್ನು ಬೆಳೆಸಬೇಕು’ ಎಂದರು.

‘ಜಾತಿ, ಧರ್ಮ ಎನ್ನುವ ಮಾತುಗಳಿಲ್ಲದ ಕಾಲದಲ್ಲಿ ನಾವು ವಿಶ್ವವಿದ್ಯಾಲಯಗಳಲ್ಲಿ ಇದ್ದೆವು. ಅಲ್ಲಿ ಕೆಲಸ ಮತ್ತು ಸಾಧನೆಗೆ ಮಾತ್ರ ಆದ್ಯತೆ ನೀಡಲಾಗುತ್ತಿತ್ತು. ಅಂಥ ಕಾಲದಲ್ಲಿ ಶಿಕ್ಷಣ ಪಡೆದು ಆ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಿರುವುದು ನಮ್ಮ ಭಾಗ್ಯ. ಆದರೆ, ಈಗ ಪರಿಸ್ಥಿತಿ ಯಾವ ರೀತಿ ಇದೆಯೊ ಗೊತ್ತಿಲ್ಲ’ ಎಂದರು.

‘ನಾನು ಹಂಪಿ ಕನ್ನಡ ವಿ.ವಿ ಕುಲಪತಿಯಾಗಿದ್ದ ಕಾಲದಲ್ಲಿ ಉಡುಪಿಯ ಗೋವಿಂದ ಪೈ, ಹಾ.ಮಾ. ನಾಯಕ, ಬಿ.ಎಂ.ಶ್ರೀ. ಮತ್ತು ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರಗಳಿಗೆ ಚಾಲನೆ ನೀಡಲಾಗಿತ್ತು. ಅವು ಅದ್ಭುತವಾಗಿ ಕೆಲಸ ಮಾಡುತ್ತಿವೆ. ಎಲ್ಲಿ ವಿಶ್ವವಿದ್ಯಾಲಯಗಳು ಸೋಲುತ್ತವೆಯೋ ಅಲ್ಲಿ ಈ ಕೇಂದ್ರಗಳು ಗೆಲ್ಲುತ್ತವೆ’ ಎಂದರು. ಬಿ.ಆರ್. ರವೀಂದ್ರನಾಥ ಸಂಪಾದಿಸಿದ ‘ಶಾ. ಬಾಲುರಾವ್ ನೆನಪುಗಳು’ ಪುಸ್ತಕ ಬಿಡುಗಡೆಗೊಂಡಿತು.

ಅಖಿಲ ಭಾರತ ಕವಯಿತ್ರಿಯರ ಸಮ್ಮೇಳನ 28ರಿಂದ

ಬೆಳಗಾವಿ: ಇಲ್ಲಿನ ಶಿವಬಸವ ನಗರದ ಡಾ.ಎಸ್.ಜಿ.ಬಾಳೇಕುಂದ್ರಿ ತಾಂತ್ರಿಕ ಸಂಸ್ಥೆಯ ಸಭಾಂಗಣದಲ್ಲಿ ಜ.28ರಿಂದ 30ರವರೆಗೆ ಅಖಿಲ ಭಾರತ ಕವಯಿತ್ರಿಯರ ಸಮ್ಮೇಳನ ನಡೆಯಲಿದೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಸಂಚಾಲಕಿ ಜ್ಯೋತಿ ಬಾದಾಮಿ, ‘28ರಂದು ಬೆಳಿಗ್ಗೆ 10.30ಕ್ಕೆ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಉದ್ಘಾಟಿಸುವರು. ಸಂಸದೆ ಮಂಗಲಾ ಅಂಗಡಿ ಅಧ್ಯಕ್ಷತೆ ವಹಿಸುವರು. ಅತಿಥಿಯಾಗಿ ಮಾಜಿ ಸಚಿವೆ ಡಾ.ಲೀಲಾದೇವಿ ಪ್ರಸಾದ ಪಾಲ್ಗೊಳ್ಳಲಿದ್ದು, ನಾಗನೂರು ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು’ ಎಂದರು.

‘ಸ್ವಾಗತ ಸಮಿತಿ ಅಧ್ಯಕ್ಷೆ ಆಶಾ ಕೋರೆ ನೇತೃತ್ವದಲ್ಲಿ ಸಮ್ಮೇಳನ ನಡೆಯಲಿದ್ದು, ಕರ್ನಾಟಕ ಸೇರಿದಂತೆ 19 ರಾಜ್ಯಗಳ ಕವಯಿತ್ರಿಯರು, ಕಲಾವಿದರು ಸೇರಿ 350 ಮಂದಿ ಭಾಗವಹಿಸುವರು. ತಮ್ಮ ನಾಡಿನ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಅನಾವರಣಗೊಳಿಸುವರು. 18 ಗೋಷ್ಠಿಗಳು ನಡೆಯಲಿದ್ದು, ವಿವಿಧ ರಂಗಗಳಲ್ಲಿ ಸಾಧನೆಗೈದ 80 ಸಾಧಕಿಯರನ್ನು ಸನ್ಮಾನಿಸಲಾಗುವುದು’ ಎಂದರು.

‘2012ರಲ್ಲಿ ಹುಬ್ಬಳ್ಳಿಯಲ್ಲಿ ಕವಯಿತ್ರಿಯರ ಸಮ್ಮೇಳನ ನಡೆದಿತ್ತು. ದಶಕದ ನಂತರ ರಾಜ್ಯಕ್ಕೆ ಮತ್ತೆ ಆತಿಥ್ಯ ವಹಿಸುವ ಅವಕಾಶ ಸಿಕ್ಕಿದೆ’ ಎಂದರು.

ಬೆಂಗಳೂರು ದಕ್ಷಿಣ ಭಾಗದಲ್ಲಿ ಹಾಲು ಪೂರೈಕೆಯಲ್ಲಿ ಕೊಂಚ ವ್ಯತ್ಯಯ

‘ನಂದಿನಿ’ ವಾಹನ ಮಾಲೀಕರ ಮುಷ್ಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ಹಾಲು ಸರಬರಾಜು ಮಾಡುವ ವಾಹನಗಳ ಮಾಲೀಕರು ದಿಢೀರ್ ಮುಷ್ಕರ ಆರಂಭಿಸಿದ್ದಾರೆ. ಇದರಿಂದಾಗಿ ಬೆಂಗಳೂರು ದಕ್ಷಿಣ ಭಾಗದಲ್ಲಿ ಹಾಲು, ಮೊಸರು ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿದೆ.

ಹಾಲಿನ ಪ್ಯಾಕೆಟ್‌ಗಳನ್ನು ಸಾಗಿಸುವ 300ಕ್ಕೂ ಹೆಚ್ಚು ವಾಹನಗಳನ್ನು ಬಮೂಲ್ ಬಾಡಿಗೆಗೆ ಪಡೆದಿದ್ದು, ಕೆಲ ವಾಹನಗಳಿಗೆ ಟ್ರಿಪ್ ಲೆಕ್ಕದಲ್ಲಿ, ಮತ್ತೆ ಕೆಲವು ವಾಹನಗಳಿಗೆ ಕಿಲೋ ಮೀಟರ್ ಲೆಕ್ಕದಲ್ಲಿ ದರ ನಿಗದಿ ಮಾಡಿದೆ.

ಎರಡು ವರ್ಷಗಳ ಅವಧಿಗೆ ಟೆಂಡರ್ ಕರೆದು ವಾಹನಗಳ ಬಾಡಿಗೆ ನಿಗದಿ ಮಾಡಲಾಗುತ್ತದೆ. ಅವಧಿ ಮುಗಿದಿರುವುದರಿಂದ ಟೆಂಡರ್ ಕರೆಯಲು ಬಮೂಲ್ ಮುಂದಾಗಿದೆ. ಕೇಂದ್ರ ಸರ್ಕಾರದ ‘ಗುಜರಿ ನೀತಿ’ ಪ್ರಕಾರ 15 ವರ್ಷಗಳಷ್ಟು ಹಳೆಯದಾದ ವಾಹನಗಳನ್ನು ಬಾಡಿಗೆಗೆ ಪಡೆಯದಿರಲು ನಿರ್ಧರಿಸಿದೆ. ಇದಕ್ಕೆ ವಿರೋಧ ವ್ಯಕ್ತಪಡಿಸಿರುವ ವಾಹನಗಳ ಮಾಲೀಕರು, ಟೆಂಡರ್ ಕರೆಯದೆ ಬಾಡಿಗೆ ದರ ಹೆಚ್ಚಿಸಬೇಕು ಎಂದು ಒತ್ತಾಯಿಸಿದ್ದಾರೆ.

‘15 ವರ್ಷ ಮೀರಿದ ವಾಹನಗಳು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶ ನೀಡದಿದ್ದರೆ ಆ ಮಾಲೀಕರು ಏನು ಮಾಡಬೇಕು? ಇಲ್ಲ ಸಲ್ಲದ ನಿಯಮಗಳನ್ನು ಹೇರಿ ವಾಹನ ಮಾಲೀಕರಿಗೆ ತೊಂದರೆ ನೀಡಲು ಬಮೂಲ್ ಹೊರಟಿದೆ’ ಎಂದು ಲಾರಿ ಮಾಲೀಕರ ಸಂಘದ ಅಧ್ಯಕ್ಷ ಷಣ್ಮುಖಪ್ಪ ಅಸಮಾಧಾನ ವ್ಯಕ್ತಪಡಿಸಿದರು.

‘ಹಗಲು–ರಾತ್ರಿ ಎನ್ನದೆ ಹಾಲು ಸರಬರಾಜು ಮಾಡುವ ವಾಹನ ಚಾಲಕರಿಗೆ ಕೂರಲು ವ್ಯವಸ್ಥೆ ಇಲ್ಲ. ಈಗ ಅವರ ಹೊಟ್ಟೆ ಮೇಲೆ ಹೊಡೆಯಲು ಬಮೂಲ್ ಹೊರಟಿದೆ. ಮುಷ್ಕರ ನಡೆಸುತ್ತಿರುವ ಲಾರಿ ಮಾಲೀಕರನ್ನು ಕರೆದು ಸಮಸ್ಯೆ ಕೇಳುವ ಸೌಜನ್ಯವನ್ನೂ ಆಡಳಿತ ಮಂಡಳಿ ತೋರಿಸುತ್ತಿಲ್ಲ. ಇದೇ ಧೋರಣೆ ಮುಂದುವರಿದರೆ ಹಳ್ಳಿಗಳಿಂದ ಹಾಲು ತರುವ ವಾಹನಗಳು ಮತ್ತು ಹಾಲಿನ ಟ್ಯಾಂಕರ್‌ಗಳ ಸೇವೆಯನ್ನೂ ಸ್ಥಗಿತಗೊಳಿಸಲಾಗುವುದು’ ಎಂದು ಎಚ್ಚರಿಸಿದರು.


ಹಾಲು ವಾಹನಗಳನ್ನು ಬಮೂಲ್ ಆಡಳಿತ ಕಚೇರಿ ಮುಂದೆ ನಿಲ್ಲಿಸಿ ಮುಷ್ಕರ ನಡೆಸುತ್ತಿರುವುದು –ಪ್ರಜಾವಾಣಿ ಚಿತ್ರ

ದಕ್ಷಿಣ ಭಾಗಕ್ಕೆ ಬಮೂಲ್ ಹಾಲು

ರಾಜಾಜಿನಗರ, ಮಲ್ಲೇಶ್ವರದಿಂದ ಆರಂಭವಾಗಿ ಚಾಮರಾಜಪೇಟೆ, ಬಸವನಗುಡಿ, ಬನಶಂಕರಿ ಸೇರಿ ದಕ್ಷಿಣ ಭಾಗದ ಪ್ರದೇಶಗಳಿಗೆ ಬಮೂಲ್‌ನಿಂದ ಬರುವ ಹಾಲು ಸರಬರಾಜಾಗುತ್ತಿದೆ. ಈ ಪ್ರದೇಶಗಳಲ್ಲಿ ಮಾತ್ರ ಹಾಲು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಿದೆ. ಮಹಾಲಕ್ಷ್ಮಿಲೇಔಟ್, ಯಶವಂತಪುರ, ಪೀಣ್ಯ ಭಾಗಕ್ಕೆ ತುಮಕೂರು ಡೇರಿಯಿಂದ, ಯಲಹಂಕ, ಹೆಬ್ಬಾಳ ಸುತ್ತಮುತ್ತಲ ಪ್ರದೇಶಕ್ಕೆ ಮದರ್ ಡೇರಿಯಿಂದ, ವಿಜಯನಗರ, ರಾಜರಾಜೇಶ್ವರಿನಗರ, ಕೆಂಗೇರಿ ಸುತ್ತಮುತ್ತಲ ಭಾಗಕ್ಕೆ ಮಂಡ್ಯ ಡೇರಿಯಿಂದ, ಇಂದಿರಾನಗರ, ಕೆ.ಆರ್.ಪುರ, ಮಹದೇವಪುರ, ವೈಟ್‌ಫೀಲ್ಡ್ ಭಾಗಕ್ಕೆ ಕೋಲಾರ ಡೇರಿಯಿಂದ ಹಾಲು ಪೂರೈಕೆಯಾಗುತ್ತಿದೆ.

‘ಹಾಲು ಪೂರೈಕೆಯಲ್ಲಿ ವ್ಯತ್ಯಯವಿಲ್ಲ’

‘ಬೂತ್‌ಗಳಿಗೆ ಹಾಲು ಮತ್ತು ಮೊಸರು ಪೂರೈಕೆಯಲ್ಲಿ ಯಾವುದೇ ತೊಂದರೆಯಾಗಿಲ್ಲ’ ಎಂದು ಬಮೂಲ್ ಅಧ್ಯಕ್ಷ ನರಸಿಂಹಮೂರ್ತಿ ಹೇಳಿದರು. ವಿತರಕರೇ ವಾಹನಗಳನ್ನು ತಂದು ಹಾಲು ಪಡೆದುಕೊಂಡು ಹೋಗುತ್ತಿದ್ದಾರೆ. ಬೇರೆ ಡೇರಿಗಳಿಂದಲೂ ವಾಹನಗಳನ್ನು ತರಿಸಿ ಹಾಲು ಪೂರೈಸಲಾಗುತ್ತಿದೆ. ಬಮೂಲ್ ಪ್ರತಿನಿತ್ಯ 10 ಲಕ್ಷ ಲೀಟರ್ ಹಾಲು ಮಾರಾಟ ಮಾಡುತ್ತಿದ್ದು, ಕೇವಲ 25 ಸಾವಿರ ಲೀಟರ್ ಹಾಲು ಪೂರೈಕೆಯಲ್ಲಿ ವ್ಯತ್ಯಯವಾಗಿದೆ ಎಂದರು.

ಟೆಂಡರ್ ಕರೆಯಲು ವಾಹನಗಳ ಮಾಲೀಕರು ಒಪ್ಪುತ್ತಿಲ್ಲ. ಸರ್ಕಾರದ ನಿಯಮ ಮೀರಿ 15 ವರ್ಷ ಮೇಲ್ಪಟ್ಟ ವಾಹನಗಳನ್ನು ಪಡೆಯಲು ಅವಕಾಶ ಇಲ್ಲ. ಮುಷ್ಕರ ಮುಂದುವರಿದರೂ ತೊಂದರೆ ಇಲ್ಲ. ಹಾಲು ಪೂರೈಕೆಯಲ್ಲಿ ಯಾವುದೇ ವ್ಯತ್ಯಾಸ ಆಗುವುದಿಲ್ಲ. ಹಾಲು ಸರಬರಾಜಿಗೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲಾಗುತ್ತಿದೆ’ ಎಂದು ಹೇಳಿದರು.

ಅಕ್ರಮವಾಗಿ ನೆಲೆಸಿದ್ದ ಪಾಕ್ ಯುವತಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಪಾಳದ ಗಡಿ ಮೂಲಕ ದೇಶದೊಳಗೆ ಅಕ್ರಮವಾಗಿ ನುಸುಳಿ ಬೆಂಗಳೂರಿನಲ್ಲಿ ವಾಸವಿದ್ದ ಪಾಕಿಸ್ತಾನದ ಯುವತಿ ಇಕ್ರಾ ಜೀವನಿ (19) ಎಂಬುವವರನ್ನು ಬೆಳ್ಳಂದೂರು ಪೊಲೀಸರು ಬಂಧಿಸಿದ್ದಾರೆ.

‘ಪಾಕಿಸ್ತಾನದ ನಿವಾಸಿ ಇಕ್ರಾ, ಡೇಟಿಂಗ್ ಆ್ಯಪ್ ಮೂಲಕ ಉತ್ತರ ಪ್ರದೇಶದ ಮುಲಾಯಂ ಸಿಂಗ್ (25) ಅವರನ್ನು ಪರಿಚಯ ಮಾಡಿಕೊಂಡಿದ್ದರು. ಅವರಿಬ್ಬರ ನಡುವೆ ಪ್ರೀತಿ ಹುಟ್ಟಿಕೊಂಡಿತ್ತು. 2022ರಲ್ಲಿ ನೇಪಾಳದ ಗಡಿ ಮೂಲಕ ದೇಶದೊಳಗೆ ನುಸುಳಿದ್ದ ಇಕ್ರಾ, ಮುಲಾಯಂಸಿಂಗ್ ಅವರನ್ನು ಮದುವೆಯಾಗಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮುಲಾಯಂ ಸಿಂಗ್, ಕೆಲಸ ಹುಡುಕಿಕೊಂಡು 2022ರ ನವೆಂಬರ್‌ನಲ್ಲಿ ಬೆಂಗಳೂರಿಗೆ ಬಂದಿದ್ದರು. ತಮ್ಮ ಜೊತೆ ಇಕ್ರಾ ಅವರನ್ನು ಕರೆತಂದಿದ್ದರು. ಇವರಿಬ್ಬರು ಜುನ್ನಸಂದ್ರ ಅಯ್ಯಪ್ಪಸ್ವಾಮಿ ದೇವಸ್ಥಾನ ಬಳಿಯ ಮನೆಯೊಂದರಲ್ಲಿ ಬಾಡಿಗೆಗೆ ವಾಸವಿದ್ದರು’ ಎಂದು ತಿಳಿಸಿವೆ.

‘ಇಕ್ರಾ ಅವರು ಇತ್ತೀಚೆಗೆ ಪಾಕಿಸ್ತಾನದಲ್ಲಿರುವ ತಮ್ಮ ಪೋಷಕರನ್ನು ಸಂಪರ್ಕಿಸಲು ಯತ್ನಿಸಿದ್ದರು. ಈ ಸಂಗತಿಯನ್ನು ಪತ್ತೆ ಮಾಡಿದ್ದ ಕೇಂದ್ರ ಗುಪ್ತದಳದ ಸಿಬ್ಬಂದಿ, ಬೆಂಗಳೂರು ಪೊಲೀಸರಿಗೆ ಮಾಹಿತಿ ನೀಡಿದ್ದರು.’

‘ವಿಶೇಷ ತಂಡ ರಚಿಸಿ ಮನೆ ಮೇಲೆ ಶುಕ್ರವಾರ (ಜ. 20) ದಾಳಿ ಮಾಡಲಾಗಿತ್ತು. ಇಕ್ರಾ ಹಾಗೂ ಮುಲಾಯಂ ಸಿಂಗ್ ಅವರನ್ನು ವಿಚಾರಣೆ ನಡೆಸಲಾಯಿತು. ಅವಾಗಲೇ ಇಕ್ರಾ, ಪಾಕಿಸ್ತಾನ ನಿವಾಸಿ ಎಂಬುದು ತಿಳಿಯಿತು. ಬಳಿಕವೇ ಅವರನ್ನು ಬಂಧಿಸಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಂಧನದ ಬಗ್ಗೆ ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿಗೆ (ಎಫ್‌ಆರ್‌ಆರ್‌ಒ) ಮಾಹಿತಿ ನೀಡಲಾಗಿದೆ. ಸದ್ಯ ಇಕ್ರಾ ಅವರನ್ನು ಮಹಿಳಾ ಪುನರ್ವಸತಿ ಕೇಂದ್ರದಲ್ಲಿರಿಸಲಾಗಿದೆ. ಮುಲಾಯಂ ಸಿಂಗ್ ಅವರನ್ನೂ ವಶಕ್ಕೆ ಪಡೆಯಲಾಗಿದೆ’ ಎಂದು ತಿಳಿಸಿವೆ.

ಹೆಸರು ಬದಲಾಯಿಸಿ ಪಾಸ್‌ಪೋರ್ಟ್‌ಗೆ ಅರ್ಜಿ: ‘ರಾವಾ ಯಾದವ್ ಎಂಬುದಾಗಿ ಹೆಸರು ಬದಲಾಯಿಸಿಕೊಂಡಿದ್ದ ಇಕ್ರಾ, ಮುಲಾಯಂ ಸಿಂಗ್ ಪತ್ನಿಯೆಂದು ಆಧಾರ್ ಮಾಡಿಸಿಕೊಂಡಿದ್ದರು. ಅದನ್ನು ಬಳಸಿಕೊಂಡು ಪಾಸ್‌ಪೋರ್ಟ್‌ಗೂ ಅರ್ಜಿ ಸಲ್ಲಿಸಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚನೆ

ಕನ್ನಡದಲ್ಲಿ ಕಾನೂನು ನಿಘಂಟು, ತೀರ್ಪುಗಳ ತರ್ಜುಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಯಾಂಗದಲ್ಲಿ ಕನ್ನಡದ ಬಳಕೆಯನ್ನು ಹೆಚ್ಚಿಸುವುದಕ್ಕೆ ಪೂರಕವಾಗಿ ಕನ್ನಡದಲ್ಲಿ ಕಾನೂನು ನಿಘಂಟು ರೂಪಿಸುವುದು ಮತ್ತು ನ್ಯಾಯಾಲಯಗಳ ತೀರ್ಪು, ಆದೇಶಗಳನ್ನು ತರ್ಜುಮೆ ಮಾಡಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಯೋಜನೆ ರೂಪಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದರು.

ಕನ್ನಡದಲ್ಲಿ ತೀರ್ಮಾನ ನೀಡಿರುವ ನ್ಯಾಯಾಧೀಶರು, ವಾದ ಮಂಡಿಸಿರುವ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಹಾಗೂ ವಕೀಲರನ್ನು ಗೌರವಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ‘ನ್ಯಾಯಾಂಗದಲ್ಲಿ ಕನ್ನಡ’ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ನ್ಯಾಯಾಲಯಗಳಲ್ಲಿ ದೈನಂದಿನ ವ್ಯವಹಾರಗಳಲ್ಲಿ ಕನ್ನಡ ಬಳಸುವುದಕ್ಕೆ ಅನುಕೂಲವಾಗುವಂತೆ ಎಲ್ಲ ಪಾರಿಭಾಷಿಕ ಪದಗಳನ್ನು ಒಳಗೊಂಡ ನಿಘಂಟನ್ನು ರೂಪಿಸಬೇಕು. ಅಧೀನ ನ್ಯಾಯಾಲಯಗಳ ಆದೇಶಗಳು, ಹೈಕೋರ್ಟ್ ಹಾಗೂ ಸುಪ್ರೀಂಕೋರ್ಟ್ ತೀರ್ಪುಗಳನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಆನ್‌ಲೈನ್‌ನಲ್ಲಿ ಪ್ರಕಟಿಸಬೇಕು. ಇದರಿಂದ ಜನಸಾಮಾನ್ಯರಿಗೂ ನ್ಯಾಯಾಲಯಗಳ ತೀರ್ಮಾನಗಳನ್ನು ಅರಿಯಲು ಸಹಾಯಕವಾಗುತ್ತದೆ ಎಂದರು.

‘ನ್ಯಾಯಾಲಯದಲ್ಲಿ ಕನ್ನಡದಲ್ಲಿ ತೀರ್ಮಾನ ನೀಡುವುದು ಸುಲಭವಲ್ಲ. ಅದಕ್ಕೆ ಹಲವು ಮಿತಿಗಳಿವೆ. ಅವೆಲ್ಲವನ್ನೂ ಮೀರಿ ನ್ಯಾಯಾಧೀಶರು ಕನ್ನಡದಲ್ಲಿ ತೀರ್ಮಾನ ನೀಡಿರುವುದು ಸಾಧನೆಯೇ ಸರಿ. ಹೈಕೋರ್ಟ್‌ನಲ್ಲೂ ಇಂತಹ ಪ್ರಯತ್ನ ಆಗಬೇಕು’ ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಮಾಡಿದ ಹೈಕೋರ್ಟ್ ನ್ಯಾಯಮೂರ್ತಿ ಜಿ. ನರೇಂದರ್ ಮಾತನಾಡಿ, ‘2001ರ ಜನಗಣತಿಯ ಪ್ರಕಾರ, ದೇಶದಲ್ಲಿ 10,000 ಕ್ಕಿಂತ ಹೆಚ್ಚು ಜನರು ಬಳಸುವ 121 ಭಾಷೆಗಳಿವೆ. ಆದರೆ, ನ್ಯಾಯಾಲಯಗಳಲ್ಲಿ ಇಂಗ್ಲಿಷ್ ಭಾಷೆಯ ಬಳಕೆಯೇ ಹೆಚ್ಚು. ನ್ಯಾಯಾಂಗದಲ್ಲಿ ಕನ್ನಡವೂ ಸೇರಿದಂತೆ ಪ್ರಾದೇಶಿಕ ಭಾಷೆಗಳ ಬಳಕೆಗೆ ಉತ್ತೇಜನ ನೀಡಬೇಕು’ ಎಂದು ಹೇಳಿದರು.

ಸ್ಥಳೀಯ ಭಾಷೆಯಲ್ಲಿ ನ್ಯಾಯಾಲಯದ ವಿಚಾರಣೆ ನಡೆದು, ತೀರ್ಮಾನ ಪ್ರಕಟವಾದರೆ ಜನರಿಗೆ ಕಾನೂನಿನ ಅರಿವು ಮೂಡುತ್ತದೆ. ಕಾನೂನು ಉಲ್ಲಂಘನೆ ಮತ್ತು ಅಪರಾಧಗಳ ತಡೆಗೆ ಇದು ಸಹಕಾರಿಯಾಗುತ್ತದೆ. ಅಧೀನ ನ್ಯಾಯಾಲಯಗಳಲ್ಲಿ ಕನಿಷ್ಠ ಒಂದು ತೀರ್ಮಾನವನ್ನಾದರೂ ಕನ್ನಡದಲ್ಲಿ ನೀಡುವುದಕ್ಕೆ ಗುರಿ ನಿಗದಿಪಡಿಸಬೇಕು ಎಂದು ಸಲಹೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ. ಸುನಿಲ್ ಕುಮಾರ್ ಮಾತನಾಡಿ, ‘ಹಿಂದಿನ ಸರ್ಕಾರಗಳು ಕನ್ನಡದ ಉಳಿವಿನ ಕುರಿತು ಕೇವಲ ಮಾತನಾಡುತ್ತಿದ್ದವು. ಬೊಮ್ಮಾಯಿ ನೇತೃತ್ವದ ಸರ್ಕಾರ ಕಾನೂನು ರೂಪಿಸಿ, ಕನ್ನಡಕ್ಕೆ ಬಲ ತುಂಬುತ್ತಿದೆ’ ಎಂದರು.

ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಡಾ.ಎನ್ ಮಂಜುಳಾ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್ಲ ಉಪಸ್ಥಿತರಿದ್ದರು.


ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭಾನುವಾರ ನಡೆದ ಸಮಾರಂಭದಲ್ಲಿ ‘ನ್ಯಾಯಾಂಗದಲ್ಲಿ ಕನ್ನಡ’ ಪ್ರಶಸ್ತಿ ಸ್ವೀಕರಿಸಿದ ನ್ಯಾಯಾಧೀಶರಾದ ಯೋಗೇಶ್ (ಜೆಎಂಎಫ್ ನ್ಯಾಯಾಲಯ ನಾಗಮಂಗಲ), ರವೀಂದ್ರ ಕಟ್ಟಿಮನಿ (ಸಿಬಿಐ ವಿಶೇಷ ನ್ಯಾಯಾಲಯ ಬೆಂಗಳೂರು), ಆನಂದ್ ಎಸ್. ಕರಿಯಮ್ಮನವರ್ (ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯ ಬೆಂಗಳೂರು), ರೇಖಾ (ಎಂಎಂಟಿಸಿ ನ್ಯಾಯಾಲಯ ಬೆಂಗಳೂರು), ಅನಿಲ್ ಪ್ರಕಾಶ್ (ನೆಲಮಂಗಲ) ಮತ್ತು ನಾಗೇಶ್ (ಬೆಂಗಳೂರು ಗ್ರಾಮಾಂತರ) ಪರಸ್ಪರ ಅಭಿನಂದಿಸಿಕೊಂಡು ಸಂಭ್ರಮಿಸಿದರು – ಪ್ರಜಾವಾಣಿ ಚಿತ್ರ

120 ಮಂದಿಗೆ ಪ್ರಶಸ್ತಿ ಪ್ರದಾನ

ಕನ್ನಡದಲ್ಲಿ ತೀರ್ಮಾನ ನೀಡಿರುವ 90 ನ್ಯಾಯಾಧೀಶರು, ವಾದ ಮಂಡಿಸಿರುವ 12 ಪಬ್ಲಿಕ್ ಪ್ರಾಸಿಕ್ಯೂಟರ್‌ಗಳು ಮತ್ತು 18 ವಕೀಲರಿಗೆ ‘ನ್ಯಾಯಾಂಗದಲ್ಲಿ ಕನ್ನಡ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕೆಕೆಆರ್‌ಡಿಬಿ: ಜ.15ರವರೆಗೆ ಶೇ 27ರಷ್ಟು ಮಾತ್ರ ಗುರಿ ಸಾಧನೆ • 93 ಕಾಮಗಾರಿ ಮಾತ್ರ ಪೂರ್ಣ

ಹಿಂದುಳಿದ ಜಿಲ್ಲೆ 'ಕಲ್ಯಾಣ' ಆಮೆಗತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಪ್ರಸಕ್ತ ಹಣಕಾಸು ಸಾಲಿನಲ್ಲಿ (2022-23) ಅಭಿವೃದ್ಧಿ ಕಾಮಗಾರಿಗಳ ವೇಗ ಆಮೆಗತಿಯಲ್ಲಿ ಸಾಗಿದೆ. 'ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ'ಯಲ್ಲಿ (ಕೆಕೆಆರ್‌ಡಿಬಿ) ಈ ವರ್ಷ ಅಭಿವೃದ್ಧಿಗೆ ಲಭ್ಯವಿರುವ ₹ 3,783.59 ಕೋಟಿಯಲ್ಲಿ ಇದುವರೆಗೆ ₹ 1,037.41 ಕೋಟಿಯಷ್ಟೇ ವೆಚ್ಚವಾಗಿದೆ. ವಾರ್ಷಿಕ ಕೇವಲ ಶೇ 27ರಷ್ಟು ಗುರಿ ಸಾಧನೆ ಆಗಿದೆ.

ಪ್ರಸಕ್ತ ವರ್ಷ, ಮಂಡಳಿ ವ್ಯಾಪ್ತಿಯ ಕೊಪ್ಪಳ, ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ಬಳ್ಳಾರಿ, ವಿಜಯನಗರ –ಈ ಏಳು ಜಿಲ್ಲೆಗಳಿಗೆ 2,277 ಕಾಮಗಾರಿಗಳು ಮಂಜೂರಾಗಿವೆ. ಈ ಪೈಕಿ, ಪೂರ್ಣಗೊಂಡಿರುವುದು 93 ಮಾತ್ರ. ಅದಕ್ಕೆ ₹ 134.55 ಕೋಟಿ ವೆಚ್ಚವಾಗಿದೆ.

'ವಾರ್ಷಿಕ ಗುರಿ ಸಾಧನೆಯಲ್ಲಿ ಕೊಪ್ಪಳ ಜಿಲ್ಲೆ ಪ್ರಥಮ (ಶೇ 49) ಮತ್ತು ಕಲಬುರಗಿ ಜಿಲ್ಲೆ ಕೊನೆಯ ಸ್ಥಾನದಲ್ಲಿದೆ (ಶೇ 22). ಯಾದಗಿರಿ (ಶೇ 30), ಬೀದರ್ (33), ರಾಯಚೂರು (ಶೇ 24), ಬಳ್ಳಾರಿ (ಶೇ 36), ವಿಜಯನಗರ (ಶೇ 24) ಸಾಧನೆ ಮಾಡಿವೆ' ಎಂದು ಕೆಕೆಆರ್‌ಡಿಬಿ ಕಾರ್ಯದರ್ಶಿ ಅನಿರುದ್ಧ ಶ್ರವಣ್ 'ಪ್ರಜಾವಾಣಿ'ಗೆ ತಿಳಿಸಿದರು.

ಆದರೆ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರ ಅಧ್ಯಕ್ಷತೆಯಲ್ಲಿ ಜ.5ರಂದು ಮಂಡಳಿಯ ಪ್ರಗತಿ ಪರಿಶೀಲನೆ ಸಭೆಗೆ ಮಂಡಿಸಿದ್ದ ವರದಿಯಲ್ಲಿ ಈ ಜಿಲ್ಲೆಗಳಲ್ಲಿ ಕಾಮಗಾರಿಗಳಿಗೆ ಬಿಡುಗಡೆಯಾದ ₹ 1,010.29 ಕೋಟಿ ಅನುದಾನವನ್ನು ವೆಚ್ಚವೆಂದು ತೋರಿಸಿ ಶೇ 45.23 ರಷ್ಟು ಸಾಧನೆ ಎಂದು ಬಿಂಬಿಸಲಾಗಿದೆ. ಪ್ರಗತಿ ಪರಿಶೀಲನೆ ಸಭೆಯ ನಡಾವಳಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಕೆಕೆಆರ್‌ಡಿಬಿಗೆ ಪ್ರಸಕ್ತ ಸಾಲಿಗೆ ₹ 3 ಸಾವಿರ ಕೋಟಿ ನಿಗದಿಪಡಿಸಲಾಗಿದೆ. ಅದರಲ್ಲಿ ಆರ್ಥಿಕ ಇಲಾಖೆ ಈವರೆಗೆ ಎರಡು ಕಂತುಗಳಲ್ಲಿ ₹1,450 ಕೋಟಿ ಬಿಡುಗಡೆ ಮಾಡಿದೆ.

'ಬಿಡುಗಡೆ ಮಾಡಿದ ಮೊತ್ತದಲ್ಲಿ ಶೇ 75ರಷ್ಟು ವೆಚ್ಚ ಮಾಡಿದರೆ ಮಾತ್ರ ಮೂರನೇ ಕಂತಿನ ಅನುದಾನ ಬಿಡುಗಡೆಯ ಪ್ರಸ್ತಾವಕ್ಕೆ ಆರ್ಥಿಕ ಇಲಾಖೆ ಒಪ್ಪಿಗೆ ನೀಡುತ್ತದೆ. ಆ ಗುರಿ ಸಾಧನೆ ಆಗದಿರುವುದರಿಂದ ಕೆಕೆಆರ್‌ಡಿಬಿಗೆ ಮುಂದಿನ ಕಂತು ಬಿಡುಗಡೆ ಆಗಿಲ್ಲ' ಎಂದು ಆರ್ಥಿಕ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

6ನೇ ಪುಟ ನೋಡಿ

ಕಲ್ಯಾಣ ಕರ್ನಾಟಕದಲ್ಲಿ ಅಭಿವೃದ್ಧಿ ಕಾಮಗಾರಿ

ವರ್ಷ	ಒಟ್ಟು ಕಾಮಗಾರಿ	ಪೂರ್ಣ	ಪ್ರಗತಿಯಲ್ಲಿ	ಆರಂಭ ಆಗಬೇಕಿರುವುದು
2020-21	2,275	1,409	749	117
2021-22	2,227	900	1,130	197
2022-23	2,277	93	888	1,296
ಒಟ್ಟು	6,779	2,402	2,767	1,610

ಕೆಕೆಆರ್‌ಡಿಬಿ– ಆರ್ಥಿಕ ಪ್ರಗತಿ

₹3,783.59 ಕೋಟಿ
2022–23ನೇ ಸಾಲಿಗೆ ಒಟ್ಟು ಗುರಿ

₹2,811.21 ಕೋಟಿ
ಜ.15ರವರೆಗೆ ಮಾಡಬೇಕಿದ್ದ ವೆಚ್ಚ

₹1,037.41 ಕೋಟಿ
ಜ.15ರವರೆಗೆ ಆಗಿರುವ ವೆಚ್ಚ

27%
ಆಗಿರುವ ವೆಚ್ಚದ ಪ್ರಮಾಣ



ಅಭಿವೃದ್ಧಿಯ ಆಮೆಗತಿಗೆ ಹಲವು ಕಾರಣಗಳಿವೆ. ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸದಿದ್ದರೆ ಮುಂದೆ ಅನುಷ್ಠಾನ ಏಜೆನ್ಸಿಯಿಂದಲೇ ದಂಡ ವಸೂಲು ಮಾಡಲಾಗುವುದು
ಅನಿರುದ್ಧ ಶ್ರವಣ್
ಕಾರ್ಯದರ್ಶಿ, ಕೆಕೆಆರ್‌ಡಿಬಿ

ಚೀನಾ: ವಾರದಲ್ಲಿ 13 ಸಾವಿರ ಕೋವಿಡ್ ಪೀಡಿತರ ಸಾವು

ಬೀಜಿಂಗ್ (ಎಎಫ್‌ಪಿ): ಚೀನಾದಲ್ಲಿ ಕೋವಿಡ್‌ನಿಂದ ಸಾಯುತ್ತಿರುವವರ ಸಂಖ್ಯೆ ದಿನೇ ದಿನೇ ಏರುತ್ತಿದೆ. ಜ.13ರಿಂದ 19ರವರೆಗಿನ ಒಂದು ವಾರದಲ್ಲಿ ಸುಮಾರು 13 ಸಾವಿರ ಮಂದಿ ಮೃತಪಟ್ಟಿದ್ದಾರೆ. ದೇಶದಲ್ಲಿ ಅಸಂಖ್ಯ ಜನರು ಸೋಂಕಿಗೆ ಒಳಗಾಗಿದ್ದಾರೆ ಎಂದು ಉನ್ನತ ಆರೋಗ್ಯಾಧಿಕಾರಿಗಳು ಹೇಳಿದ್ದಾರೆ.

ಚೀನಾದ ರೋಗ ನಿಯಂತ್ರಣ ಮತ್ತು ತಡೆಗಟ್ಟುವಿಕೆ ಕೇಂದ್ರ (ಸಿಡಿಸಿ) ಶನಿವಾರ ಹೇಳಿಕೆ ನೀಡಿದ್ದು, ಆಸ್ಪತ್ರೆಗಳಲ್ಲಿ ದಾಖಲಾಗಿದ್ದ 681 ರೋಗಿಗಳು ಉಸಿರಾಟದ ಸಮಸ್ಯೆಯಿಂದ ಸತ್ತಿದ್ದಾರೆ. ಉಳಿದಂತೆ ಮೃತಪಟ್ಟವರಲ್ಲಿ ಸೋಂಕುಪೀಡಿತರಾಗಿದ್ದ 11,977 ಮಂದಿ ಇತರೆ ಕಾಯಿಲೆಗಳಿಂದಲೂ ಬಳಲುತ್ತಿದ್ದರು ಎಂದು ತಿಳಿಸಿದೆ.

ಆದರೆ, ಈ ಅಧಿಕೃತ ಅಂಕಿ ಅಂಶಗಳಲ್ಲಿ ಕೋವಿಡ್ ಸೋಂಕಿನಿಂದ ಮನೆಗಳಲ್ಲಿಯೇ ಮೃತಪಟ್ಟವರ ವಿವರ ಸೇರಿಲ್ಲ.

ಇನ್ನೊಂದು ಸುದ್ದಿ 11

ಕೊಲಿಜಿಯಂ: ಮತ್ತೆ ಹರಿಹಾಯ್ದ ರಿಜಿಜು

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿ ನೇಮಕದ ಕುರಿತಂತೆ ಸುಪ್ರೀಂ ಕೋರ್ಟ್ ಮತ್ತು ಕೇಂದ್ರ ಸರ್ಕಾರದ ನಡುವಣ ಜಟಾಪಟಿ ಮುಂದುವರಿದಿದೆ. ನ್ಯಾಯಮೂರ್ತಿಗಳನ್ನು ತಾನೇ ನೇಮಿಸಿಕೊಳ್ಳುತ್ತೇನೆ ಎನ್ನುವ ಮೂಲಕ ಸುಪ್ರೀಂ ಕೋರ್ಟ್, ಸಂವಿಧಾನವನ್ನು ಅಪಹರಿಸಿದೆ ಎಂದಿರುವ ನಿವೃತ್ತ ನ್ಯಾಯಮೂರ್ತಿಯೊಬ್ಬರನ್ನು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಬೆಂಬಲಿಸಿದ್ದಾರೆ.

ದೆಹಲಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಆರ್.ಎಸ್. ಸೋಧಿ ಅವರ ಸಂದರ್ಶನವೊಂದನ್ನು ರಿಜಿಜು ಅವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. 'ಇದು ನ್ಯಾಯಮೂರ್ತಿಯೊಬ್ಬರ ಧ್ವನಿ' ಎಂದಿರುವ ರಿಜಿಜು, ಬಹುಸಂಖ್ಯಾತ ಜನರು ಕೂಡ ಇದೇ ರೀತಿಯ 'ವಿವೇಕಯುತ ನಿಲುವು' ಹೊಂದಿದ್ದಾರೆ ಎಂದು ಹೇಳಿದ್ದಾರೆ.

ಕಾನೂನು ರೂಪಿಸುವುದು ಸಂಸತ್ತಿನ ಹಕ್ಕು ಎಂದು ನಿವೃತ್ತ ನ್ಯಾಯಮೂರ್ತಿ ಸೋಧಿ ಹೇಳಿದ್ದಾರೆ.

'ಬಹುಸಂಖ್ಯಾತ ಜನರು ಇದೇ ರೀತಿಯ ಆರೋಗ್ಯಕರ ಅಭಿಪ್ರಾಯ ಹೊಂದಿದ್ದಾರೆ. ಸಂವಿಧಾನದಲ್ಲಿರುವ ಅವಕಾಶಗಳು ಮತ್ತು ಜನಾದೇಶದ ಕುರಿತು ಅಸಡ್ಡೆ ಇರುವ ಜನರು ಮಾತ್ರ ತಾವು ಸಂವಿಧಾನಕ್ಕಿಂತ ಮೇಲಿನವರು ಎಂದು ಭಾವಿಸುತ್ತಾರೆ. ಭಾರತದ ಪ್ರಜಾಸತ್ತೆಯ ನಿಜವಾದ ಸೌಂದರ್ಯವೇ ಅದರ ಯಶಸ್ಸು. ಜನರು ತಮ್ಮ ಪ್ರತಿನಿಧಿಗಳ ಮೂಲಕ ಆಳ್ವಿಕೆ ಮಾಡುತ್ತಾರೆ. ಚುನಾಯಿತ ಪ್ರತಿನಿಧಿಗಳು ಜನರ ಹಿತಾಸಕ್ತಿಯನ್ನು ಪ್ರತಿನಿಧಿಸುತ್ತಾರೆ ಮತ್ತು ಕಾನೂನು ರೂಪಿಸುತ್ತಾರೆ. ನಮ್ಮ ನ್ಯಾಯಾಂಗವು ಸ್ವತಂತ್ರ ಮತ್ತು ಸಂವಿಧಾನವೇ ಸರ್ವೋಚ್ಚ' ಎಂದು ರಿಜಿಜು ಅವರು ಟ್ವೀಟ್ ಮಾಡಿದ್ದಾರೆ.

ಸುಪ್ರೀಂ ಕೋರ್ಟ್ ಕಾನೂನು ರಚಿಸುವಂತಿಲ್ಲ ಮತ್ತು ಕಾನೂನು ರಚಿಸುವುದು ಸಂಸತ್ತಿನ ಹಕ್ಕು ಎಂದು ಸೋಧಿ ಅವರು ಸಂದರ್ಶನದಲ್ಲಿ ಹೇಳಿದ್ದಾರೆ.

'...ನೀವು (ಸುಪ್ರೀಂ ಕೋರ್ಟ್) ಸಂವಿಧಾನಕ್ಕೆ ತಿದ್ದುಪಡಿ ತರಬಹುದೇ? ಸಂಸತ್ತು ಮಾತ್ರ ಸಂವಿಧಾನ ತಿದ್ದುಪಡಿ ಮಾಡಲು ಸಾಧ್ಯ. ಸಂವಿಧಾನವನ್ನು ಅಪಹರಿಸಿಕೊಂಡ ಬಳಿಕ, ನ್ಯಾಯಮೂರ್ತಿಗಳನ್ನು ನಾವೇ ನೇಮಿಸಿಕೊಳ್ಳುತ್ತೇವೆ. ಸರ್ಕಾರಕ್ಕೆ ಅದರಲ್ಲಿ ಯಾವ ಪಾತ್ರವೂ ಇಲ್ಲ ಎಂದು ಅವರು (ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳು) ಹೇಳಿಕೊಂಡಿದ್ದಾರೆ' ಎಂದು ಸೋಧಿ ಅವರು ಹೇಳಿದ್ದಾರೆ.

ನ್ಯಾಯಮೂರ್ತಿಗಳನ್ನು ನೇಮಿಸುವ ಕೊಲಿಜಿಯಂ ವ್ಯವಸ್ಥೆಯ ವಿರುದ್ಧ ರಿಜಿಜು ಅವರು ಹಲವು ಬಾರಿ ಧ್ವನಿ ಎತ್ತಿದ್ದಾರೆ. ಕೊಲಿಜಿಯಂ ವ್ಯವಸ್ಥೆಯು ಸಂವಿಧಾನಕ್ಕೆ 'ಅನ್ಯ'ವಾದುದು ಎಂದು ಇತ್ತೀಚೆಗೆ ಹೇಳಿದ್ದರು. ರಾಷ್ಟ್ರೀಯ ನ್ಯಾಯಾಂಗ ನೇಮಕಾತಿ ಆಯೋಗ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ರದ್ದುಪಡಿಸಿದ್ದನ್ನು ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರೂ ಪ್ರಶ್ನಿಸಿದ್ದರು.



ತಿ.ನರಸೀಪುರ ತಾಲ್ಲೂಕಿನಲ್ಲಿ ಚಿರತೆ ದಾಳಿ ತಡೆಗೆ ಅರಣ್ಯ ಇಲಾಖೆ ನಿರ್ಲಕ್ಷ್ಯ ವಹಿಸಿದೆ ಎಂದು ಆರೋಪಿಸಿ ಹೊರಳಹಳ್ಳಿ ಗ್ರಾಮಸ್ಥರು ಮತ್ತು ಮುಖಂಡರು ಭಾನುವಾರ ಕಪಿಲಾ ಮೇಲ್ಸೇತುವೆಯಲ್ಲಿ ಪ್ರತಿಭಟನೆ ನಡೆಸಿದರು

ತಿ.ನರಸೀಪುರ ತಾಲ್ಲೂಕಿನಲ್ಲಿ ಆತಂಕ, ಜನರ ಪ್ರತಿಭಟನೆ

ಚಿರತೆ ದಾಳಿ: 3 ತಿಂಗಳಲ್ಲಿ 4 ಸಾವು

ಪ್ರಜಾವಾಣಿ ವಾರ್ತೆ

ತಿ.ನರಸೀಪುರ(ಮೈಸೂರು ಜಿಲ್ಲೆ): ತಾಲ್ಲೂಕಿನ ಹೊರಳಹಳ್ಳಿ ಗ್ರಾಮದಲ್ಲಿ ಶನಿವಾರ ಸಂಜೆ ಚಿರತೆಯು ಬಾಲಕನನ್ನು ಎಳೆದೊಯ್ದು ಕೊಂದಿದೆ.



ಜಯಂತ್

ಗ್ರಾಮದ ದಶಕಂಠ ಅವರ ಪುತ್ರ ಜಯಂತ್ (11) ಮೃತಪಟ್ಟವನು. ಮುಖ್ಯರಸ್ತೆಯಲ್ಲಿ ಮನೆಗೆ ಹೋಗುತ್ತಿದ್ದಾಗ ರಸ್ತೆಬದಿ ಅವಿತಿದ್ದ ಚಿರತೆ ದಾಳಿ ಮಾಡಿದೆ. ಆತ ಮನೆಗೆ ಬಾರದಿದ್ದರಿಂದ ಪೋಷಕರು ಹಾಗೂ ಸಂಬಂಧಿಕರು ಹುಡುಕಾಟ ನಡೆಸಿದ್ದರು. ಆಗ, ರಸ್ತೆ ಬದಿಯಲ್ಲಿ ಬಿಸ್ಕೆಟ್ ಪ್ಯಾಕೆಟ್ ಹಾಗೂ ರಕ್ತದ ಕಲೆಗಳು ಕಂಡುಬಂದಿದ್ದವು. ಇದರಿಂದ ಗಾಬರಿಗೊಂಡು ಹುಡುಕಾಟ ನಡೆಸಿದ್ದರು. ಭಾನುವಾರ ಬೆಳಿಗ್ಗೆ ಬಾಲಕನ ಶವ ಪತ್ತೆಯಾಗಿದೆ. ಒಂದು ಕೈ, ತಲೆ ಭಾಗ ಬಿಟ್ಟು ದೇಹದ ಉಳಿದ ಭಾಗ ದೊರೆತಿದೆ.

2 ತಾಸು ಪ್ರತಿಭಟನೆ: ಹೊರಳಹಳ್ಳಿ ಗ್ರಾಮಸ್ಥರು, ತಾಲ್ಲೂಕು ಕುರುಬರ ಸಂಘದವರು, ರೈತರು, ದಲಿತ ಸಂಘಟನೆಗಳ ಪ್ರಮುಖರು ಮತ್ತು ಸಾರ್ವಜನಿಕರು ಅರಣ್ಯ ಇಲಾಖೆ ಹಾಗೂ ಸರ್ಕಾರದ ವಿರುದ್ಧ ಪಟ್ಟಣದ ಕಪಿಲಾ ಮೇಲ್ಸೇತುವೆ ಬಳಿ ಎರಡು ತಾಸು ಪ್ರತಿಭಟನೆ ನಡೆಸಿದರು.

6ನೇ ಪುಟ ನೋಡಿ

ಹುಲಿ ದಾಳಿಗೆ ಹಾಡಿ ನಿವಾಸಿ ಸಾವು



ಮಂಜು

ಎಚ್.ಡಿ.ಕೋಟೆ (ಮೈಸೂರು ಜಿಲ್ಲೆ): ತಾಲ್ಲೂಕಿನ ನಾಗರಹೊಳೆ ಅಭಯಾರಣ್ಯದ ಬಳ್ಳೆ ಹಾಡಿ ನಿವಾಸಿ ಮಂಜು ಅಲಿಯಾಸ್ ಬಿ.ಕಾಳ (18) ಹುಲಿ ದಾಳಿಗೆ ಸಿಲುಕಿ ಮೃತಪಟ್ಟಿದ್ದಾನೆ.

ಸೌದೆ ತರಲು ಕಾಡಿಗೆ ಹೋಗಿದ್ದಾಗ ಘಟನೆ ನಡೆದಿದೆ. ಡಿ.ಬಿ.ಕುಪ್ಪೆ ವಲಯದ ಬಳ್ಳೆ ಕಾಡಿನ ಒಳಭಾಗದಲ್ಲಿ ಭಾನುವಾರ 'ಬ್ಯಾಕ್ ವಾಟರ್ ಫೀಮೇಲ್' ಹುಲಿ (ನಾಲ್ಕು ಮರಿಗಳನ್ನು ಹೊಂದಿದೆ) ದಾಳಿ ನಡೆಸಿದೆ ಎಂಬ ಸಂಶಯ ವ್ಯಕ್ತವಾಗಿದೆ.

ಇದರಿಂದ ಆಕ್ರೋಶಗೊಂಡ ಸ್ಥಳೀಯರು ಬಳ್ಳೆ ಹಾಡಿಯಲ್ಲಿ ಪ್ರತಿಭಟಿಸಿದರು. ಮೈಸೂರು–ಮಾನಂದವಾಡಿ ಹೆದ್ದಾರಿಯಲ್ಲಿ ಕೆಲ ಕಾಲ ವಾಹನ ಸಂಚಾರಕ್ಕೆ ಅಡ್ಡಿಯುಂಟಾಗಿತ್ತು. ಅರಣ್ಯ ಅಧಿಕಾರಿಗಳು, ಪೊಲೀಸರು ಮನವೊಲಿಸಿದ ಬಳಿಕ ಶವಪರೀಕ್ಷೆಗೆ ಹಾಡಿ ನಿವಾಸಿಗಳು ಒಪ್ಪಿಗೆ ನೀಡಿದರು.

'ಮೃತನ ಕುಟುಂಬಕ್ಕೆ ತಕ್ಷಣದ ಪರಿಹಾರವಾಗಿ ₹ 2.5 ಲಕ್ಷ ನೀಡಲಾಗುವುದು. ನಂತರ ₹ 12.5 ಲಕ್ಷವನ್ನು ಇಲಾಖೆ ನೀಡಲಿದೆ' ಎಂದು ಎಸಿಎಫ್ ರಂಗಸ್ವಾಮಿ 'ಪ್ರಜಾವಾಣಿ'ಗೆ ತಿಳಿಸಿದರು.

'ಘಟನೆಯಿಂದಾಗಿ, ಕಬಿನಿ ಹಿನ್ನೀರಿಗೆ ಸಫಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ' ಎಂದು ಹೇಳಿದರು.

ತ್ವರಿತವಾಗಿ ಚಿರತೆ ಸೆರೆಗೆ ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಆದೇಶಿಸಿದ್ದೇನೆ. ಪರಿಹಾರ ನೀಡುವಂತೆ ಜಿಲ್ಲಾಧಿಕಾರಿಗೆ ಸೂಚಿಸಿದ್ದೇನೆ
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

4 ತಿಂಗಳು ದೆಹಲಿಯ ವಿಲಾಸಿ ಹೋಟೆಲ್‌ನಲ್ಲಿ ವಾಸ

₹23.46 ಲಕ್ಷ ವಂಚನೆ: ದ.ಕ ಜಿಲ್ಲೆಯಲ್ಲಿ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ರಾಜಮನೆತನದ ಅಧಿಕಾರಿ ಎಂದು ಹೇಳಿಕೊಂಡು ಇಲ್ಲಿನ ಲೀಲಾ ಪ್ಯಾಲೇಸ್ ಹೋಟೆಲ್‌ನಲ್ಲಿ ತಂಗಿದ್ದಲ್ಲದೇ, ₹23.46 ಲಕ್ಷ ಬಿಲ್ ಮೊತ್ತ ಪಾವತಿಸದೆ ಪರಾರಿಯಾಗಿದ್ದ ವ್ಯಕ್ತಿಯನ್ನು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಆತನ ಮನೆಯಲ್ಲಿ ಬಂಧಿಸಲಾಗಿದೆ' ಎಂದು ಪೊಲೀಸರು ಭಾನುವಾರ ಹೇಳಿದ್ದಾರೆ.

'ಮಹಮ್ಮದ್ ಶರೀಫ್ ಬಂಧಿತ. ತಾನು ಯುಎಇ ಅಧ್ಯಕ್ಷ ಶೇಖ್ ಫಲಾಹ್ ಬಿನ್ ಜಾಯೇದ್ ಅಲ್ ನಹ್ಯಾನ್ ಅವರ ಕಚೇರಿಯ ಉನ್ನತ ಅಧಿಕಾರಿ ಎಂದು ಹೇಳಿಕೊಂಡಿದ್ದ ಈತ, ಕಳೆದ ವರ್ಷದ ಆಗಸ್ಟ್ 1ರಂದು ಕೊಠಡಿ ಪಡೆದಿದ್ದ. ಈ ವೇಳೆ ಹೋಟೆಲ್ ಸಿಬ್ಬಂದಿಗೆ ನಕಲಿ ಬಿಸಿನೆಸ್ ಕಾರ್ಡ್ ಹಾಗೂ ಯುಎಇ ನಿವಾಸಿ ಪ್ರಮಾಣ ಪತ್ರ ಒದಗಿಸಿದ್ದ' ಎಂದು ತಿಳಿಸಿದ್ದಾರೆ.



ಶರೀಫ್ —ಟ್ವಿಟರ್ ಚಿತ್ರ

'ಆರೋಪಿಯು ನವೆಂಬರ್ 20ರವರೆಗೂ ಹೋಟೆಲ್‌ನ ಕೊಠಡಿ ಸಂಖ್ಯೆ 427ರಲ್ಲಿ ತಂಗಿದ್ದ. ಈತ 'ಸಿಲ್ವರ್ ಬಾಟಲ್ ಹೋಲ್ಡರ್' ಸೇರಿದಂತೆ ಕೊಠಡಿಯಲ್ಲಿದ್ದ ಕೆಲ ಬೆಲೆ ಬಾಳುವ ವಸ್ತುಗಳನ್ನೂ ಕಳವು ಮಾಡಿಕೊಂಡು ಹೋಗಿದ್ದಾನೆ. ಈ ಕುರಿತು ಹೋಟೆಲ್‌ನ ಆಡಳಿತವು ದೂರು ನೀಡಿತ್ತು' ಎಂದಿದ್ದಾರೆ.

'ಹೋಟೆಲ್‌ನ ಒಳಗೆ ಹಾಗೂ ಹೊರಭಾಗದ ಆವರಣದಲ್ಲಿ ಅಳವಡಿಸಲಾಗಿದ್ದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿತ್ತು. ಆರೋಪಿಯ ಪತ್ತೆಗೆ ಹಲವು ತಂಡಗಳನ್ನೂ ರಚಿಸಲಾಗಿತ್ತು. ಆತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ತನ್ನ ಮನೆಯಲ್ಲಿ ಇದ್ದಾನೆ ಎಂಬ ಮಾಹಿತಿ ಸಿಕ್ಕಿತ್ತು. ಇದೇ 19ರಂದು ಆತನನ್ನು ಬಂಧಿಸಲಾಯಿತು' ಎಂದು ಮಾಹಿತಿ ನೀಡಿದ್ದಾರೆ.

'ಆರೋಪಿಯು ಮೊದಲು ಸಿಬ್ಬಂದಿಯ ನಂಬಿಕೆ ಗಳಿಸಲು ಮುಂದಾಗಿದ್ದ. ಇದಕ್ಕಾಗಿ ಉದ್ದೇಶಪೂರ್ವಕವಾಗಿಯೇ ನಕಲಿ ಬಿಸಿನೆಸ್ ಕಾರ್ಡ್ ಹಾಗೂ ಯುಎಇ ನಿವಾಸಿ ಪ್ರಮಾಣ ಪತ್ರ ಒದಗಿಸಿದ್ದ. ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಕೆಲ ಕಂತುಗಳಲ್ಲಿ ₹11.5 ಲಕ್ಷ ಪಾವತಿಸಿದ್ದ. ₹23,48,413 ಮೊತ್ತ ಬಾಕಿ ಇತ್ತು. ಇದಕ್ಕಾಗಿ ₹20 ಲಕ್ಷದ ಚೆಕ್ ನೀಡಿದ್ದ. ಸೆಪ್ಟೆಂಬರ್ 22ರಂದು ಅದನ್ನು ಬ್ಯಾಂಕ್‌ಗೆ ನೀಡಲಾಗಿತ್ತು. ಆತನ ಖಾತೆಯಲ್ಲಿ ಹಣ ಇಲ್ಲದಿದ್ದರಿಂದ ಅದು 'ಬೌನ್ಸ್' ಆಗಿತ್ತು. ಆತ ನವೆಂಬರ್ 20ರಂದು ಮಧ್ಯಾಹ್ನ 1 ಗಂಟೆ ಸುಮಾರಿಗೆ ಹೋಟೆಲ್‌ನಿಂದ ಪರಾರಿಯಾಗಿದ್ದ ಎಂದು ಹೋಟೆಲ್ ಆಡಳಿತ ನೀಡಿರುವ ದೂರಿನಲ್ಲಿ ಉಲ್ಲೇಖಿಸಲಾಗಿದೆ' ಎಂದು ವಿವರಿಸಿದ್ದಾರೆ.

ಈ ಕುರಿತು ಮಾಹಿತಿ ಪಡೆಯಲು ಮಂಗಳೂರಿನ ಪೊಲೀಸ್ ಕಮಿಷನರ್ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಯಿತು. ಅವರು ಶರೀಫ್ ಬಂಧನದ ವಿಷಯ ಖಾತರಿಪಡಿಸಲಿಲ್ಲ.

ಚಿನಕುರಳಿ
ಪ್ರಕಾಶ್ ಶೆಟ್ಟಿ



₹ 42 ಲಕ್ಷ ವೆಚ್ಚದಲ್ಲಿ ಸುಸಜ್ಜಿತ ಸೌಕರ್ಯ, ಕಂಗೊಳಿಸುತ್ತಿರುವ ಶಿಂದೋಗಿಯ ಪ್ರೌಢಶಾಲೆ

ಸರ್ಕಾರಿ ಶಾಲೆಗೆ ಮೆರುಗು ನೀಡಿದ 'ನರೇಗಾ'

• ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಜಿಲ್ಲೆಯ ಸವದತ್ತಿ ತಾಲ್ಲೂಕಿನ ಶಿಂದೋಗಿಯ ಸರ್ಕಾರಿ ಪ್ರೌಢಶಾಲೆಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ನರೇಗಾ) ಯೋಜನೆ ಮೆರುಗು ನೀಡಿದೆ.

2007ರಲ್ಲಿ ಸ್ಥಾಪನೆಯಾಗಿರುವ ಶಾಲೆಯಲ್ಲಿ 8ರಿಂದ 10ನೇ ತರಗತಿಯಲ್ಲಿ 336 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಕೆಲವೇ ವರ್ಷಗಳ ಹಿಂದೆ ಇಲ್ಲಿ ಕನಿಷ್ಠ ಮೂಲಸೌಕರ್ಯವೂ ಇರಲಿಲ್ಲ. ಇದು ಮಕ್ಕಳ ಕಲಿಕೆ ಮೇಲೂ ವ್ಯತಿರಿಕ್ತ ಪರಿಣಾಮ ಬೀರಿತ್ತು. ಆದರೆ, ನರೇಗಾ ಯೋಜನೆಯಡಿ ₹46 ಲಕ್ಷ ವೆಚ್ಚದಲ್ಲಿ ಕಳೆದ ವರ್ಷ ಕೈಗೊಂಡ ಅಭಿವೃದ್ಧಿ ಕೆಲಸಗಳು ಶಾಲೆಯ ಚಿತ್ರಣವನ್ನೇ ಬದಲಿಸಿವೆ.

ಏನೇನು ಅಭಿವೃದ್ಧಿ?: ₹5 ಲಕ್ಷ ವೆಚ್ಚದಲ್ಲಿ ಆಟದ ಮೈದಾನ ನಿರ್ಮಿಸಲಾಗಿದೆ. ಇದು ಓಟದ ಟ್ರ್ಯಾಕ್, ವಾಲಿಬಾಲ್, ಕಬಡ್ಡಿ, ಕೊಕ್ಕೋ, ಥ್ರೋಬಾಲ್ ಅಂಕಣ ಹೊಂದಿದ್ದು, ವಿದ್ಯಾರ್ಥಿಗಳಿಗೆ ಕ್ರೀಡೆಯಲ್ಲಿ ಆಸಕ್ತಿ ಬೆಳೆಸುತ್ತಿದೆ. 250 ಮಕ್ಕಳು ಏಕಕಾಲಕ್ಕೆ ಕುಳಿತುಕೊಂಡು ಊಟ ಮಾಡಲು ಅನುಕೂಲವಾಗುವಂತೆ ₹10 ಲಕ್ಷ ವೆಚ್ಚದಲ್ಲಿ ಭೋಜನಾಲಯ ನಿರ್ಮಿಸಲಾಗಿದೆ.

ಶುಚಿತ್ವಕ್ಕೆ ಒತ್ತು ನೀಡಲು ₹4.30 ಲಕ್ಷದಲ್ಲಿ ಎರಡು ಹೈಟೆಕ್ ಶೌಚಗೃಹ ನಿರ್ಮಿಸಲಾಗುತ್ತಿದೆ. ₹15 ಲಕ್ಷ ವೆಚ್ಚದಲ್ಲಿ ಇಡೀ ಶಾಲೆ ಆವರಣದಲ್ಲಿ ಪೇವರ್ಸ್ ಅಳವಡಿಸಲಾಗಿದೆ. ₹9 ಲಕ್ಷದಲ್ಲಿ ಆವರಣ ಗೋಡೆ ನಿರ್ಮಿಸಿದ್ದರಿಂದ ಕಿಡಿಗೇಡಿಗಳು ಅಕ್ರಮವಾಗಿ ಶಾಲೆಗೆ ನುಗ್ಗುವುದು ತಪ್ಪಿದೆ. ₹2.10 ಲಕ್ಷ ವೆಚ್ಚದಲ್ಲಿ ಗೇಟ್ ಅಳವಡಿಸಲಾಗಿದ್ದು, ₹76 ಸಾವಿರ ವೆಚ್ಚದಲ್ಲಿ ಮಳೆ ನೀರು ಸಂಗ್ರಹಕ್ಕೆ ವ್ಯವಸ್ಥೆ ಮಾಡಲಾಗಿದೆ. ಇಡೀ ಶಾಲೆಗೆ ಸುಣ್ಣ-ಬಣ್ಣ ಬಳಿದು, 'ನರೇಗಾ' ಮಾಹಿತಿಯನ್ನು ಗೋಡೆಗಳ ಮೇಲೆ ಬರೆಸಲಾಗಿದೆ. ಈ ಹಿಂದೆ ಹಲವು ಸಮಸ್ಯೆಗಳಿಂದ ಬಳಲುತ್ತಿದ್ದ ಶಾಲೆಯೀಗ ಸುಸಜ್ಜಿತ ಸೌಕರ್ಯಗಳೊಂದಿಗೆ ವಿದ್ಯಾರ್ಥಿಗಳನ್ನು ಸೆಳೆಯುತ್ತಿದೆ.

ಸದ್ಯ 12 ತರಗತಿ ಕೊಠಡಿಗಳಿದ್ದು, 10 ಶಿಕ್ಷಕರು ಕೆಲಸ ಮಾಡುತ್ತಿದ್ದಾರೆ. ಪ್ರೊಜೆಕ್ಟರ್ ಬಳಸಿ ವಿವಿಧ ವಿಷಯಗಳನ್ನು ಪರಿಣಾಮಕಾರಿಯಾಗಿ ಬೋಧಿಸಲಾಗುತ್ತಿದೆ. ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ಉತ್ತಮ ಸಾಧನೆ ತೋರುತ್ತಿದ್ದಾರೆ. 2021–22ನೇ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶಾಲೆ ಶೇ 92 ಫಲಿತಾಂಶ ದಾಖಲಿಸಿದೆ.



ಶಿಂದೋಗಿಯ ಸರ್ಕಾರಿ ಪ್ರೌಢಶಾಲೆಯಲ್ಲಿ 'ನರೇಗಾ' ಯೋಜನೆ ಅಡಿ ನಿರ್ಮಾಣಗೊಂಡ ಆಟದ ಮೈದಾನ

ಮೇಲಾಧಿಕಾರಿಗಳ ಮಾರ್ಗದರ್ಶನದಲ್ಲಿ ಸವದತ್ತಿ ತಾಲ್ಲೂಕಿನ ಎಲ್ಲ ಸರ್ಕಾರಿ ಶಾಲೆಗಳನ್ನು ನರೇಗಾ ಯೋಜನೆಯಡಿ ಅಭಿವೃದ್ಧಿಪಡಿಸುತ್ತಿದ್ದೇವೆ. ಮಕ್ಕಳಿಗೆ ವಿವಿಧ ಸೌಕರ್ಯ ಕಲ್ಪಿಸುತ್ತಿದ್ದೇವೆ
ಯಶವಂತಕುಮಾರ್
ಕಾರ್ಯನಿರ್ವಾಹಕ ಅಧಿಕಾರಿ, ಸವದತ್ತಿ ತಾ.ಪಂ

ದಾನಿಗಳ ನೆರವು

ತಮ್ಮೂರಿನ ಶಾಲೆ ಅಭಿವೃದ್ಧಿಗೆ ದಾನಿಗಳೂ ಕೈಜೋಡಿಸಿದ್ದಾರೆ. ವಿವಿಧ ಪರಿಕರಗಳನ್ನು ಕಾಣಿಕೆಯಾಗಿ ನೀಡುವ ಜತೆಗೆ, ಧ್ವನಿವರ್ಧಕ ವ್ಯವಸ್ಥೆ ಮಾಡಿಸಿದ್ದಾರೆ. ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿ ಪ್ರಯೋಗಾಲಯ, ಓದುವ ಕೊಠಡಿ, ಸಭಾಂಗಣ ನಿರ್ಮಿಸಲಾಗಿದೆ. ಜಲ ಬವಣೆ ತಲೆದೋರಬಾರದೆಂದು ಸ್ಥಳೀಯ ಗ್ರಾಮ ಪಂಚಾಯಿತಿಯವರು ಕೊಳವೆಬಾವಿ ಕೊರೆಯಿಸಿದ್ದಾರೆ.

ನರೇಗಾ ಯೋಜನೆ ನಮ್ಮ ಶಾಲೆಗೆ ಹೊಸ ಹೊಳಪು ಕೊಟ್ಟಿದೆ. ಭೌತಿಕ ಸೌಕರ್ಯಗಳು ಹೆಚ್ಚಿದ್ದರಿಂದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಸಾಧ್ಯವಾಗಿದೆ
ಬಸವರಾಜ ಅಂಗಡಿ, ಮುಖ್ಯಶಿಕ್ಷಕ



ಸಹಕಾರ ಸಚಿವ ಎಸ್‌.ಟಿ.ಸೋಮಶೇಖರ್ ಅವರು ಸಿದ್ದೇಶ್ವರ ಸ್ವಾಮೀಜಿ ಪ್ರವಚನ ಮಾಲೆ ಪುಸ್ತಕವನ್ನು ರೇಣುಕಾ ಶಿವಾಚಾರ್ಯ ಸ್ವಾಮೀಜಿಗೆ ನೀಡಿದರು. ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಲಂಡನ್ ಮಹದೇವಯ್ಯ, ಪ್ರಭು ಸ್ವಾಮಿ, ಆರ್‌. ಸದಾಶಿವಯ್ಯ ಇದ್ದಾರೆ.

‘ನೀತಿಯಿಲ್ಲದ ಶಿಕ್ಷಣದಿಂದ ಸಮಾಜ ಅಧಃಪತನಕ್ಕೆ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಸಮಾಜ ಅಧಃಪತನಗೊಳ್ಳಲು ನೀತಿ ಇಲ್ಲದ ಶಿಕ್ಷಣ ಹಾಗೂ ಭೀತಿ ಇಲ್ಲದ ಶಾಸನವೇ ಕಾರಣ’ ಎಂದು ಎಡೆಯೂರು ಕ್ಷೇತ್ರದ ರೇಣುಕಾ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅಗರ ಗ್ರಾಮದ ಸಾಹಿತ್ಯ ಸಂಸ್ಕೃತಿ ವೇದಿಕೆ ಆಯೋಜಿಸಿದ್ದ 8ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

‘ಪ್ರಸಕ್ತ ಶಿಕ್ಷಣವು ಲೌಕಿಕ ಜ್ಞಾನ ಸಂಪಾದನೆಗೆ ಅನುಗುಣವಾಗಿ ರೂಪಿತಗೊಂಡಿದೆ. ಶಿಕ್ಷಣವು ಪಾರಮಾರ್ಥಿಕ ಅಂತಃಸತ್ವವನ್ನೂ ಜಾಗೃತಗೊಳಿಸುವಂತಿರಬೇಕು. ನ್ಯಾಯ, ನೀತಿಗಳು ಅವಸಾನದ ಅಂಚು ತಲುಪುತ್ತಿವೆ. ಇದೊಂದು ಅಪಾಯಕಾರಿ ಬೆಳವಣಿಗೆ’ ಎಂದು ಎಚ್ಚರಿಸಿದರು.

ಮಲಯ ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ‘ದೇಹ ರಕ್ಷಣೆಗಾಗಿ ಉತ್ತಮ ಆಹಾರ ಪಡೆದುಕೊಳ್ಳುವಂತೆ, ಸ್ವಸ್ಥ ಮನಸ್ಸಿಗಾಗಿ ಆರೋಗ್ಯ ಪೂರ್ಣ ಚಿಂತನೆಗಳು ಅವಶ್ಯಕ. ಮಾತಿನ ಮೇಲೆ ನಿಗಾ ಇಡುವಂತೆ ಋಣಾತ್ಮಕ ಚಿಂತನೆಗಳ ಮೇಲೂ ಕಡಿವಾಣ ಹಾಕಬೇಕು’ ಎಂದು ಹೇಳಿದರು.

ಆಧ್ಯಾತ್ಮ ಚಿಂತಕಿ ವೀಣಾ ಬನ್ನಂಜೆ, ‘ಯಾವ ವಿದ್ಯೆ ಮನುಜರನ್ನು ಚೈತನ್ಯಶೀಲರನ್ನಾಗಿ, ಶೀಲ ಸಂಪನ್ನರಾಗಿ ರೂಪಿಸುವುದಿಲ್ಲವೇ ಅದು ಶಿಕ್ಷಣವಲ್ಲ. ಪ್ರಸಕ್ತ ಶಿಕ್ಷಣವು ಮಾನವ ಜನಾಂಗವನ್ನು ಜಡತ್ವಕ್ಕೆ ದೂಡುತ್ತಿದೆ. ಕಂಪ್ಯೂಟರ್ ಮೂಲಕ ಪ್ರಪಂಚವನ್ನು ಗ್ರಹಿಸುವ ಪರಿಕ್ರಮ ಎಂದಿಗೂ ಸಾಧುವಲ್ಲ’ ಎಂದರು.

‘ಅಕ್ಷರವು ಜ್ಞಾನ ಸಂಪಾದನೆಯ ಮಾಧ್ಯಮವಾಗಿದೆ. ಅಕ್ಷರಸ್ಥರೆಲ್ಲ ಜ್ಞಾನಿಗಳಾಗಲು ಸಾಧ್ಯವಿಲ್ಲ. ಅಕ್ಕಮಹಾದೇವಿ, ಅಲ್ಲಮರು ಅಕ್ಷರ ಕಲಿತವರಲ್ಲ. ಇಂದಿನ ಅಕ್ಷರಸ್ಥರು ಶಿಕ್ಷಣದ ರೂಪದಲ್ಲಿ ಅವರ ಬದುಕನ್ನು ಅರಿಯುತ್ತಿದ್ದಾರೆ’ ಎಂದು ಹೇಳಿದರು.

ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನದ ಅಧ್ಯಕ್ಷ ಲಂಡನ್ ಮಹಾದೇವಯ್ಯ, ‘ಬಸವ ತತ್ವಗಳನ್ನು ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರಗೊಳಿಸಲು ಹಲವಾರು ಕಾರ್ಯಗಳನ್ನು ರೂಪಿಸಲಾಗಿದೆ’ ಎಂದು ಅವರು ತಿಳಿಸಿದರು.

ಬಿಜೆಪಿ ಭದ್ರ ನೆಲೆ ವಶಕ್ಕೆ ಕಾಂಗ್ರೆಸ್, ಜೆಡಿಎಸ್ ಕಸರತ್ತು

ಪ್ರಜಾ ಮತ | ಜನತಂತ್ರದ ಹಬ್ಬ | ಕರ್ನಾಟಕ ವಿಧಾನಸಭಾ ಚುನಾವಣೆ - 2023

• ಆದಿತ್ಯ ಕೆ.ಎ.

ಕ್ಷೇತ್ರ ಸ್ಥಿತಿ–ಗತಿ

ಬೆಂಗಳೂರು: ಬಸವನಗುಡಿ ಕ್ಷೇತ್ರ ಕಳೆದ ಕೆಲವು ಚುನಾವಣೆಗಳಿಂದ ಬಿಜೆಪಿಯ ಭದ್ರ ನೆಲೆಯಾಗಿ ಬದಲಾಗಿದ್ದು, ಈ ಬಾರಿ ಚುನಾವಣೆಯಲ್ಲಿ ಬಿಜೆಪಿಯ ಬಂಡಾಯದ ಲಾಭ ಪಡೆಯಲು ಕಾಂಗ್ರೆಸ್ ಹಾಗೂ ಜೆಡಿಎಸ್ ಮುಂದಾಗಿವೆ.

2013 ಹಾಗೂ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ಹಿಂದಿಕ್ಕಿ ಜೆಡಿಎಸ್ ಎರಡನೇ ಸ್ಥಾನಕ್ಕೆ ಬಂದಿದೆ. ಹೀಗಾಗಿ, ಚುನಾವಣೆ ದಿನಾಂಕ ಘೋಷಣೆಗೂ ಮುನ್ನವೇ ಜೆಡಿಎಸ್ ಅಭ್ಯರ್ಥಿಯ ಹೆಸರು ಘೋಷಿಸಿದೆ. ಕ್ಷೇತ್ರದಲ್ಲಿ ಅರಮನೆ ಶಂಕರ್ ಸಂಚಾರ ಆರಂಭಿಸಿದ್ದಾರೆ. ಕಾಂಗ್ರೆಸ್ ಮಾತ್ರ ಅಭ್ಯರ್ಥಿಯ ಹುಡುಕಾಟದಲ್ಲಿದೆ.

ಬೆಂಗಳೂರಿನ ಹಳೇ ಮಾದರಿ ಉಳಿಸಿಕೊಂಡೇ ಆಧುನಿಕತೆಗೆ ತೆರೆದುಕೊಂಡಿರುವ ಕ್ಷೇತ್ರದಲ್ಲಿ ಇಂದಿಗೂ ಕಡಲೆ ಕಾಯಿ ಪರಿಷೆ ಹಾಗೂ ದೇವರ ಉತ್ಸವಗಳು ನಡೆಯುತ್ತಿವೆ. ಕ್ಷೇತ್ರ ಮೇಲ್ನೋಟಕ್ಕೆ ಶಾಂತವಾಗಿ ಕಂಡರೂ ರಾಜಕೀಯವು ಅಷ್ಟೇ ಜಿದ್ದಾಜಿದ್ದಿನಿಂದ ಕೂಡಿದೆ.

ಬಸವನಗುಡಿಯಲ್ಲಿ ಬಿಜೆಪಿ ಐದು ಬಾರಿ ಜಯಿಸಿದೆ. ಅದರಲ್ಲಿ ಹಾಲಿ ಶಾಸಕ ರವಿ ಸುಬ್ರಹ್ಮಣ್ಯ ಅವರೇ ಸತತ ಮೂರು ಬಾರಿ ಆಯ್ಕೆಯಾಗಿ ಕ್ಷೇತ್ರದ ಮೇಲೆ ಹಿಡಿತ ಸಾಧಿಸಿದ್ದಾರೆ.


ರವಿ ಸುಬ್ರಹ್ಮಣ್ಯ ಮತ್ತೊಮ್ಮೆ ಬಿಜೆಪಿಯಿಂದ ಕಣಕ್ಕಿಳಿಯಲು ಪ್ರಬಲ ಆಕಾಂಕ್ಷಿ. ಅವರ ವಿರುದ್ಧ ಸ್ವಪಕ್ಷದಲ್ಲೇ ಅಸಮಾಧಾನವಿದೆ. ಕೋವಿಡ್ ವೇಳೆ ಲಸಿಕೆ ಮಾರಾಟ ಪ್ರಕರಣ, ಖಾಸಗಿ ಆಸ್ಪತ್ರೆಗಳಲ್ಲಿ ಹಾಸಿಗೆ ಕಾಯ್ದಿರಿಸಿದ ಪ್ರಕರಣಗಳು ಇಲ್ಲಿ ದೊಡ್ಡ ಸದ್ದು ಮಾಡಿದ್ದವು. ‘ಒಂದೇ ಕುಟುಂಬಕ್ಕೆ ಎರಡು ಸ್ಥಾನಗಳು ಬೇಡ’ ಎನ್ನುವ ಸೂತ್ರಕ್ಕೆ ಬಿಜೆಪಿ ಮೊರೆ ಹೋದರೆ ಸಂಸದ ತೇಜಸ್ವಿ ಸೂರ್ಯ ಅವರ ಸಂಬಂಧಿಕರೂ ಆಗಿರುವ ರವಿ ಅವರಿಗೆ ಟಿಕೆಟ್ ಕೈತಪ್ಪುವ ಸಾಧ್ಯತೆಯಿದೆ ಎಂಬ ಮಾತು ಬಿಜೆಪಿಯಲ್ಲಿ ಕೇಳಿಬರುತ್ತಿದೆ.

ಕೇಂದ್ರದ ಮಾಜಿ ಸಚಿವ ದಿವಂಗತ ಅನಂತ ಕುಮಾರ್ ಅವರ ಪತ್ನಿ ತೇಜಸ್ವಿನಿ ಅನಂತಕುಮಾರ್ ಬಿಜೆಪಿ ಟಿಕೆಟ್ ನಿರೀಕ್ಷೆಯಲ್ಲಿದ್ದಾರೆ. ಕಳೆದ ವಿಧಾನಸಭೆ, ಲೋಕಸಭಾ ಚುನಾವಣೆಯಲ್ಲೂ ಅವರಿಗೆ ಟಿಕೆಟ್ ಸಿಕ್ಕಿರಲಿಲ್ಲ. ಇದರಿಂದ ಅವರು ಅಸಮಾಧಾನಗೊಂಡಿದ್ದರು. ಸುದ್ದಿ ವಾಹಿನಿಯ ಮುಖ್ಯಸ್ಥರೊಬ್ಬರ ಹೆಸರೂ ಈ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಗಳ ಪಟ್ಟಿಯಲ್ಲಿ ಸುಳಿದಾಡುತ್ತಿದೆ. ಚಕ್ರವರ್ತಿ ಸೂಲಿಬೆಲೆ ಅವರಿಗೆ ಬಸವನಗುಡಿ ಕ್ಷೇತ್ರಕ್ಕೆ ಟಿಕೆಟ್ ನೀಡಬೇಕೆಂದು ಕಾರ್ಯಕರ್ತರೇ ಒತ್ತಡ ಹೇರುತ್ತಿದ್ದಾರೆ ಎಂದು ಮುಖಂಡರೊಬ್ಬರು ಹೇಳಿದರು.


ಕೆಪಿಸಿಸಿ ವಕ್ತಾರ ಡಾ. ಶಂಕರ ಗುಹಾ, ವಿಧಾನ ಪರಿಷತ್ ಸದಸ್ಯ ಯು.ಬಿ .ವೆಂಕಟೇಶ್, 2004ರ ಚುನಾವಣೆಯಲ್ಲಿ ಗೆದ್ದಿದ್ದ ಕೆ. ಚಂದ್ರಶೇಖರ್ ಕಾಂಗ್ರೆಸ್ ಟಿಕೆಟ್ ಬಯಸಿ ಕೆಪಿಸಿಸಿಗೆ ಅರ್ಜಿ ಸಲ್ಲಿಸಿದ್ದಾರೆ. ಗುಹಾ ಅವರು ಸಹಕಾರ ಬ್ಯಾಂಕ್‌ಗಳ ಹಗರಣದಲ್ಲಿ ಗ್ರಾಹಕರ ಪರ ನಿರಂತರ ಹೋರಾಟ ನಡೆಸುತ್ತಿದ್ದಾರೆ. ಶ್ರೀನಗರ ವಾರ್ಡ್ ವ್ಯಾಪ್ತಿಯ ಮದ್ದೂರಮ್ಮ ಮೈದಾನದಲ್ಲಿ ಶಾಲೆ ನಿರ್ಮಾಣ ವಿರೋಧಿಸಿ ನಡೆದ ಹೋರಾಟದ ಮುಂದಾಳತ್ವವನ್ನೂ ಅವರು ವಹಿಸಿದ್ದರು.

ಆಮ್ ಆದ್ಮಿ ಪಕ್ಷದಿಂದ (ಎಎಪಿ) ಭಾಸ್ಕರ್ ರಾವ್ ಅವರು ಸ್ಪರ್ಧಿಸುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ. ಬ್ರಾಹ್ಮಣರು ಹಾಗೂ ಒಕ್ಕಲಿಗರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ರಾಜಕೀಯ ಪಕ್ಷಗಳೂ ಜಾತಿ ಲೆಕ್ಕಾಚಾರ ಆಧರಿಸಿಯೇ ಈ ಕ್ಷೇತ್ರಕ್ಕೆ ಟಿಕೆಟ್ ಹಂಚಿಕೆ ಮಾಡುವ ಸಾಧ್ಯತೆಯಿದೆ.

ಬಸವನಗುಡಿ



ಎಲ್‌.ಎ. ರವಿಸುಬ್ರಮಣ್ಯ
ಹಾಲಿ ಶಾಸಕರು (ಬಿಜೆಪಿ)



ಹಾಲಿ ಮತದಾರರ ವಿವರ

1,13,219 ಪುರುಷರು
1,08,433 ಮಹಿಳೆಯರು
2 ತೃತೀಯ ಲಿಂಗಿಗಳು
2,21,654 ಒಟ್ಟು

ಚುನಾವಣೆ ಮತಗಳ ವಿವರ

ಪಕ್ಷಗಳು	2018	2013	2008
ಬಿಜೆಪಿ	76,018	43,876	50,294
ಕಾಂಗ್ರೆಸ್	11,767	21,588	37,094
ಜೆಡಿಎಸ್	38,009	24,163	6,486

ಸರಗಳವು: ಬಂಧನ

ಬೆಂಗಳೂರು: ಮಹಿಳೆಯೊಬ್ಬರ ಚಿನ್ನದ ಮಾಂಗಲ್ಯ ಸರ ಕಿತ್ತೊಯ್ದಿದ್ದ ಆರೋಪಿ ಮಂಜುನಾಥ್ ಅಲಿಯಾಸ್ ಜಿಮ್ ಮಂಜನನ್ನು ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಇಂದು 300 ಕಡೆ ಕಾಂಗ್ರೆಸ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿನ ಭ್ರಷ್ಟಾಚಾರದ ಆರೋಪದ ಕುರಿತು ಜನಜಾಗೃತಿ ಮೂಡಿಸುವ ಉದ್ದೇಶದಿಂದ ಬೆಂಗಳೂರಿನ 300 ಸ್ಥಳಗಳಲ್ಲಿ ಕಾಂಗ್ರೆಸ್ ವತಿಯಿಂದ ಸೋಮವಾರ ಮೌನ ಪ್ರತಿಭಟನೆ ನಡೆಸಲಾಗುವುದು ಎಂದು ಶಾಸಕ ಎನ್‌.ಎ. ಹ್ಯಾರಿಸ್ ತಿಳಿಸಿದರು.

ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ಅವರೊಂದಿಗೆ ಭಾನುವಾರ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಸರ್ಕಾರದಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗಿದೆ. ಆರೋಪಗಳು ಬಂದರೂ ಕ್ರಮ ಕೈಗೊಳ್ಳುತ್ತಿಲ್ಲ. ಸರ್ಕಾರದಲ್ಲಿನ ಭ್ರಷ್ಟಾಚಾರದ ವಿರುದ್ಧ ಜನಜಾಗೃತಿ ಮೂಡಿಸುವುದಕ್ಕಾಗಿ ಬೆಂಗಳೂರಿನ 51 ಮೆಟ್ರೊ ರೈಲು ನಿಲ್ದಾಣಗಳು, 26 ಮೇಲುಸೇತುವೆಗಳು, 200 ಟ್ರಾಫಿಕ್ ಸಿಗ್ನಲ್ ಗಳು ಸೇರಿದಂತೆ 300 ಸ್ಥಳಗಳಲ್ಲಿ ಮೌನ ಪ್ರತಿಭಟನೆ ನಡೆಸಲಾಗುವುದು’ ಎಂದರು.

‘ಭ್ರಷ್ಟಾಚಾರ ತೊಲಗಿಸಿ- ಬೆಂಗಳೂರು ಉಳಿಸಿ’ ಎಂಬ ಘೋಷಣೆಯಡಿ ಸೋಮವಾರ ಬೆಳಿಗ್ಗೆ 10 ಗಂಟೆಯಿಂದ 12 ಗಂಟೆಯವರೆಗೆ ಏಕಕಾಲಕ್ಕೆ ಪ್ರತಿಭಟನೆಗಳು ನಡೆಯಲಿವೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಮತ್ತಿತರ ನಾಯಕರು ಟ್ರಿನಿಟಿ ವೃತ್ತದಲ್ಲಿ ನಡೆಯುವ ಮೌನ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವರು. ಸಂಚಾರಕ್ಕೆ ಅಡ್ಡಿಪಡಿಸುವುದಿಲ್ಲ’ ಎಂದು ಅವರು ತಿಳಿಸಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಶೇಕಡ 40ರಷ್ಟು ಲಂಚದ ಆರೋಪ, ಪಿಎಸ್‌ಐ ನೇಮಕಾತಿ ಅಕ್ರಮ, ಎಂಜಿನಿಯರ್‌ಗಳು ಮತ್ತು ಉಪನ್ಯಾಸಕರ ನೇಮಕಾತಿ ಅಕ್ರಮ ಸೇರಿದಂತೆ ಹಲವು ಹಗರಣಗಳು ನಡೆದಿವೆ. ಇಡೀ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಜನರಿಗೆ ಸಾಮಾಜಿಕ ಪಿಂಚಣಿಯನ್ನೂ ಸರಿಯಾಗಿ ಬಿಡುಗಡೆ ಮಾಡುತ್ತಿಲ್ಲ ಎಂದು ಆರೋಪಿಸಿದರು.

ಬಿಬಿಎಂಪಿ ವ್ಯಾಪ್ತಿಯ ಎಲ್ಲ 28 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲೂ ಪ್ರತಿಭಟನೆಗಳು ನಡೆಯಲಿವೆ. ಶಾಸಕರು, ಹಿಂದಿನ ವಿಧಾನಸಭೆ ಚುನಾವಣೆಯಲ್ಲಿ ಪರಾಜಿತರಾದ ಅಭ್ಯರ್ಥಿಗಳು, ಪಕ್ಷದ ಪ್ರಮುಖರು ಪ್ರತಿಭಟನೆಯ ನೇತೃತ್ವ ವಹಿಸಲಿದ್ದಾರೆ ಎಂದರು.

ಸುದ್ದಿ 2 ನಿಮಿಷ

ಗ್ರಾಹಕನ ಮೇಲೆ ಹಲ್ಲೆ: ಬಾರ್ ಸಿಬ್ಬಂದಿ ಬಂಧನ

ಬೆಂಗಳೂರು: ಮಂಜುನಾಥ್ ನಗರದಲ್ಲಿರುವ ವೆಂಕಟಗಿರಿ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಗ್ರಾಹಕ ಪೆರುಮಾಳ್ (25) ಎಂಬುವರ ಮೇಲೆ ಹಲ್ಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಬಾರ್ ವ್ಯವಸ್ಥಾಪಕ ಸೇರಿ ಮೂವರನ್ನು ಪೊಲಿಸರು ಬಂಧಿಸಿದ್ದಾರೆ.

ವ್ಯವಸ್ಥಾಪಕ ಗಿರೀಶ್, ಸಪ್ಲೈಯರ್‌ಗಳಾದ ಗಣೇಶ್ ಹಾಗೂ ಬೀರಪ್ಪ ಬಂಧಿತರು.

‘ಪೀಣ್ಯದ ಕೈಗಾರಿಕೆಯೊಂದರ ಉದ್ಯೋಗಿ ಪೆರುಮಾಳ್, ಮದ್ಯ ಕುಡಿಯಲು ಶನಿವಾರ ತಡರಾತ್ರಿ ಬಾರ್‌ಗೆ ಹೋಗಿದ್ದರು. ಮದ್ಯ ಖರೀದಿಸಿ ಕೌಂಟರ್ ಎದುರು ನಿಂತು ಕುಡಿಯುತ್ತಿದ್ದರು. ಅಷ್ಟಕ್ಕೆ ಜಗಳ ತೆಗೆದಿದ್ದ ಸಿಬ್ಬಂದಿ, ಹಲ್ಲೆ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪೆರುಮಾಳ್ ತಲೆ, ಮುಖಕ್ಕೆ ಗಾಯವಾಗಿದೆ. ಕೆಲ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದೂ ತಿಳಿಸಿವೆ.

‘ಬಜೆಟ್‌ನಲ್ಲಿ ನೇಕಾರರಿಗೆ ನೆರವು’



ಬೆಂಗಳೂರು: ನೇಕಾರರು ಕಚ್ಚಾ ವಸ್ತು ಖರೀದಿಯಿಂದ ಹೊಸ ತಂತ್ರಜ್ಞಾನ ಅಳವಡಿಸಿಕೊಳ್ಳುವವರೆಗೆ ಅನುಕೂಲವಾಗುವಂತೆ ಬಜೆಟ್‌ನಲ್ಲಿ ನೆರವು ಘೋಷಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಭಾನುವಾರ ನಡೆದ ರಾಜ್ಯ ತೊಗಟವೀರ ಕ್ಷತ್ರಿಯ ನೇಕಾರ ಸಂಘದ ಅಮೃತ ಮಹೋತ್ಸವ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

‘ನೇಕಾರರ ಮೂಲ ವೃತ್ತಿ ಉಳಿಯಬೇಕು. ಅದರ ಜತೆಯಲ್ಲೇ ಅವರ ಮಕ್ಕಳು ಬೇರೆ ಬೇರೆ ವೃತ್ತಿಗಳನ್ನು ಆಯ್ದುಕೊಳ್ಳಲು ಅವಕಾಶ ಆಗಬೇಕು. ಅದಕ್ಕೆ ಪೂರಕವಾಗಿ ಸರ್ಕಾರ ಸಹಾಯ ಮಾಡಲಿದೆ’ ಎಂದು ಅವರು ತಿಳಿಸಿದರು.

ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಿಸಲು ನೇಕಾರರು ಉತ್ಪಾದಿಸುವ ಬಟ್ಟೆಯನ್ನು ಸಂಪೂರ್ಣವಾಗಿ ಖರೀದಿಸಲು ಆದೇಶ ನೀಡಲಾಗಿದೆ. ನೇಕಾರ ಸಮ್ಮಾನ್ ಯೋಜನೆ ನೆರವು ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳನ್ನೂ ಸರ್ಕಾರ ಈಡೇರಿಸಿದೆ. ಸಾಲ ಮತ್ತು ಸಹಾಯಧನ ಹೆಚ್ಚಳ, ಕಾಟೇಜ್ ಉದ್ದಿಮೆಯನ್ನಾಗಿ ಪರಿಗಣಿಸುವುದು ಸೇರಿದಂತೆ ನೇಕಾರರ ಇನ್ನೂ ಕೆಲವು ಬೇಡಿಕೆಗಳನ್ನು ಸರ್ಕಾರ ಒಪ್ಪಿಕೊಂಡಿದೆ ಎಂದು ತಿಳಿಸಿದರು.

ದೊಡ್ಡಬಳ್ಳಾಪುರ ತಾಲ್ಲೂಕು ತಪಸೀಹಳ್ಳಿ ಪುಷ್ಪಾಂಡಜ ಆಶ್ರಮದ ದಿವ್ಯಜ್ಞಾನಾನಂದಗಿರಿ ಸ್ವಾಮೀಜಿ, ನೆಲಮಂಗಲ ಸಮೀಪದ ಅರಿಶಿನಕುಂಟೆಯ ತೈಲೇಶ್ವರ ಗಾಣಿಗರ ಮಹಾಸಂಸ್ಥಾನದ ಪೂರ್ಣಾನಂದಪುರಿ ಸ್ವಾಮೀಜಿ, ಸಚಿವ ಕೆ.ಸಿ.ನಾರಾಯಣಗೌಡ, ಸಂಸದ ಪಿ.ಸಿ.ಮೋಹನ್, ರಾಜ್ಯ ತೊಗಟವೀರ ಕ್ಷತ್ರಿಯ ನೇಕಾರ ಸಂಘದ ಅಧ್ಯಕ್ಷ ಬಿ.ಎಸ್. ಸೋಮಶೇಖರ್, ಅಖಿಲ ಭಾರತ ತೊಗಟವೀರ ಕ್ಷತ್ರಿಯ ಸಂಘದ ಅಧ್ಯಕ್ಷ ಎಸ್. ಹರೀಶ್, ಬಿಜೆಪಿ ಮುಖಂಡ ಎಂ.ಡಿ ಲಕ್ಷ್ಮೀನಾರಾಯಣ, ಪುಷ್ಪಾಂಡಜ ಆಶ್ರಮ ಗುರುಪೀಠ ಟ್ರಸ್ಟ್ ಅಧ್ಯಕ್ಷ ಸಿ. ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.

ಬಸ್ ಡಿಕ್ಕಿ: ವೃದ್ಧೆಗೆ ಗಾಯ

ವಿಜಯಪುರ(ದೇವನಹಳ್ಳಿ): ಪಟ್ಟಣದ ಬಸ್ ನಿಲ್ದಾಣದಲ್ಲಿ ಭಾನುವಾರ ಸಾರಿಗೆ ಬಸ್ ಡಿಕ್ಕಿ ಹೊಡೆದು ವೃದ್ಧೆಯೊಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಗಾಯಾಳುವನ್ನು ಚಿಕ್ಕಬಳ್ಳಾಪುರ ತಾಲ್ಲೂಕಿನ ನಾಯನಹಳ್ಳಿ ಗ್ರಾಮದ ತಿರುಮಳಮ್ಮ(65) ಎಂದು ಗುರುತಿಸಲಾಗಿದ್ದು, ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಿಕ್ಕಬಳ್ಳಾಪುರದ ವೃದ್ಧೆ ವಿಜಯಪುರದಲ್ಲಿರುವ ಮಗಳ ಮನೆಗೆ ಬಂದಾಗ ಈ ಘಟನೆ ನಡೆದಿದೆ.



ಪ್ರತಿಭಾ ಪುರಸ್ಕಾರ

ತೆಲುಗು ಸ್ಮಾರ್ತ ವೇದಿಕೆಯಿಂದ ವಿದ್ಯಾರ್ಥಿಗಳಿಗೆ ಭಾನುವಾರ ಪ್ರತಿಭಾ ಪುರಸ್ಕಾರ ಮಾಡಲಾಯಿತು. ಡಾ. ಪ್ರವೀಣ್, ಡಾ. ಕೆ.ಎನ್. ಶೇಷಾದ್ರಿ, ಕೆ.ವಿ. ರವಿಶಂಕರ್ ಶರ್ಮಾ ಅವರನ್ನು ಅಭಿನಂದಿಸಲಾಯಿತು. ಅಧ್ಯಕ್ಷರಾದ ಎಸ್.ಆರ್. ಸತ್ಯನಾರಾಯಣ ಪ್ರಧಾನ ಕಾರ್ಯದರ್ಶಿ ಕೆ. ಎಸ್. ವೆಂಕಟೇಶ ಶಾಸ್ತ್ರಿ ಇದ್ದರು

‘ಕಾವಿ ಬಟ್ಟೆಗೆ ಘನತೆ ತಂದ ಶಿವಕುಮಾರ ಸ್ವಾಮೀಜಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕನ್ನಡ ನೆಲಕ್ಕೆ ಮತ್ತು ಕಾವಿ ಬಟ್ಟೆಗೆ ಘನತೆ ಹಾಗೂ ಗೌರವ ತಂದು ಕೊಟ್ಟ ಶ್ರೇಯಸ್ಸು ಸಿದ್ದಗಂಗಾ ಮಠದ ಶಿವಕುಮಾರ ಸ್ವಾಮೀಜಿ ಅವರಿಗೆ ಸಲ್ಲಲಿದೆ’ ಎಂದು ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ನಡೆದಾಡುವ ದೇವರ ಸೇವಾ ಟ್ರಸ್ಟ ನಗರದಲ್ಲಿ ಆಯೋಜಿಸಿದ ಶಿವಕುಮಾರ ಸ್ವಾಮೀಜಿ ಅವರ ನಾಲ್ಕನೇ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸಾನ್ನಿಧ್ಯವಹಿಸಿ, ಮಾತನಾಡಿದರು.

‘ಶಿವಕುಮಾರ ಸ್ವಾಮೀಜಿ ಅವರು ಅನಂತ ನೋವುಗಳನ್ನುಂಡು, ಸಿದ್ದಗಂಗಾ ಮಠವನ್ನು ಬೆಳೆಸಿದರು. ಮಠದ ಕೀರ್ತಿಯನ್ನು ರಾಷ್ಟ್ರಮಟ್ಟಕ್ಕೆ ಪಸರಿಸಿದರು. ಪ್ರತಿ ನಿತ್ಯ ಹತ್ತಾರು ಸಾವಿರ ವಿದ್ಯಾರ್ಥಿಗಳಿಗೆ ಆಶ್ರಯ, ಅನ್ನ ಹಾಗೂ ವಿದ್ಯೆಯನ್ನು ನೀಡಿದರು. ತಮ್ಮ ಈ ಕಾರ್ಯದಿಂದ ಲಕ್ಷಾಂತರ ಜನರ ಬಾಳನ್ನು ಬೆಳಗಿದರು’ ಎಂದು ಹೇಳಿದರು.

‘ತ್ಯಾಗ ಸೇವೆ ಮಾಡುವ ವ್ಯಕ್ತಿ ಹೆಚ್ಚು ದೊಡ್ಡವನಾಗುತ್ತಾನೆ ಎಂಬುದಕ್ಕೆ ಮಾನವ ಮಹಾದೇವನಾಗಿ ಮೆರೆದ ಶಿವಕುಮಾರ ಸ್ವಾಮೀಜಿ ಶ್ರೇಷ್ಠ ನಿದರ್ಶನ. ಬಸವಣ್ಣನ ನಂತರ ಈ ನಾಡು ಕಂಡ ಮಹಾನ್ ಕಾಯಕಯೋಗಿ ಅವರಾಗಿದ್ದರು. ಅವರ ಆಚಾರ ವಿಚಾರಗಳನ್ನು ನಾವೆಲ್ಲ ಮೈಗೂಡಿಸಿಕೊಳ್ಳಬೇಕು’ ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 25 ಸಾಧಕರಿಗೆ ಶಿವಕುಮಾರ ಸ್ವಾಮೀಜಿ ಹೆಸರಿನಲ್ಲಿ ‘ಕಾಯಕರತ್ನ’ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಡೆದಾಡುವ ದೇವರ ಸೇವಾ ಟ್ರಸ್ಟ್‌ನ ಸಂಸ್ಥಾಪಕ ಎಸ್. ಮಂಜುನಾಥ್, ಗೌರವಾಧ್ಯಕ್ಷೆ ಗೌರಮ್ಮ, ಅಧ್ಯಕ್ಷ ಜಿ.ಕೆ. ಶಂಕರಪ್ಪ ಇದ್ದರು.



ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಆರೂಢಭಾರತೀ ಸ್ವಾಮೀಜಿ ಮಾತನಾಡಿದರು.

ಕೊಲೆಗೂ ಮುನ್ನವೇ ನವದೆಹಲಿಗೆ ಟಿಕೆಟ್ ಕಾಯ್ದಿರಿಸಿದ್ದ ಆರೋಪಿ

ಪತ್ನಿ ಕೊಂದು ವಿಮಾನದಲ್ಲಿ ಪರಾರಿ: ಪತಿ ಸೆರೆ

ಬೆಂಗಳೂರು: ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ನಾಜ್ (22) ಎಂಬ ಮಹಿಳೆ ಕೊಲೆ ಪ್ರಕರಣದಲ್ಲಿ, ಪತಿ ನಾಸಿರ್ ಹುಸೇನ್ ಅವರನ್ನು ಪೊಲೀಸರು ಸೆರೆ ಹಿಡಿದಿದ್ದಾರೆ.

‘ತಾವರೆಕೆರೆಯ ಸುಭಾಷ್ ನಗರದ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಜ. 15ರಂದು ನಾಜ್ ಕೊಲೆ ಆಗಿತ್ತು. ಕೃತ್ಯ ಎಸಗಿ ಮನೆಯಿಂದ ಪರಾರಿಯಾಗಿದ್ದ ನಾಸಿರ್ ಹುಸೇನ್‌ನನ್ನು ದೆಹಲಿಯಲ್ಲಿ ಸೆರೆ ಹಿಡಿದು, ನಗರಕ್ಕೆ ಕರೆತರಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ನಾಜ್ ಹಾಗೂ ನಾಸಿರ್, ಪರಸ್ಪರ ಪ್ರೀತಿಸಿ ಆರು ತಿಂಗಳ ಹಿಂದೆಯಷ್ಟೇ ಮದುವೆಯಾಗಿದ್ದರು. ನಾಜ್ ಶೀಲದ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿದ್ದ ಆರೋಪಿ ನಾಸಿರ್, ನಿತ್ಯವೂ ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ನಾಜ್ ಅವರು ಗರ್ಭಿಣಿ ಎಂಬುದು ಇತ್ತೀಚೆಗೆ ಗೊತ್ತಾಗಿತ್ತು. ಅಷ್ಟಕ್ಕೆ ಕೋಪಗೊಂಡಿದ್ದ ಪತಿ, ‘ನೀನು ಅಕ್ರಮ ಸಂಬಂಧವಿಟ್ಟುಕೊಂಡಿದ್ದಿಯಾ? ನಿನ್ನ ಹೊಟ್ಟೆಯಲ್ಲಿರುವ ಮಗು ನನ್ನದಲ್ಲ. ಗರ್ಭಪಾತ ಮಾಡಿಸು’ ಎಂದು ಪಟ್ಟು ಹಿಡಿದಿದ್ದ.’



ನಾಜ್, ನಾಸಿರ್ ಹುಸೇನ್

‘ಗರ್ಭಪಾತ ಮಾಡಿಸುವುದಿಲ್ಲವೆಂದು ನಾಜ್ ಹೇಳಿದ್ದರು. ಮತ್ತಷ್ಟು ಕೋಪಗೊಂಡಿದ್ದ ನಾಸಿರ್, ಪತ್ನಿಯನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ. ಕೊಲೆಗೂ ಮುನ್ನವೇ ಬೆಂಗಳೂರಿನಿಂದ ದೆಹಲಿಗೆ ವಿಮಾನದ ಟಿಕೆಟ್ ಕಾಯ್ದರಿಸಿದ್ದ’ ಎಂದು ಮೂಲಗಳು ತಿಳಿಸಿವೆ.

ವಿಮಾನದಲ್ಲಿ ಕುಳಿತು ಕೊಲೆ ಸಂದೇಶ: ‘ಪತ್ನಿ ನಾಜ್ ಅವರನ್ನು ಕೊಲೆ ಮಾಡಿದ್ದ ನಾಸಿರ್, ಮನೆಯಿಂದ ನೇರವಾಗಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗಿದ್ದ. ನಿಗದಿಯಂತೆ ದೆಹಲಿ ವಿಮಾನದಲ್ಲಿ ಕುಳಿತಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಮಾನದೊಳಗಿನಿಂದಲೇ ನಾಜ್ ಸಹೋದರನ ಮೊಬೈಲ್‌ಗೆ ಸಂದೇಶ ಕಳುಹಿಸಿದ್ದ ನಾಸಿರ್, ‘ನಿನ್ನ ತಂಗಿ ಬೇರೆಯವರ ಜೊತೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಳು. ಆಕೆಯನ್ನು ಕೊಂದಿದ್ದು, ಮನೆಯಲ್ಲಿ ಮೃತದೇಹವಿದೆ’ ಎಂದು ಹೇಳಿದ್ದ’.

‘ಆರೋಪಿ ವಿಮಾನದಲ್ಲಿ ಪ್ರಯಾಣಿಸಿದ್ದ ಮಾಹಿತಿ ಲಭ್ಯವಾಗಿತ್ತು. ಅದೇ ಸುಳಿವು ಆಧರಿಸಿ ತನಿಖೆ ಮುಂದುವರಿಸಿದಾಗ, ಆತ ದೆಹಲಿಯಲ್ಲಿದ್ದ ಮಾಹಿತಿ ಸಿಕ್ಕಿತ್ತು’ ಎಂದು ತಿಳಿಸಿವೆ.

ಕುಂದು ಕೊರತೆ ಜನದನಿ




ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

‘ಮೂಲಸೌಕರ್ಯ ಕಲ್ಪಿಸಿ’

ನಗರದ ಅಂದರಹಳ್ಳಿ ಡಿ ಗ್ರೂಪ್‌ನ 4ನೇ ಬ್ಲಾಕ್ ನಿರ್ಮಾಣಗೊಂಡು ಹಲವು ವರ್ಷಗಳಾದರೂ ಇದುವರೆಗೂ ಮೂಲ ಸೌಲಭ್ಯಗಳನ್ನು ಕಲ್ಪಿಸಿಲ್ಲ. ಇಲ್ಲಿನ ರಸ್ತೆಗಳಲ್ಲಿ ಬೀದಿ ದೀಪವಿಲ್ಲದಿರುವುದು ರಾತ್ರಿ ಸಮಯದಲ್ಲಿ ಮಕ್ಕಳು, ಮಹಿಳೆಯರು, ವೃದ್ಧರು ಭಯದಲ್ಲಿ ಓಡಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಕಾನೂನುಬಾಹಿರ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಇಲ್ಲಿಗೆ ಸಂಪರ್ಕಿಸುವ ರಸ್ತೆಗಳಿಗೆ ಒಮ್ಮೆಯೂ ಡಾಂಬರು ಹಾಕಿಲ್ಲ. ಚರಂಡಿ ವ್ಯವಸ್ಥೆ ಇಲ್ಲದ್ದರಿಂದ ರಸ್ತೆಯಲ್ಲಿ ಮೋರಿ ನೀರು ಹರಿಯುತ್ತಿದೆ. ಮೂಲಸೌಕರ್ಯ ಒದಗಿಸುವಂತೆ ಹಲವು ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ.

ಟಿ.ಎನ್ ನರಸಿಂಹಮೂರ್ತಿ, ಸ್ಥಳೀಯ ನಿವಾಸಿ



ಅಂದರಹಳ್ಳಿಗೆ ಸಂಪರ್ಕಿಸುವ ರಸ್ತೆ

‘ಮೆಟ್ಟಿಲು ದುರಸ್ತಿಗೊಳಿಸಿ’

ಕೃಷ್ಣರಾಜಪುರ ಬಳಿಯ ಹಳೆ ಮದ್ರಾಸ್ ರಸ್ತೆಯಲ್ಲಿ ನಿರ್ಮಿಸಿರುವ ಮೇಲ್ಸೇತುವೆಯ ಮೆಟ್ಟಿಲುಗಳು ಹಾಳಾಗಿದ್ದು, ಪಾದಚಾರಿಗಳಿಗೆ ಅನಾನುಕೂಲವಾಗಿದೆ. ಇದರಿಂದ ಕೆಳಗಡೆ ಇಳಿದು ಹೋಗಬೇಕಾದರೆ ಹಲವರು ಬಿದ್ದು ಗಾಯ ಮಾಡಿಕೊಂಡಿರುವ ಘಟನೆಗಳು ನಡೆದಿವೆ. ಈ ಸೇತುವೆಯ ಮೆಟ್ಟಿಲುಗಳನ್ನು ಕೂಡಲೇ ದುರಸ್ತಿಗೊಳಿಸಿ. ಹಿರಿಯ ನಾಗರಿಕರಿಗೆ, ಅಂಗವಿಕಲರಿಗೆ ಮತ್ತು ದೈಹಿಕವಾಗಿ ನ್ಯೂನತೆ ಇರುವ ವ್ಯಕ್ತಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಸೇತುವೆಗೊಂದು ಲಿಫ್ಟ್ ಸೌಲಭ್ಯ ಕಲ್ಪಿಸಬೇಕು.

ಕಿರಣ್ ಕುಮಾರ್ ಜೆ., ಮೇಡಹಳ್ಳಿ (ಕೆ. ಆರ್ ಪುರ)



ಕೃಷ್ಣರಾಜಪುರ ಬಳಿಯ ಹಳೆಮದ್ರಾಸ್ ರಸ್ತೆಯ ಮೇಲ್ಸೇತುವೆ ಮೆಟ್ಟಿಲಿನ ಸ್ಥಿತಿ



ಅಗಪೆ ಚರ್ಚ್ ಬಳಿಯ ರಸ್ತೆಯಲ್ಲಿ ನಿಂತಿರುವ ಚರಂಡಿ ನೀರು

‘ರಸ್ತೆ ರಿಪೇರಿ ಮಾಡಿ’

ವಡ್ಡರಪಾಳ್ಯ ವ್ಯಾಪ್ತಿಯ ಕಾವೇರಿನಗರದ ಅಗಪೆ ಚರ್ಚ್‌ನ ರಸ್ತೆ ಗುಂಡಿಗಳು ಬಿದ್ದು ಸಂಪೂರ್ಣ ಹಾಳಾಗಿದೆ. ಚರಂಡಿ ವ್ಯವಸ್ಥೆ ಇಲ್ಲದಿರುವುದರಿಂದ ಕೊಳಚೆ ನೀರು ರಸ್ತೆಯಲ್ಲಿ ಹರಿಯುತ್ತಿದ್ದು, ವಾಹನ ಸಂಚಾರಕ್ಕೆ ಅಡಚಣೆಯಾಗಿದೆ. ಈ ಕುರಿತು ಸ್ಥಳೀಯ ಜನಪ್ರತಿನಿಧಿಗಳಿಗೆ ಹಾಗೂ ಬಿಬಿಎಂಪಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ.

ನಾಗಮಣಿ ದೇವರಾಜ, ಸ್ಥಳೀಯ ನಿವಾಸಿ

‘ಪಾದಚಾರಿ ಮಾರ್ಗ ಸರಿಪಡಿಸಿ’

ಚಾಮರಾಜಪೇಟೆಯಲ್ಲಿರುವ ಸೆಂಟ್ರಲ್ ಬ್ಯಾಂಕ್ ರಸ್ತೆಯ ಪಾದಚಾರಿ ಮಾರ್ಗ ಹಾಳಾಗಿದ್ದು, ಸಾರ್ವಜನಿಕರ ಸಂಚಾರಕ್ಕೆ ಅನಾನುಕೂಲವಾಗಿದೆ. ಪಾದಚಾರಿ ಮಾರ್ಗದಲ್ಲಿ ಅಳವಡಿಸಿದ್ದ ಕಲ್ಲುಗಳು ಕಿತ್ತು ಹೋಗಿವೆ. ಇದರಿಂದ ಮಕ್ಕಳು, ವೃದ್ಧರು ಈ ಹಾದಿಯಲ್ಲಿ ಸಾಗುವುದು ಕಷ್ಟವಾಗಿದೆ. ಈ ರಸ್ತೆಯಲ್ಲಿ ವಾಹನಗಳು ವೇಗವಾಗಿ ಸಂಚರಿಸುವುದರಿಂದ ರಸ್ತೆ ಅಂಚಿನಲ್ಲಿ ಓಡಾಡುವುದಕ್ಕೂ ಭಯಪಡಬೇಕಾದ ಪರಿಸ್ಥಿತಿ ಇದೆ. ಬಿಬಿಎಂಪಿ ದುರಸ್ತಿ ಕಾರ್ಯ ಕೈಗೊಂಡು ನಾಗರಿಕರಿಗೆ ಆಗುತ್ತಿರುವ ಸಮಸ್ಯೆ ಪರಿಹರಿಸಬೇಕು. ಇದೇ ಮಾರ್ಗದಲ್ಲೇ ದ್ವಿಚಕ್ರಗಳನ್ನು ಪಾರ್ಕಿಂಗ್ ಮಾಡಲಾಗುತ್ತಿದ್ದು, ಅದನ್ನು ನಿಯಂತ್ರಿಸಬೇಕು.

ಜಯರಾಮ್, ಸ್ಥಳೀಯ ನಿವಾಸಿ



ಚಾಮರಾಜಪೇಟೆ ಪಾದಚಾರಿ ಮಾರ್ಗ

ಪತ್ರಕರ್ತೆಯರ ಸಂಘಕ್ಕೆ ಪದಾಧಿಕಾರಿಗಳ ಅವಿರೋಧ ಆಯ್ಕೆ

ಬೆಂಗಳೂರು: ಕರ್ನಾಟಕ ಪತ್ರಕರ್ತೆಯರ ಸಂಘದ ಅಧ್ಯಕ್ಷರಾಗಿ ಪದ್ಮಾ ಶಿವಮೊಗ್ಗ ಸೇರಿ ಎಲ್ಲಾ ಪದಾಧಿಕಾರಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಜೆ.ಎನ್.ವಾಣಿಶ್ರೀ, ಪ್ರಧಾನ ಕಾರ್ಯದರ್ಶಿಯಾಗಿ ಮಂಜುಶ್ರೀ ಎಂ. ಕಡಕೋಳ, ಸಹ ಕಾರ್ಯದರ್ಶಿಯಾಗಿ ಪಂಕಜಾ ಗೊರೂರು, ಖಜಾಂಚಿಯಾಗಿ ಹಲಿಮತ್ ಸಾದಿಯಾ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರಾಗಿ ಚೇತನಾ ಬೆಳಗೆರೆ, ಶೀಲಾ ಸಿ. ಶೆಟ್ಟಿ, ಮಿನಿ ತೇಜಸ್ವಿ, ಕೀರ್ತಿ ಶೇಖರ್, ಶ್ರೀಜಾ ವಿ.ಎನ್., ಶಾಂತಾ ತಮ್ಮಯ್ಯ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿಯಾಗಿ ಪತ್ರಕರ್ತೆ ಎಂ.ಪಿ. ಸುಶೀಲಾ ಕಾರ್ಯ ನಿರ್ವಹಿಸಿದರು.

ನಿಧನವಾರ್ತೆ

ಶ್ರೀನಿವಾಸ್ ಮೂರ್ತಿ



ಮಾಗಡಿ: ರಾತ್ರಿ ಪಾಳಿ ಕೆಲಸ ಮುಗಿಸಿ ಮನೆಗೆ ಹೊರಟಿದ್ದ ಬೆಂಗಳೂರು ಶಿವಾಜಿನಗರ ಸಂಚಾರ ಠಾಣೆ ಎಎಸ್‌ಐ ಶ್ರೀನಿವಾಸ್ ಮೂರ್ತಿ (51) ಅವರು ಹೃದಯಾಘಾತದಿಂದಾಗಿ ಭಾನುವಾರ ಬೆಳಿಗ್ಗೆ ನಿಧನರಾದರು.

ಮಾಗಡಿ ತಾಲ್ಲೂಕಿನ ಅಗಲಕೋಟೆ ಹ್ಯಾಂಡ್ ಪೋಸ್ಟ್ ಹನುಮಣ್ಣನ ಪಾಳ್ಯದ ನಿವಾಸಿ ಶ್ರೀನಿವಾಸ್ ಮೂರ್ತಿ, ಅಗ್ರಹಾರ ದಾಸರಹಳ್ಳಿಯಲ್ಲಿ ವಾಸವಿದ್ದರು. ಅವರಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ.

‘ಕರ್ತವ್ಯ ಮುಗಿಸಿ ಮನೆಗೆ ಹೊರಟಿದ್ದ ಶ್ರೀನಿವಾಸ್ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಅವರನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ್ದ ವೈದ್ಯರು, ಅವರು ಮಾರ್ಗಮಧ್ಯೆಯೇ ತೀರಿಕೊಂಡಿದ್ದಾಗಿ ಹೇಳಿದರು’ ಎಂದು ಸಹೋದ್ಯೋಗಿಗಳು ತಿಳಿಸಿದರು.

ಅಂತ್ಯಕ್ರಿಯೆ ಸ್ವಗ್ರಾಮ ಹನುಮಣ್ಣನ ಪಾಳ್ಯದಲ್ಲಿ ಭಾನುವಾರ ನಡೆಯಿತು.

ಭೋಪಾಲ್ ವಿಜ್ಞಾನ ಹಬ್ಬದಲ್ಲಿ ಕನ್ನಡದ ಕಂಪು



ವಿಜ್ಞಾನ ಕೃತಿಗಳನ್ನು ಡಾ.ಎನ್. ಕಲೈ ಸೆಲ್ವಿ ಬಿಡುಗಡೆ ಮಾಡಿದರು. ವಿಜ್ಞಾನ ಭಾರತಿ ಅಧ್ಯಕ್ಷ ಡಾ. ಶೇಖರ್ ಮಾಂಡೆ ಹಾಗೂ ಪತ್ರಕರ್ತ ಹಸನ್ ಜಾವೇದ್ ಖಾನ್ ಇದ್ದಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜ್ಞಾನವು ಜನಸಾಮಾನ್ಯರನ್ನು ಯಶಸ್ವಿಯಾಗಿ ತಲುಪಬೇಕಾದರೆ ಅದು ಅವರ ಮಾತೃಭಾಷೆಯಲ್ಲಿ ದೊರೆಯುವಂತಾಗಬೇಕು’ ಎಂದು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ ಮಹಾನಿರ್ದೇಶಕಿ ಡಾ.ಎನ್. ಕಲೈ ಸೆಲ್ವಿ ಹೇಳಿದರು.

ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ವಿವಿಧ ಇಲಾಖೆ ಹಾಗೂ ಸಂಸ್ಥೆಗಳ ಸಹಯೋಗದಲ್ಲಿ ಭೋಪಾಲ್‌ನಲ್ಲಿ ಹಮ್ಮಿಕೊಂಡ ಅಂತರರಾಷ್ಟ್ರೀಯ ವಿಜ್ಞಾನ ಹಬ್ಬದಲ್ಲಿ ಭಾಗವಹಿಸಿ ಅವರು, ಮಾತನಾಡಿದರು.

‘ನಮ್ಮ ಜೀವನದಲ್ಲಿ ವಿಜ್ಞಾನದ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು. ಸ್ಥಳೀಯ ಭಾಷೆಗಳಲ್ಲಿ ವಿಜ್ಞಾನದ ವಿವರ ಒದಗಿಸಬೇಕು’ ಎಂದು ತಿಳಿಸಿದರು.

ಕಾರ್ಯಕ್ರಮದ ಮೊದಲ ದಿನ ಕನ್ನಡ ವಿಜ್ಞಾನ ಸಾಹಿತ್ಯದ ಹಲವು ಆಯಾಮಗಳಿಗೆ ವೇದಿಕೆ ದೊರೆತದ್ದು ವಿಶೇಷ. ‘ಕುತೂಹಲಿ’ ಕಾರ್ಯಕ್ರಮದ ಅಂಗವಾಗಿ ವಿಜ್ಞಾನ್ ಪ್ರಸಾರ್ ಪ್ರಕಟಿಸಿರುವ ‘ಅಡ್ಯನಡ್ಕ ಕೃಷ್ಣ ಭಟ್ ಆಯ್ದ ಬರಹಗಳು’ (ಸಂಪಾದಕರು ಟಿ.ಜಿ. ಶ್ರೀನಿಧಿ) ಹಾಗೂ ಕೊಳ್ಳೇಗಾಲ ಶರ್ಮ ಅವರ ‘ಜಾಣಪ್ರಶ್ನೆ’ ಕೃತಿಯನ್ನು ಡಾ. ಕಲೈ ಸೆಲ್ವಿ ಲೋಕಾರ್ಪಣೆ ಮಾಡಿದರು.

‘ನಮ್ಮ ಭಾಷೆ, ನಮ್ಮ ವಿಜ್ಞಾನ’ ವಿಷಯದ ಬಗ್ಗೆ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿದ ಲೇಖಕ ಕೊಳ್ಳೇಗಾಲ ಶರ್ಮ, ‘ವಿಜ್ಞಾನ ಸಂವಹನವನ್ನು ಹೆಚ್ಚು ಪರಿಣಾಮಕಾರಿಯಾಗಿಸಲು ಪಾಡ್‌ಕ್ಯಾಸ್ಟ್‌ನಂತಹ ಹೊಸ ವಿಧಾನಗಳನ್ನು ಬಳಸುವುದು ಅಗತ್ಯ. ಆದರೆ, ಚಾಟ್ ಜಿಪಿಟಿಯಂತಹ ಆವಿಷ್ಕಾರಗಳಲ್ಲಿ ನಾವು ಭಾರತೀಯ ಭಾಷೆಗಳನ್ನು ಬಳಸುವಂತಾಗಲು ಹೆಚ್ಚಿನ ಪಥ್ಯವೂ ಸೃಷ್ಟಿಯಾಗಬೇಕು’ ಎಂದು ಹೇಳಿದರು. ವಿಜ್ಞಾನ್ ಪ್ರಸಾರ್‌ದ ಮುಖ್ಯ ವಿಜ್ಞಾನಿ ಡಾ.ಟಿ.ವಿ. ವೆಂಕಟೇಶ್ವರನ್ ಸಂವಾದ ನಡೆಸಿಕೊಟ್ಟರು.

‘ವಿಜ್ಞಾನ ಸಂವಹನದ ಹೊಸ ಸವಾಲು-ಸಾಧ್ಯತೆಗಳು’ ವಿಷಯದ ಕುರಿತ ಗೋಷ್ಠಿಯಲ್ಲಿ ಇ–ಜ್ಞಾನ ಜಾಲಪತ್ರಿಕೆಯ ಟಿ.ಜಿ. ಶ್ರೀನಿಧಿ ಹಾಗೂ ಜಿ.ಎಸ್. ಅಭಿಷೇಕ್ ಭಾಗವಹಿಸಿದ್ದರು. ಭಾರತೀಯ ಭಾಷೆಗಳಲ್ಲಿ ವಿಜ್ಞಾನದ ಮಾಹಿತಿ ಕೊರತೆಯನ್ನು ಕಡಿಮೆ ಮಾಡಲು ತಂತ್ರಾಂಶ ಸಾಧನಗಳನ್ನು ಬಳಸುವ ಬಗೆಯನ್ನು ಅವರು ವಿವರಿಸಿದರು.

ಅತ್ಯಾಚಾರ: ಟಿಟಿಇ ಬಂಧನ

ಸಂಭಲ್, ಉತ್ತರ ಪ್ರದೇಶ (ಪಿಟಿಐ): ಸುಬೇದಾರ್‌ಗಂಜ್ ಎಕ್ಸ್‌ಪ್ರೆಸ್ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಟಿಕೆಟ್ ಪರಿಶೀಲನಾ ಅಧಿಕಾರಿಯನ್ನು (ಟಿಟಿಇ) ಬಂಧಿಸಲಾಗಿದೆ ಎಂದು ರೈಲ್ವೆ ಪೊಲೀಸರು ಭಾನುವಾರ ತಿಳಿಸಿದ್ದಾರೆ.

ರಾಜು ಸಿಂಗ್ ಬಂಧಿತ ಅಧಿಕಾರಿ. ಮತ್ತೊಬ್ಬ ಆರೋಪಿ ಪರಾರಿಯಾಗಿದ್ದು, ಪತ್ತೆಗಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಚಂದೌಸಿ ರೈಲು ನಿಲ್ದಾಣದ ಪೊಲೀಸ್ ಅಧಿಕಾರಿ ಕೆ.ಎನ್. ಸಿಂಗ್ ತಿಳಿಸಿದ್ದಾರೆ.

‘ಪ್ರಥಮ ದರ್ಜೆ ಎಸಿ ಕೋಚ್‌ನಲ್ಲಿ ಸೀಟು ದೊರಕಿಸಿಕೊಡುವುದಾಗಿ ಟಿಟಿಇ ಹಾಗೂ ಸಹ ಪ್ರಯಾಣಿಕನೊಬ್ಬ ಹೇಳಿ, ನನ್ನ ಮೇಲೆ ಅತ್ಯಾಚಾರ ಎಸಗಿದರು ಎಂಬುದಾಗಿ ಮಹಿಳೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದೇವೆ’ ಎಂದು ತಿಳಿಸಿದ್ದಾರೆ.

ಸುಧಾ, ಮಯೂರ ಓದಿರಿ

ನಗರದಲ್ಲಿ ಇಂದು

ಜಿ. ತಿಪ್ಪೇಸ್ವಾಮಿ ಅವರ ಮೂರು ಪುಸ್ತಕಗಳ ಬಿಡುಗಡೆ: ಎಂ. ನಂಜುಂಡಸ್ವಾಮಿ, ಅಧ್ಯಕ್ಷತೆ: ನಾರಾಯಣಘಟ್ಟ, ಅತಿಥಿ: ನಟೇಶ್ ಬಿ.ಎಚ್., ಉಪಸ್ಥಿತಿ: ಬಿ.ಜಿ. ಮಳಲಿಗೌಡ, ಜಿ. ತಿಪ್ಪೇಸ್ವಾಮಿ, ಆರ್. ವೆಂಕಟರಾಜು, ಆಯೋಜನೆ: ಜನಮನ ಪ್ರಕಾಶನ, ಸ್ಥಳ: ನಗರ ಕೇಂದ್ರ ಗ್ರಂಥಾಯಲ, ಹಂಪಿನಗರ, ಬೆಳಿಗ್ಗೆ 10

ನಬಾರ್ಡ್ ಜಿಲ್ಲಾವಾರು ಸಾಲಯೋಜನೆಗಳ ಕುರಿತು ವಿಚಾರ ಸಂಕಿರಣ: ಅತಿಥಿ: ಐ.ಎಸ್.ಎನ್ ಪ್ರಸಾದ್, ಸ್ಥಳ: ನಬಾರ್ಡ್ ಟವರ್, ಕೆ.ಜಿ. ರಸ್ತೆ, ಬೆಳಿಗ್ಗೆ 10

‘ಸರ್ವೋದಯ ಕರ್ನಾಟಕ ಪಕ್ಷ’ದ ಚಾಲನಾ ಸಮಾರಂಭ: ಉದ್ಘಾಟನೆ: ಮೈಕಲ್ ಫರ್ನಾಂಡಿಸ್, ಆಶಯ ನುಡಿ: ಬಡಗಲಪುರ ನಾಗೇಂದ್ರ, ಅತಿಥಿಗಳು: ಬೆಜವಾಡ ವಿಲ್ಸನ್, ಶಂಕರ್ ಕೆ.ಸಿ., ಕೆ. ಶರೀಫಾ, ಗುರುಪ್ರಸಾದ್ ಕೆರಗೋಡು, ದರ್ಶನ ಪುಟ್ಟಣ್ಣಯ್ಯ, ಸುನಿತಾ ಪುಟ್ಟಣ್ಣಯ್ಯ, ನಾಗರತ್ನಮ್ಮ ವಿ. ಪಾಟೀಲ್, ಅಧ್ಯಕ್ಷತೆ: ಚಾಮರಸ ಮಾಲೀಪಾಟೀಲ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಅರಮನೆ ರಸ್ತೆ, ಬೆಳಿಗ್ಗೆ 10.30

‘ಯುವಜನತೆಗೆ ಗಾಂಧೀಜಿ ಅವರ ಸಂದೇಶ’ ಕುರಿತು ಉಪನ್ಯಾಸ: ಉದ್ಘಾಟನೆ: ಬಿ.ಎಸ್. ವೆಂಕಟೇಶ ರಾವ್, ಅಧ್ಯಕ್ಷತೆ: ಎಸ್. ವೇಣುಗೋಪಾಲ್, ಉಪನ್ಯಾಸ: ಭೂಮಿಪ್ರಿಯ, ಮೇಘನಾ, ಅತಿಥಿ: ಭರತ್ ಎಂ.ಎ., ಆಯೋಜನೆ: ಕರ್ನಾಟಕ ಸರ್ವೋದಯ ಮಂಡಲ, ಸ್ಥಳ: ಶ್ರೀನಿಧಿ ಪಬ್ಲಿಕ್ ಶಾಲೆಯ ಸಭಾಂಗಣ, ಶ್ರೀನಿಧಿ ಲೇಔಟ್, ಚುಂಚಘಟ್ಟ ಮುಖ್ಯರಸ್ತೆ, ಮಧ್ಯಾಹ್ನ 2.30

‘ಮಧ್ವ ನವರಾತ್ರೋತ್ಸವ’: ಪ್ರವಚನ: ವೇಣುಗೋಪಾಲಾಚಾರ್ ಗುಡಿ, ವಿಷಯ: ‘ಶ್ರೀಹರಿವಾಯುಸ್ತುತಿ’, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಮಲ್ಲೇಶ್ವರ, ಸಂಜೆ 6.30

‘ದ್ವಾದಶ ಸ್ತೋತ್ರ’ ಪ್ರವಚನ: ಅಬ್ಬೂರು ಬದರಿನಾಥಾಚಾರ್, ಆಯೋಜನೆ: ಗುರುರಾಜ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಪ್ರಕಾಶನಗರ, ಸಂಜೆ 6.45

ಕೇಂದ್ರ ಸರ್ಕಾರ, ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ ಉಲ್ಲಂಘನೆ

ಸಂಸ್ಕರಣೆ ಘಟಕಕ್ಕೆ ತಲುಪದ ಕಟ್ಟಡ ತ್ಯಾಜ್ಯ

• ಆರ್. ಮಂಜುನಾಥ್



ಬಾಗಲೂರು ಸಮೀಪದ ಕಣ್ಣೂರಿನಲ್ಲಿರುವ ಸಿ ಆ್ಯಂಡ್ ಡಿ ತ್ಯಾಜ್ಯ ಸಂಸ್ಕರಣೆ ಘಟಕ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಟ್ಟಡ ನಿರ್ಮಾಣ ಮತ್ತು ಭಗ್ನಾವಶೇಷ (ಸಿ ಆ್ಯಂಡ್ ಡಿ) ತ್ಯಾಜ್ಯವನ್ನು ಸಂಸ್ಕರಣೆ ಘಟಕಕ್ಕೆ ಕಳುಹಿಸಬೇಕೆಂಬ ನಿಯಮವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಇಲಾಖೆಗಳೇ ಪಾಲಿಸುತ್ತಿಲ್ಲ.

'ಸಿ ಆ್ಯಂಡ್ ಡಿ' ತ್ಯಾಜ್ಯವನ್ನು ರಸ್ತೆ, ಕಾಲುವೆಗಳಲ್ಲಿ ವಿಲೇವಾರಿ ಮಾಡದೆ ಅದನ್ನು ಸಂಸ್ಕರಣೆ ಘಟಕಕ್ಕೇ ಕಳುಹಿಸಬೇಕು ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ ಅಧಿಸೂಚಿಸಿದ್ದು, ಅದನ್ನು ಬಿಬಿಎಂಪಿ ನಿರ್ವಹಿಸಬೇಕು ಎಂದು ಸೂಚಿಸಿದೆ. ಅದರಂತೆ ಬಿಬಿಎಂಪಿ 2019ರಲ್ಲೇ ಪ್ರಕಟಣೆ ಹೊರಡಿಸಿದ್ದರೂ ಈವರೆಗೆ ಜಾರಿಯಾಗಿಲ್ಲ.

ನಗರದಲ್ಲಿ ಹಲವೆಡೆ ಕಾಮಗಾರಿಗಳು ನಡೆಯುತ್ತಿದ್ದು, 'ಸಿ ಆ್ಯಂಡ್ ಡಿ' ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಆದರೆ ಸಂಸ್ಕರಣೆ ಘಟಕಕ್ಕೆ ಕಳುಹಿಸುತ್ತಿಲ್ಲ. ಚಿಕ್ಕಜಾಲದಲ್ಲಿ ಪ್ರತಿ ದಿನ 1 ಸಾವಿರ ಮೆಟ್ರಿಕ್ ಟನ್ ಹಾಗೂ ಬಾಗಲೂರು ಬಳಿಯ ಕಣ್ಣೂರಿನಲ್ಲಿ 750 ಮೆಟ್ರಿಕ್ ಟನ್ ಸಾಮರ್ಥ್ಯದ ಸಂಸ್ಕರಣಾ ಘಟಕವಿದೆ. ಆದರೆ, ಇವೆರಡು ಘಟಕಗಳಿಗೆ ದಿನಕ್ಕೆ ತಲಾ 100 ಮೆಟ್ರಿಕ್ ಟನ್ 'ಸಿ ಆ್ಯಂಡ್ ಡಿ' ತ್ಯಾಜ್ಯ ಮಾತ್ರ ಸೇರುತ್ತಿದೆ. ಪ್ರತಿ ಮೆಟ್ರಿಕ್ ಟನ್‌ಗೆ ₹134 ಪಾವತಿಸಿ, ಸಂಸ್ಕರಣೆ ಘಟಕಕ್ಕೆ ನೀಡಬೇಕು.

ನಗರದಲ್ಲಿ ಪ್ರತಿನಿತ್ಯ ಸಾವಿರಾರು ಮೆಟ್ರಿಕ್ ಟನ್ 'ಸಿ ಆ್ಯಂಡ್ ಡಿ' ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದರೂ, ನಿಯಮಾನುಸಾರ ಅದು ಸಂಸ್ಕರಣೆ ಘಟಕ ತಲುಪಬೇಕು. ಆದರೆ, ಅದೆಲ್ಲ ರಸ್ತೆ ಬದಿ, ಕ್ವಾರಿ, ಕೆರೆ ಪ್ರದೇಶಗಳಲ್ಲಿ ವಿಲೇವಾರಿಯಾಗುತ್ತಿದೆ. ಬಿಬಿಎಂಪಿ ಕಾನೂನು ಕ್ರಮವನ್ನೂ ತೆಗೆದುಕೊಳ್ಳುತ್ತಿಲ್ಲ. ಮರುಬಳಕೆಯನ್ನೂ ಮಾಡುತ್ತಿಲ್ಲ ಎಂದು ಪರಿಸರ ಕಾರ್ಯಕರ್ತ ರಾಮ್‌ಪ್ರಸಾದ್ ದೂರಿದರು.

ಘಟಕಕ್ಕೆ ಬರುತ್ತಿಲ್ಲ... ನಷ್ಟವಾಗುತ್ತಿದೆ...

'ಸಿ ಆ್ಯಂಡ್ ಡಿ' ತ್ಯಾಜ್ಯವನ್ನು ಸಂಸ್ಕರಿಸುವ ಎರಡು ಘಟಕಗಳನ್ನು ತಲಾ ₹5 ಕೋಟಿ ವೆಚ್ಚದಲ್ಲಿ ಸ್ಥಾಪಿಸಲಾಗಿದೆ. ಚಿಕ್ಕಜಾಲದಲ್ಲಿರುವ ರಾಕ್ ಕ್ರಿಸ್ಟಲ್ಸ್ ಘಟಕವನ್ನು ನಮ್ಮದೇ ಜಾಗದಲ್ಲಿ ಸ್ಥಾಪಿಸಿದ್ದೇವೆ. ಬಾಗಲೂರು ಸಮೀಪದ ಕಣ್ಣೂರು ಗ್ರಾಮದಲ್ಲಿ ಬಿಬಿಎಂಪಿ ನೀಡಿರುವ ಜಾಗದಲ್ಲಿ ಘಟಕವನ್ನು ಸ್ಥಾಪಿಸಲಾಗಿದೆ. ಇಲ್ಲಿಗೆ ನಿರೀಕ್ಷಿತ ಮಟ್ಟದಲ್ಲಿ ಸಿ ಆ್ಯಂಡ್ ಡಿ ತ್ಯಾಜ್ಯ ಬರುತ್ತಿಲ್ಲ. ಹೀಗಾಗಿ ನಾವು ಸಂಸ್ಕರಣೆ ಮಾಡಲಾಗುತ್ತಿಲ್ಲ. ಸಂಸ್ಕರಿತ ಸಾಮಗ್ರಿಗೆ ಬೇಡಿಕೆ ಇದ್ದರೂ ಅದನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ನಗರದಲ್ಲಿ ಎಲ್ಲೆಡೆ ಉತ್ಪತ್ತಿಯಾಗುವ ಸಿ ಆ್ಯಂಡ್ ಡಿ ತ್ಯಾಜ್ಯ ಸಂಸ್ಕರಣೆ ಘಟಕಗಳಿಗೇ ಬಂದರೆ ಅಂದಾಜು ಐದಾರು ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ. ಆದರೆ, ಇರುವ ಎರಡು ಘಟಕಕ್ಕೇ ತ್ಯಾಜ್ಯ ಬರದೆ, ನಮಗೆ ನಷ್ಟವಾಗುತ್ತಿದೆ' ಎಂದು ಕ್ರಿಸ್ಟಲ್‌ಸ್ ಘಟಕದ ರಾಜೇಶ್ ಹೇಳಿದರು.

ನಿಯಮವೇನು?

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು 'ಸಿ ಆ್ಯಂಡ್ ಡಿ' ತ್ಯಾಜ್ಯದ ಅಪಾಯಕಾರಿ ವಿಲೇವಾರಿಯಿಂದ ಜಲಮೂಲ, ಗಾಳಿ ಗುಣಮಟ್ಟದ ಮೇಲೆ ದುಷ್ಪರಿಣಾಮವಾಗುತ್ತಿದೆ. ಹೀಗಾಗಿ, ನೈಸರ್ಗಿಕ ಸಂಪನ್ಮೂಲ ರಕ್ಷಿಸಲು 'ನಿರ್ಮಾಣ ಮತ್ತು ಕಟ್ಟಡ ಕೆಡವಿದ ತ್ಯಾಜ್ಯ ನಿರ್ವಹಣೆ ನಿಯಮಗಳು– 2016' ಜಾರಿಗೊಳಿಸಿದೆ. ಈ ಅಧಿಸೂಚನೆ ಅನ್ವಯ ವೈಜ್ಞಾನಿಕವಾಗಿ ಸಿ ಆ್ಯಂಡ್ ಡಿ ತ್ಯಾಜ್ಯವನ್ನು ವಿಲೇವಾರಿ ಮಾಡಬೇಕು. ಅಲ್ಲದೆ, ನಿರ್ಮಾಣ ಕಾಮಗಾರಿ, ರಸ್ತೆ ಕಾಮಗಾರಿಗಳಲ್ಲಿ ಸಂಸ್ಕರಿತ ಮರುಬಳಕೆ ಉತ್ಪನ್ನಗಳಾದ ಸ್ಕ್ರೀನ್ಡ್ ಮರಳು ಮತ್ತು ಗ್ರಾನುಲರ್ ಸಬ್‌ಬೇಸ್ ಅನ್ನು ಕನಿಷ್ಠ ಶೇ 20ರಷ್ಟು ಬಳಸಬೇಕು ಎಂದು ಅಧಿಸೂಚನೆ ಹೊರಡಿಸಿದೆ. ಇದನ್ನು ಟೆಂಡರ್‌ಗಳ ಷರತ್ತಿನಲ್ಲಿ ಅಳವಡಿಸಬೇಕು. ಈ ನಿಯಮಗಳನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಇದನ್ನು ಉಲ್ಲಂಘಿಸಿದವರ ಮೇಲೆ ಪರಿಸರ ಸಂರಕ್ಷಣೆ ಕಾಯ್ದೆ 1986 ಹಾಗೂ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ 1976 ಮತ್ತು ಅನ್ವಯವಾಗುವ ಎಲ್ಲ ಕಾನೂನುಗಳಂತೆ ಕ್ರಮ ಕೈಗೊಳ್ಳಬೇಕು ಎಂದೂ ಸೂಚಿಸಲಾಗಿದೆ.

ಯಾರಿಗೆ ಅನ್ವಯ?: ಬಿಎಂಆರ್‌ಸಿಎಲ್, ಎನ್‌ಎಚ್‌ಎಐ, ಭಾರತೀಯ ರೈಲ್ವೆ, ವಿಮಾನ ನಿಲ್ದಾಣ ಪ್ರಾಧಿಕಾರಗಳು, ಟೆಲಿಕಾಂ ಆಪರೇಟರ್‌ಗಳು, ಸಿಪಿಡಬ್ಲ್ಯುಡಿ, ಜಿಎಐಎಲ್, ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ, ಕೆಪಿಟಿಸಿಎಲ್, ಬಿಡಿಎ, ಪಿಡಬ್ಲ್ಯುಡಿ.

ಇಲಾಖೆಗಳಿಗೆ ಪತ್ರ: ತುಷಾರ್

'ಸಿ ಆ್ಯಂಡ್ ಡಿ' ತ್ಯಾಜ್ಯ ಸಂಸ್ಕರಣೆ ಘಟಕಕ್ಕೆ ತಲುಪುತ್ತಿಲ್ಲ ಎಂಬ ವಿಷಯ ಗಮನದಲ್ಲಿದೆ. ಬಿಬಿಎಂಪಿ ಸೇರಿದಂತೆ ಎಲ್ಲ ಇಲಾಖೆಗಳೂ ಜವಾಬ್ದಾರಿಯುತವಾಗಿ ಈ ತ್ಯಾಜ್ಯವನ್ನು ಸಂಸ್ಕರಣೆ ಘಟಕಕ್ಕೆ ತಲುಪಿಸಬೇಕು. ಈ ಬಗ್ಗೆ ಮತ್ತೊಮ್ಮೆ ಎಲ್ಲ ಇಲಾಖೆಗಳಿಗೂ ಪತ್ರ ಬರೆದು, ಅರಿವು ಮೂಡಿಸಲಾಗುವುದು. ಅದಾಗದಿದ್ದರೆ ಕಾನೂನು ಕ್ರಮವನ್ನೂ ತೆಗೆದುಕೊಳ್ಳಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಹೇಳಿದರು.

ಸುದ್ದಿ 2 ನಿಮಿಷ

ಕಾಂಗ್ರೆಸ್‌ನಿಂದ ನೇತಾಜಿ ಅವಮಾನ: ಬಿಜೆಪಿ ಟೀಕೆ

ಬೆಂಗಳೂರು:ಕಾಂಗ್ರೆಸ್ ಪಕ್ಷ ಸೋಮವಾರ ನಡೆಸಲು ಉದ್ದೇಶಿಸಿರುವ ಪ್ರತಿಭಟನೆಯ ಮೂಲಕ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರನ್ನು ಅವಮಾನಿಸಲು ಮುಂದಾಗಿದೆ ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಎನ್. ರವಿಕುಮಾರ್ ಟೀಕಿಸಿದ್ದಾರೆ.

ಜ.25 ಬೋಸ್ ಅವರ ಜನ್ಮದಿನವಾಗಿದೆ. ಆ ದಿನದಂದು ಅವರನ್ನು ಗೌರವಿಸುವುದಕ್ಕೆ ಬದಲು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆಯನ್ನು ಹಮ್ಮಿಕೊಂಡಿದೆ. ಉದ್ದೇಶಪೂರ್ವಕವಾಗಿಯೇ ಈ ದಿನವನ್ನು ಆಯ್ಕೆ ಮಾಡಿದೆ. ಕಾಂಗ್ರೆಸ್ ಎಂದಿಗೂ ನೇತಾಜಿ ಅವರಿಗೆ ನೀಡಬೇಕಾದ ಗೌರವ ನೀಡಲಿಲ್ಲ. ಬದಲಿಗೆ ಇತಿಹಾಸದ ಪುಟಗಳಲ್ಲಿ ಹುದುಗಿಸುವ ಕೆಲಸ ಮಾಡಿದೆ ಎಂದು ಹೇಳಿದ್ದಾರೆ.

ನೇತಾಜಿ ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಮೋದಿಯವರ ಸರ್ಕಾರ ಬಂದ ಮೇಲೆಯೇ ಬಹಿರಂಗ ಮಾಡಬೇಕಾಯಿತು. ಇಂಡಿಯಾ ಗೇಟ್ ಬಳಿ ನೇತಾಜಿ ಅವರ ಪ್ರತಿಮೆ ಸ್ಥಾಪನೆ ಮಾಡಲೂ ಮೋದಿಯವರೇ ಬರಬೇಕಾಯಿತು ಎಂದು ಹೇಳಿದ್ದಾರೆ.

ಜಾನಪದ ಕಲೆಯ ಅನಾವರಣ



ಬೆಂಗಳೂರು: ಉತ್ತರ ಕರ್ನಾಟಕ ಸಂಘ ಸಂಸ್ಥೆಗಳ ಮಹಾಸಂಸ್ಥೆಯ ನಗರದ ಅರಮನೆ ಮೈದಾನದಲ್ಲಿ ಆಯೋಜಿಸಿದ್ದ ಎರಡು ದಿನಗಳ 'ಉತ್ತರ ಕರ್ನಾಟಕ ಉತ್ಸವ'ದಲ್ಲಿ ಲಗೋರಿ, ಬುಗರಿ, ಗೋಲಿ, ಚಿನ್ನಿದಾಂಡು ಆಟವಾಡಿ ಸಂಭ್ರಮಿಸಿದರು.

ಜಾನಪದ ಕಲೆಗಳಾದ ಗೀಗೀಪದ, ತತ್ವಪದ, ಕರಡಿ ಮಜಲು, ಹೆಳವರ ಪದ, ಸೋಬಾನೆ ಪದಗಳು ಸೇರಿದಂತೆ ಹಲವು ಕಲೆಗಳು ಆ ಭಾಗದ ಸಂಸ್ಕೃತಿಯನ್ನು ಪ್ರತಿಬಿಂಬಿಸಿದವು. ಧಾರವಾಡ ಜಿಲ್ಲೆಯ ಮಲ್ಲಕಂಬ ಪ್ರದರ್ಶನ ರೋಮಾಂಚನಗೊಳಿಸಿತು. ಇಳಕಲ್ ಸೀರೆಯುಟ್ಟ ಮಹಿಳೆಯರ ಫ್ಯಾಷನ್ ಶೋ ಎಲ್ಲರ ಕಣ್ಮನ ಸೆಳೆದವು.

ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಉದ್ಯಮಿ ಭರತ್ ಬೊಮ್ಮಾಯಿ ಮಾತನಾಡಿ, 'ಬೆಂಗಳೂರಿನಲ್ಲಿ ಉತ್ತರ ಕರ್ನಾಟಕದ ಸಂಸ್ಕೃತಿ ಪ್ರತಿಬಿಂಬಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ನಾವು ಎಲ್ಲಿಯೇ ಹೋದರೂ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಕೆಲಸ ಮಾಡಬೇಕು' ಎಂದು ಕರೆ ನೀಡಿದರು.

ಮಹಾಸಂಸ್ಥೆಯ ಅಧ್ಯಕ್ಷ ಶಿವಕುಮಾರ ಮೇಟಿ ಮಾತನಾಡಿ, 'ಬೆಂಗಳೂರಿನಲ್ಲಿ ಉತ್ತರ ಕರ್ನಾಟಕದ ಜನರು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 3 ಎಕರೆ 24 ಗುಂಟೆ ಜಾಗ ಕೊಟ್ಟಿದ್ದಾರೆ. ಅಲ್ಲಿ ಸಾಂಸ್ಕೃತಿಕ ಭವನ ನಿರ್ಮಾಣ ಮಾಡಲಾಗುವುದು' ಎಂದರು.

ತಂತ್ರಜ್ಞಾನದ ಆ ಮುಖ ಈ ಮುಖ...

• ವಿಶಾಖ ಎನ್.

ಜೈಪುರ್: ತಂತ್ರಜ್ಞಾನವನ್ನು ಭಾರತವು ಸಬಲೀಕರಣಕ್ಕೆ ಬಳಸುತ್ತಿದೆ. ಅಮೆರಿಕದಲ್ಲಿ ಅದು ಖಾಸಗೀತನವಾಗಿದೆ ಎಂದು ಉದ್ಯಮಿ ಹಾಗೂ ತಂತ್ರಜ್ಞಾನ ಪರಿಣತ ನಂದನ್ ನಿಲೇಕಣಿ ಹೇಳಿದರು.

ಜೈಪುರ ಸಾಹಿತ್ಯೋತ್ಸವದಲ್ಲಿ ಭಾನುವಾರ 'ದಿ ಆರ್ಟ್ ಆಫ್ ಬಿಟ್‌ಫುಲ್‌ನೆಸ್: ಕೀಪಿಂಗ್ ಕಾಮ್ ಇನ್ ದಿ ಡಿಜಿಟಲ್ ವರ್ಲ್ಡ್' ಎಂಬ ಗೋಷ್ಠಿಯಲ್ಲಿ ಅವರು ಡಿಜಿಟಲ್ ಜಗತ್ತಿನ ಕುರಿತು ವಿಚಾರಲಹರಿಯನ್ನು ಹಂಚಿಕೊಂಡರು.

'ಭಾರತದಲ್ಲಿ ಡಿಜಿಟಲ್ ವೇದಿಕೆಯು ಸಬಲೀಕರಣಕ್ಕೆ ಸಮರ್ಥವಾಗಿ ಬಳಕೆಯಾಗುತ್ತಿದ್ದರೆ, ಚೀನಾದಲ್ಲಿ ಸರ್ಕಾರವೇ ಅದು ಹೇಗಿರಬೇಕು ಎಂದು ನಿರ್ಧರಿಸುವ ವಾತಾವರಣವಿದೆ. ತಂತ್ರಜ್ಞಾನದಲ್ಲಿ ಪುಷ್ ಹಾಗೂ ಪುಲ್ ಎನ್ನುವ ಮಾದರಿಗಳಿವೆ. ನಮಗೆ ಬೇಕಾದದ್ದನ್ನು ಹುಡುಕಿ ಅರಿಯುವುದು ಪುಲ್ ಮಾದರಿ. ನಮಗೆ ಏನು ಬೇಕು ಎಂದು ಮಾಹಿತಿ ಪೂರೈಸುವವರು ನಿರ್ಧರಿಸಿ ಅದರತ್ತ ನಮ್ಮನ್ನು ಸೆಳೆಯುವಂತೆ ಮಾಡುವುದು ಪುಷ್ ಮಾದರಿ. ಇದರಲ್ಲಿ ಜಾಹೀರಾತುಗಳೂ ಗಾಳ ಹಾಕುತ್ತಿರುತ್ತವೆ. ತಂತ್ರಜ್ಞಾನವನ್ನು ಕೈವಶ ಮಾಡಿಕೊಂಡು, ಅದನ್ನು ನಮ್ಮ ಅಗತ್ಯಕ್ಕೆ ಒಗ್ಗಿಸಿಕೊಳ್ಳುವ ಜಾಣ್ಮೆ ನಮಗೆ ಬಿಟ್ಟದ್ದು' ಎಂದು ಹೇಳಿದರು.

'ಡ್ರೋನ್ ತಂತ್ರಜ್ಞಾನ ಬಂದಾಗ ಅದನ್ನು ನಿರ್ಬಂಧಿಸುವಂತೆ ಆಗ್ರಹಿಸುತ್ತಾರೆ. ಬಯೋಟೆಕ್ನಾಲಜಿಯಲ್ಲಿ ಹೊಸತು ಬಂದಾಗ, ಕೃತಕ ಬುದ್ಧಿಮತ್ತೆಗೆ ಸಂಬಂಧಿಸಿದಂತೆ ಹೊಸ ಅನ್ವೇಷಣೆ ನಡೆದಾಗ ಅದನ್ನು ಬೇಡ ಎನ್ನುವವರೂ ಭಾರತದಲ್ಲಿದ್ದಾರೆ. ಇದು ನಮ್ಮ ವಿರೋಧಾಭಾಸ ಧೋರಣೆಗೆ ಸಾಕ್ಷಿ' ಎಂದು ಅನಿರುದ್ಧ್ ಸೂರಿ ಗಮನ ಸೆಳೆದರು.

'ಅನುಮತಿ ಬೇಡದ ಸಂಶೋಧನೆ ಮತ್ತು ಅನುಮತಿಯ ಅಗತ್ಯ ಇರುವ ಸಂಶೋಧನೆ ಎಂಬ ಎರಡು ಬಗೆಗಳಿವೆ. ಎರಡನೆಯದಕ್ಕೆ ಸರ್ಕಾರದ ಅನುಮತಿ ಬೇಕು ಎಂದು ನಿಲೇಕಣಿ ಹೇಳಿದರು.

2022ರಲ್ಲಿ ತಮ್ಮ ಪರಿಚಯದ ಒಬ್ಬ ಮಹಿಳೆ ವಾಟ್ಸ್‌ಆ್ಯಪ್ ಗ್ರೂಪ್ ಮಾಡಿ, ಮಕ್ಕಳ ಲಾಲನೆ-ಪಾಲನೆಯ ಕುರಿತು ಮಾಹಿತಿ ಹಂಚಿಕೊಳ್ಳಲಾರಂಭಿಸಿದ್ದನ್ನು ನಂದನ್ ನಿಲೇಕಣಿ ಉದಾಹರಿಸಿದರು. ಇದಕ್ಕೆ ಹಲವರು ಪೂರಕ ಅಂಶಗಳನ್ನು ಸೇರಿಸಿದರು. ಹೀಗಾಗಿ ಡಿಜಿಟಲ್ ವೇದಿಕೆಯೊಂದನ್ನು ಸಮರ್ಥವಾಗಿ ಬಳಸಿಕೊಂಡಂತೆ ಆಯಿತು. ಕೆಲವರು ಇದನ್ನು ಕೆಟ್ಟ ರೀತಿಯಲ್ಲೂ ಬಳಸಿಕೊಳ್ಳುತ್ತಾರೆ ಎಂದು ತಂತ್ರಜ್ಞಾನದ ಎರಡು ಮುಖಗಳನ್ನು ಬಿಚ್ಚಿಟ್ಟರು.

ಜೈ ಭೀಮ್ ಎಂದು ಹೇಳಲು ಭಯ: ಸೂರಜ್ ಎಂಗಡೆ

ಜೈಪುರ: 'ಭಾರತದ ಯಾವುದೇ ಕಚೇರಿಗೆ ಹೋಗಿ. ಅಲ್ಲಿ ಜೈ ಶ್ರೀರಾಮ್, ಸಲಾಂ ಅಲೈಕುಂ, ಸತ್ ಶ್ರೀ ಅಕಾಲ್ ಎಂದು ಹೇಳುತ್ತಾರೆ. ಆದರೆ ಜೈ ಭೀಮ್ ಎಂದು ಹೇಳಲು ಭಯವಾಗುತ್ತದೆ. ಇಂತಹ ಭಯ ಸೃಷ್ಟಿಸಿದವರು ಯಾರು' ಎಂದು 'ಕಾಸ್ಟ್ ಮ್ಯಾಟರ್ಸ್' ಕೃತಿಯ ಲೇಖಕ ಸೂರಜ್ ಎಂಗಡೆ ಪ್ರಶ್ನಿಸಿದರು.

ಜೈಪುರ ಸಾಹಿತ್ಯೋತ್ಸವದಲ್ಲಿ ಅವರ ಕೃತಿಯ ಶೀರ್ಷಿಕೆಯದ್ದೇ ಹೆಸರಿನ ಗೋಷ್ಠಿಯಲ್ಲಿ ಭಾನುವಾರ ಅವರು ಸಂವಾದದಲ್ಲಿ ಮಾತನಾಡಿದರು.

ಜೈ ಭೀಮ್ ಎಂದು ಹೇಳಲು ಆಗುತ್ತಿರುವ ಭಯವೇ ಆಧುನಿಕ ಸಮಾಜದ ಭಾರ. ಇದನ್ನು ತೊಡೆಯದಿದ್ದರೆ ಅಂಥ ಸಮಾಜಕ್ಕೆ ಭವಿಷ್ಯವಿಲ್ಲ. ದಲಿತರು ತಮ್ಮನ್ನು ಮುಕ್ತವಾಗಿ ಅಭಿವ್ಯಕ್ತಿಸಿಕೊಳ್ಳಲು ಅವಕಾಶ ಸಿಗಬೇಕಿದೆ ಎಂದರು.

'ಜಾತಿ ಒಂದು ರೂಪಕಾತ್ಮಕ ಸತ್ಯವಲ್ಲ. ಅಡಿಗಡಿಗೂ ಎದುರಾಗುವ ಅವಮಾನ. ದಲಿತರು ಜಾತಿಯ ಕಾರಣಕ್ಕಾಗಿಯೇ ಸಮಾಜದ ವಿವಿಧ ಸ್ತರಗಳಲ್ಲಿ ಅವಕಾಶಗಳನ್ನು ಕಳೆದುಕೊಂಡರು ಮತ್ತು ಇತರರು ಮಾಡಲು ಹೇಸಿಗೆ ಪಟ್ಟುಕೊಂಡಂಥ ಕೆಲಸಗಳಿಗೆ ಅಂಟಿಕೊಂಡರು' ಎಂದು ಭಾವುಕರಾಗಿ ಹೇಳಿದರು. ದಲಿತರದು ಮಾನವೀಯತೆಯ ಹೋರಾಟ. ತಮ್ಮನ್ನೂ ಕೂಡ ಒಳಗೊಳ್ಳುವಂತೆ ಕೇಳಿಕೊಳ್ಳುತ್ತಿದ್ದಾರೆ. ಪ್ರತ್ಯೇಕತೆ ದಲಿತರ ಹೋರಾಟದ ಆದ್ಯತೆಯಲ್ಲ ಎಂದರು. ಸಾಹಿತಿ ಹಾಗೂ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರೊಫೆಸರ್ ಸುರೀಂದರ್ ಎಸ್. ಜೋಧ್ಕಾ ಸಂವಾದ ನಡೆಸಿಕೊಟ್ಟರು.

ಸಿರಿಧಾನ್ಯ ಮೇಳಕ್ಕೆ ತೆರೆ: ₹201.91 ಕೋಟಿ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಮನೆ ಮೈದಾನದಲ್ಲಿ ಮೂರು ದಿನಗಳ ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳಕ್ಕೆ ತೆರೆ ಬಿದ್ದಿದ್ದು, ಒಟ್ಟು ₹201.91 ಕೋಟಿ ಮೊತ್ತದ ಒಪ್ಪಂದ ಏರ್ಪಟ್ಟಿದೆ.

2 ಲಕ್ಷಕ್ಕೂ ಹೆಚ್ಚು ಮಂದಿ ಮೇಳದಲ್ಲಿ ಭಾಗವಹಿಸಿದ್ದರು. 139 ಬಿಟುಬಿ (ಬ್ಯುಸಿನೆಸ್ ಟು ಬ್ಯುಸಿನೆಸ್) ಸಭೆಗಳು ನಡೆದಿದ್ದು, 43 ಒಡಂಬಡಿಕೆ ನಡೆದಿವೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಭಾನುವಾರ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಮಾತನಾಡಿ, 'ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸಣ್ಣ ರೈತರ ಬಗ್ಗೆ ಕಾಳಜಿ ಇದೆ. ರಾಗಿ ಬೆಳೆಗಾರರ ಸಮಸ್ಯೆಯನ್ನು ವಿಶ್ವಸಂಸ್ಥೆಯಲ್ಲಿ ಪ್ರಸ್ತಾಪಿಸುವ ಮೂಲಕ ಅವರ ದೂರದೃಷ್ಟಿಯನ್ನು ಪ್ರದರ್ಶಿಸಿದ್ದರು' ಎಂದರು.

ಚಿದಾನಂದ ಮೂರ್ತಿ ಸಭಾಂಗಣ ಲೋಕಾರ್ಪಣೆ

'ಕಾಮಗಾರಿಗೆ ಮಹನೀಯರ ಹೆಸರು'



ವಿಶಾಲಾಕ್ಷಿ ಚಿದಾನಂದಮೂರ್ತಿ, ವಿ. ಸೋಮಣ್ಣ, ಸಂಶೋಧಕ ಸಿ.ವೀರಣ್ಣ, ವಿ.ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಕನ್ನಡಪರ ಹೋರಾಟಗಾರ ಫಾಲನೇತ್ರ ಅವರು ಚಿದಾನಂದಮೂರ್ತಿ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಿದರು.

ಬೆಂಗಳೂರು: 'ಮಹನೀಯರ ಹೆಸರು ಶಾಶ್ವತವಾಗಿ ಉಳಿಯಲು ಹಾಗೂ ಮುಂದಿನ ಪೀಳಿಗೆಗೆ ಅವರ ಕೊಡುಗೆಗಳನ್ನು ತಿಳಿಸಲು ಗೋವಿಂದ ರಾಜನಗರ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯ ವಿವಿಧ ಕಾಮಗಾರಿ ಹಾಗೂ ಯೋಜನೆಗಳಿಗೆ ಮಹನೀಯರ ಹೆಸರನ್ನು ಇಡಲಾಗುತ್ತಿದೆ' ಎಂದು ಸ್ಥಳೀಯ ಶಾಸಕರೂ ಆಗಿರುವ ವಸತಿ ಸಚಿವ ವಿ. ಸೋಮಣ್ಣ ತಿಳಿಸಿದರು.

ಗೋವಿಂದರಾಜನಗರದಲ್ಲಿ ನಿರ್ಮಾಣವಾಗಿರುವ ಎಂ. ಚಿದಾನಂದ ಮೂರ್ತಿ ಸಭಾಂಗಣವನ್ನು ಈಚೆಗೆ ಉದ್ಘಾಟಿಸಿದ ಅವರು, 'ಕ್ಷೇತ್ರದಲ್ಲಿನ ಕಾಮಗಾರಿ, ಯೋಜನೆಗಳಿಗೆ ಬಸವೇಶ್ವರ, ದಾಸಶ್ರೇಷ್ಠ ಕನಕದಾಸ, ಸಂಗೊಳ್ಳಿ ರಾಯಣ್ಣ, ನಾಡಪ್ರಭು ಕೆಂಪೇಗೌಡ, ಸಂವಿಧಾನ ಶಿಲ್ಪಿ ಬಿ.ಆರ್.ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ಅಟಲ್ ಬಿಹಾರಿ ವಾಜಪೇಯಿ, ಶಿವಕುಮಾರ ಸ್ವಾಮೀಜಿ, ಬಾಲಗಂಗಾಧರನಾಥ ಸ್ವಾಮೀಜಿ, ಪೇಜಾವರ ಸ್ವಾಮೀಜಿ ಸೇರಿ ವಿವಿಧ ಮಹನೀಯರ ಹೆಸರನ್ನು ಇಡಲಾಗಿದೆ. ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡು, ಉತ್ತಮ ಪ್ರಜೆಯಾಗಲಿ ಎಂಬ ಉದ್ದೇಶದಿಂದ ಹೆಸರುಗಳನ್ನು ನಾಮಕರಣ ಮಾಡಲಾಗಿದೆ' ಎಂದು ಹೇಳಿದರು.

'ಸಂಶೋಧನೆ ಮೂಲಕ ರಾಷ್ಟ್ರಕ್ಕೆ ಉಪಯುಕ್ತ ಕೊಡುಗೆ ನೀಡಿದ ಚಿದಾನಂದಮೂರ್ತಿ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯಬೇಕು. ಹೀಗಾಗಿ, ಸಭಾಂಗಣಕ್ಕೆ ಅವರ ಹೆಸರನ್ನು ಇಡಲಾಗಿದೆ' ಎಂದರು.

ಆಸ್ಪತ್ರೆಗೆ ಪುನೀತ್ ಹೆಸರು: '2 ಸಾವಿರ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸುವ ಪ್ರಥಮ ದರ್ಜೆ ಕಾಲೇಜು, 1 ಕಿ.ಮೀ. ಉದ್ದದ ಮೇಲ್ಸೇತುವೆ, ಡಾ.ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣವನ್ನು ಇದೇ 29ರಂದು ಲೋಕಾರ್ಪಣೆ ಮಾಡಲಾಗುವುದು. ದಾಸರಹಳ್ಳಿ ವಾರ್ಡ್‌ನಲ್ಲಿರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯನ್ನು ಮುಂದಿನ ತಿಂಗಳು 16ರಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ. ನಾಯಂಡಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ 200 ಹಾಸಿಗೆಯ ಆಸ್ಪತ್ರೆಗೆ ಕರ್ನಾಟಕ ರತ್ನ ಪುನೀತ್ ರಾಜ್‌ಕುಮಾರ್ ಅವರ ಹೆಸರನ್ನು ನಾಮಕರಣ ಮಾಡಲಾಗುವುದು' ಎಂದು ವಿ. ಸೋಮಣ್ಣ ತಿಳಿಸಿದರು.

ಅಮೆರಿಕ: ತ್ವರಿತ ವೀಸಾ– ವಿವಿಧ ಕ್ರಮಗಳಿಗೆ ಚಾಲನೆ

ನವದೆಹಲಿ (ಪಿಟಿಐ): ಭಾರತದಲ್ಲಿ ವೀಸಾ ನೀಡುವ ಪ್ರಕ್ರಿಯೆಗೆ ಚುರುಕು ನೀಡುವ ಸಂಬಂಧ ಅಮೆರಿಕ ಕೆಲ ನೂತನ ಕ್ರಮಗಳಿಗೆ ಚಾಲನೆ ನೀಡಿದೆ.

'ವೀಸಾ ಕೋರಿ ಮೊದಲ ಬಾರಿಗೆ ಅರ್ಜಿ ಸಲ್ಲಿಸುವವರಿಗೆ ವಿಶೇಷ ಸಂದರ್ಶನ ಆಯೋಜನೆ, ಕಾನ್ಸುಲೇಟ್ ಕಚೇರಿಗಳಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಹೆಚ್ಚಿಸಲಾಗಿದೆ. ಜ.21ರಂದು ಈ ನೂತನ ಕ್ರಮಗಳಿಗೆ ಚಾಲನೆ ನೀಡಲಾಗಿದೆ' ಎಂದು ಅಮೆರಿಕ ರಾಯಭಾರ ಕಚೇರಿ ಭಾನುವಾರ ತಿಳಿಸಿದೆ. ಈ ಕ್ರಮದ ಭಾಗವಾಗಿ, ದೆಹಲಿಯಲ್ಲಿರುವ ರಾಯಭಾರ ಕಚೇರಿ, ಮುಂಬೈ, ಚೆನ್ನೈ, ಕೋಲ್ಕತ್ತ, ಹೈದರಾಬಾದ್‌ನಲ್ಲಿರುವ ಕಾನ್ಸುಲೇಟ್ ಕಚೇರಿಗಳಲ್ಲಿ 'ಶನಿವಾರ ವಿಶೇಷ ಸಂದರ್ಶನ' ಹೆಸರಿನ ಕಾರ್ಯಕ್ರಮದಡಿ ಜ.21ರಂದು ವೀಸಾ ನೀಡಲು ಸಂದರ್ಶನ ನಡೆಸಲಾಯಿತು ಎಂದೂ ತಿಳಿಸಿದೆ.

ಜೈಪುರ ಸಾಹಿತ್ಯೋತ್ಸವ: ಲೇಖಕಿ ದೀಪಾ ಭಾಸ್ತಿ ಅಭಿಮತ

'ಅನುವಾದದಲ್ಲಿ ಧ್ವನ್ಯಾರ್ಥ ಹಿಡಿಯುವ ಕಷ್ಟ'

ಪ್ರಜಾವಾಣಿ ವಾರ್ತೆ

ಜೈಪುರ: ಕನ್ನಡದಿಂದ ಇಂಗ್ಲಿಷ್‌ಗೆ ಅನುವಾದ ಮಾಡುವಾಗ ಕೆಲವು ಧ್ವನ್ಯಾರ್ಥದ ಪದಗಳನ್ನು ಸಮರ್ಥವಾಗಿ ಅನುವಾದಿಸುವುದು ಸವಾಲಾಗಿದೆ ಎಂದು ದೀಪಾ ಭಾಸ್ತಿ ಅವರು ಅನುಭವ ಹಂಚಿಕೊಂಡರು.

'ಟ್ರಾನ್ಸ್‌ಲೇಟಿಂಗ್ ವರ್ಡ್ಸ್, ಟ್ರಾನ್ಸ್‌ಲೇಟಿಂಗ್ ವರ್ಲ್ಡ್ಸ್' ಎಂಬ ಅನುವಾದ ಸಂಬಂಧಿ ಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಅಂತೆ ಎಂಬ ಕನ್ನಡ ಪದವನ್ನು ಇಟ್ ಸೀಮ್ಸ್, ಅಪಾರೆಂಟ್ಲಿ ಎಂದೆಲ್ಲ ಇಂಗ್ಲಿಷ್‌ನಲ್ಲಿ ಹೇಳಬಹುದು. ಆದರೆ, ಅದರಿಂದ ಕನ್ನಡದ ಮೂಲ ಧ್ವನಿ ದಾಟಿಸಿದಂತೆ ಆಗುವುದಿಲ್ಲ' ಎಂದು ಹೇಳಿದರು.

ಬಾನು ಮುಷ್ತಾಕ್ ಅವರ 'ಶಾಯಿಸ್ತಾ ಮಹಲ್‌ನ ಕಲ್ಲು ಮಹಡಿಗಳು' ಎಂಬ ಕಥನ ಭಾಗದ ಸಾಲುಗಳ ಅನುವಾದವನ್ನು ಅವರು ವಾಚಿಸಿದರು.

ಕವಯಿತ್ರಿ ಸನಾ ಎಹ್ಸಾನ ಅವರು ಪಾಕಿಸ್ತಾನಿ ಎಂಬ ಕಾರಣಕ್ಕೆ ಭೌತಿಕವಾಗಿ ಸಾಹಿತ್ಯೋತ್ಸವಕ್ಕೆ ಬರಲು ಸಾಧ್ಯವಾಗದ್ದನ್ನು ಹೇಳಿಕೊಂಡರು. ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ಕವನ ವಾಚಿಸಿದರು.

ಕ್ವಿಯರ್ ಸಮುದಾಯದ ತುಮುಲಗಳನ್ನು ಒಳಗೊಂಡ '2012' ಎಂಬ ಕವನವನ್ನು ಗಾರ್‌ಫೀಲ್ಡ್ ಫ್ರಾನ್ಸಿಸ್ಕೊ ಡಿಸೋಜಾ ಅವರು ವಾಚಿಸಿದರು. ಅಸ್ಸಾಮಿ ಕತೆಗಾರ್ತಿ ಜ್ಯೂರಿ ಬರುವಾ ತಮ್ಮ ಭಾಷೆಯ ಕಥೆಯ ಪ್ಯಾರಾಗಳನ್ನು ಮೂಲಭಾಷೆ ಹಾಗೂ ಇಂಗ್ಲಿಷ್‌ನಲ್ಲಿ ವಾಚಿಸಿದರು.

'ಒಂದು ಸಮಾಜವಾಗಿ ಯೋಚಿಸುವ ಅಗತ್ಯ'

ಜೈಪುರ:'ನಾವೆಲ್ಲ ಒಂದು ಸಮಾಜವಾಗಿ ಯೋಚಿಸಬೇಕಿದೆ. ಎಲ್ಲವನ್ನೂ ಸರ್ಕಾರ ಮಾಡಲು ಸಾಧ್ಯವಿಲ್ಲ. ಖಾಸಗಿ ಶಿಕ್ಷಣ ಸಂಸ್ಥೆಗಳು ಬೇಕಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪೂರೈಸುತ್ತಿವೆ. ಇವನ್ನು ಬಳಸಿಕೊಂಡು ಇನ್ನಷ್ಟು ಏಳಿಗೆ ಸಾಧಿಸುವುದರ ಕಡೆಗೆ ನಾವೆಲ್ಲ ಗಮನಹರಿಸಬೇಕು' ಎಂದು ಬರಹಗಾರ್ತಿ-ಸಮಾಜ ಸೇವಕಿ ರೋಹಿಣಿ ನಿಲೇಕಣಿ 'ಸಮಾಜ, ಸರ್ಕಾರ, ಬಜಾರ್-ನಾಗರಿಕರ ಮೊದಲ ನಡೆ' ಎನ್ನುವ ಗೋಷ್ಠಿಯಲ್ಲಿ ಹೇಳಿದರು.

ಪ್ರತಿಭಾ ಪಲಾಯನವನ್ನು ನಕಾರಾತ್ಮಕ ಧೋರಣೆಯಿಂದ ನೋಡುವ ಅಗತ್ಯವಿಲ್ಲ. ಅದರ ಪ್ರಮಾಣ ತುಂಬಾ ಕಡಿಮೆ ಇದೆ. ಬುದ್ಧಿಮತ್ತೆ ಹೆಚ್ಚಿಸಿಕೊಂಡರೆ ಇಲ್ಲಿಂದ ಬೇರೆ ದೇಶಗಳಿಗೆ ಹೋಗುವವರು ವಿಶ್ವಮಟ್ಟದಲ್ಲಿ ದೇಶದ ಹೆಸರು ಬೆಳಗುತ್ತಾರೆ. ಮೇಲಾಗಿ, ಇಂತಹ ಕೊಡು- ಕೊಡುಗೆ ದೇಶವೂ ಮುಕ್ತವಾಗಿಯೇ ಇರಲಿದೆ ಎಂದರು.

ಚೌರಾಸಿಯಾ ಬದುಕಿನ ಕಥನ

ಬಾನ್ಸುರಿ ವಾದಕ ಹರಿಪ್ರಸಾದ್ ಚೌರಾಸಿಯಾ ಅವರು ಪೈಲ್ವಾನ್ ಆಗಿದ್ದ ತಮ್ಮ ತಂದೆಯ ಇಚ್ಛೆಗೆ ವಿರುದ್ಧವಾಗಿ ಕೊಳಲನ್ನು ನುಡಿಸಿ, ಅದರಲ್ಲಿಯೇ ಭವಿಷ್ಯವನ್ನು ಕಂಡುಕೊಂಡ ಹೋರಾಟದ ಕಥನವನ್ನು ಮುಗ್ಧ ಮಗುವಿನಂತೆ ಜೈಪುರ ಸಾಹಿತ್ಯೋತ್ಸವದಲ್ಲಿ ಬಿಚ್ಚಿಟ್ಟರು.

'ಬ್ರೆತ್ ಆಫ್ ಗೋಲ್ಡ್' ಎಂಬ ಶೀರ್ಷಿಕೆಯಡಿ ಹರಿಪ್ರಸಾದ್ ಚೌರಾಸಿಯಾ ಅವರನ್ನು ಕುರಿತು ಕೃತಿ ಬರೆದಿರುವ ಸತ್ಯ ಸರಣ್, ಆ ಕೃತಿ ಬರೆಯಲು ಸದಾ ಸಂಗೀತನಿರತರಾದ ಸಾಧಕರನ್ನು ಹಿಡಿಯುವುದೇ ಕಷ್ಟವಾಯಿತೆನ್ನುವುದನ್ನು ಗೋಷ್ಠಿಯಲ್ಲಿ ಹಂಚಿಕೊಂಡರು. ಕೃತಿಯಲ್ಲಿನ ಕೆಲವು ಭಾವನಾತ್ಮಕ ವಿಷಯಗಳನ್ನು ಅವರು ಸಭಿಕರೊಡನೆ ಹಂಚಿಕೊಂಡರು. ಈ ಗೋಷ್ಠಿಗೆ ಕಿಕ್ಕಿರಿದು ಸಂಗೀತಾಸಕ್ತರು ಸೇರಿದ್ದರು.

ಖರ್ಗೆ ಸಂದೇಶ ಯಾಕೆ ಪಸರಿಸುತ್ತಿಲ್ಲ: ಕಾಂಗ್ರೆಸ್ ಮುಖಂಡರಿಗೆ ಜೋಶಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಂದೇಶ ದೇಶದಾದ್ಯಂತ ಪಸರಿಸುವ ಕಾಂಗ್ರೆಸ್ ಮುಖಂಡರು, ಅವರದ್ದೇ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಂದೇಶವನ್ನು ಯಾಕೆ ಪಸರಿಸುತ್ತಿಲ್ಲ? ಕುಟುಂಬ ರಾಜಕಾರಣ ಮತ್ತು ಸರ್ವಾಧಿಕಾರ ಅವರಲ್ಲಿ ತುಂಬಿ ತುಳುಕುತ್ತಿದೆ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಛೇಡಿಸಿದರು.

ಉಡುಪಿಯಲ್ಲಿ ನಡೆದ ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಿಟ್ಲರ್‌ಗೆ ಹೋಲಿಕೆ ಮಾಡಿ ಮಾತನಾಡಿದ ಸಿದ್ದರಾಮಯ್ಯ ಅವರ ಹೇಳಿಕೆಗೆ ಭಾನುವಾರ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ನರೇಂದ್ರ ಮೋದಿ ಚುನಾಯಿತ ಪ್ರತಿನಿಧಿ. ದೇಶದ ನಾಯಕ. ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಸರ್ವಾಧಿಕಾರಿಗಳಂತೆ ವರ್ತಿಸುತ್ತಿಲ್ಲವೆ' ಎಂದು ಪ್ರಶ್ನಿಸಿದರು.

'ಕಾಂಗ್ರೆಸ್ ಡಿಎನ್‌ಎಯಲ್ಲಿ ನಿವೃತ್ತಿ ಮತ್ತು ಪ್ರಾಮಾಣಿಕತೆ ಎನ್ನುವುದೇ ಇಲ್ಲ. ಮಧ್ಯಪ್ರದೇಶ, ಛತ್ತೀಸಗಡ ಮತ್ತು ರಾಜಸ್ತಾನದಲ್ಲಿ ಆಡಳಿತ ನಡೆಸಿರುವ ಅವರು, ಕೊಟ್ಟ ಮಾತು ಈಡೇರಿಸಿದ್ದಾರೆಯೇ? ಕೊಟ್ಟ ಮಾತು ಈಡೇರಿಸಿಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಜನ ಸಿದ್ದರಾಮಯ್ಯ ಅವರನ್ನು ಅಲ್ಲಿಂದ ಓಡಿಸಿದ್ದಾರೆ. ಮೈಸೂರಿನಲ್ಲಿ ಸ್ಪರ್ಧಿಸಲು ಸಾಧ್ಯವಾಗದ ಅವರು, ರಾಜ್ಯದಾದ್ಯಂತ ಸಂಚರಿಸುತ್ತಿದ್ದಾರೆ. ಹಾಗಾಗಿ, ಅಧಿಕಾರಕ್ಕೆ ಬಂದರೆ 10 ಕೆ.ಜಿ ಅಕ್ಕಿ ಕೊಡುತ್ತೇನೆ, ಸಾಧ್ಯವಾಗದಿದ್ದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ ಎಂದಿದ್ದಾರೆ' ಎಂದು ವ್ಯಂಗ್ಯವಾಡಿದರು.

'ಸದ್ಯಕ್ಕಿಲ್ಲ ಕೋವಿಡ್ ಆತಂಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಸೇರಿ ರಾಜ್ಯದಲ್ಲಿ ಕಳೆದ 15 ದಿನಗಳು ವರದಿಯಾಗಿರುವ ಕೋವಿಡ್ ಹೊಸ ಪ್ರಕರಣಗಳನ್ನು ವಿಶ್ಲೇಷಿಸಿರುವ ಕೋವಿಡ್ ತಾಂತ್ರಿಕ ಸಲಹಾ ಸಮಿತಿ, 'ಕೊರೊನಾ ರೂಪಾಂತರಿ ಹೊಸ ತಳಿ ಪತ್ತೆಯಾಗಿಲ್ಲ. ಹೀಗಾಗಿ, ಸದ್ಯಕ್ಕೆ ಕೋವಿಡ್ ಆತಂಕವಿಲ್ಲ' ಎಂದು ತಿಳಿಸಿದೆ.

ವಾರದಿಂದ ಸೋಂಕು ದೃಢ ಪ್ರಮಾಣ ಶೇ 0.11ರಷ್ಟಿದೆ. ಮರಣ ಪ್ರಮಾಣ ದರ ಶೂನ್ಯಕ್ಕೆ ಇಳಿಕೆಯಾಗಿದೆ. ಸದ್ಯ 146 ಸಕ್ರಿಯ ಪ್ರಕರಣಗಳಿದ್ದು, 8 ಮಂದಿ ಮಾತ್ರ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ.

'15 ದಿನಗಳ ಕೋವಿಡ್ ಪ್ರಕರಣಗಳನ್ನು ವಿಶ್ಲೇಷಣೆ ಮಾಡಲಾಗಿದ್ದು, ರಾಜ್ಯದಲ್ಲಿ ಪರಿಸ್ಥಿತಿ ಸಾಕಷ್ಟು ಉತ್ತಮವಾಗಿದೆ. ಕೋವಿಡ್‌ಗೆ ಜ. 17ರಂದು ಕೊಪ್ಪಳದಲ್ಲಿ 65 ವರ್ಷದ ಮಹಿಳೆಯೊಬ್ಬರು ಮಾತ್ರ ಮೃತಪಟ್ಟಿದ್ದಾರೆ' ಎಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಅಧ್ಯಕ್ಷ ಡಾ.ಎಂ.ಕೆ. ಸುದರ್ಶನ್ ಅವರು ತಿಳಿಸಿದ್ದಾರೆ.

'ಬೆಂಗಳೂರು ಹಾಗೂ ಮಂಗಳೂರು ವಿಮಾನ ನಿಲ್ದಾಣಗಳಲ್ಲಿ ತಪಾಸಣೆ ನಡೆಸಲಾಗುತ್ತಿದ್ದು, 15 ದಿನಗಳಲ್ಲಿ 10 ಮಂದಿಯಲ್ಲಿ ಮಾತ್ರ ಪ್ರಕರಣ ವರದಿಯಾಗಿದೆ. ಶೇ 0.3ರಷ್ಟು ಸೋಂಕು ದೃಢ ಪ್ರಮಾಣವಿದೆ. ದೃಢಪಟ್ಟ ಪ್ರಕರಣಗಳ ಮಾದರಿಗಳನ್ನು ವೈರಾಣು ವಂಶವಾಹಿ ಸಂರಚನಾ ವಿಶ್ಲೇಷಣೆಗೆ (ಜೀನೋಮ್ ಸೀಕ್ವೆನ್ಸಿಂಗ್) ಕಳುಹಿಸಲಾಗಿದೆ. ಈವರೆಗೂ ಹೊಸ ರೂಪಾಂತರಿ ಪತ್ತೆಯಾಗಿಲ್ಲ' ಎಂದು ಹೇಳಿದ್ದಾರೆ.

'ಕೋವಿಡ್– 19 ಸಾಂಕ್ರಾಮಿಕದ ಆತಂಕ ಇಲ್ಲವಾದರೂ ಡಯಾಲಿಸಿಸ್, ಯಕೃತ್ತಿನ ಕಾಯಿಲೆ, ಕ್ಯಾನ್ಸರ್ ಮತ್ತು ಸಹ-ಅಸ್ವಸ್ಥ ಸ್ಥಿತಿಯಲ್ಲಿರುವಂತಹರು ಮತ್ತು ಹೆಚ್ಚಿನ ಅಪಾಯದ ಗುಂಪುಗಳ ಜನರು ಜಾಗ್ರತೆ ವಹಿಸಬೇಕು. ರಾಜ್ಯ ಸರ್ಕಾರ ಆಯೋಜಿಸುವ ವಿಶೇಷ ಲಸಿಕೆ ಶಿಬಿರಗಳಲ್ಲಿ ಮುನ್ನೆಚ್ಚರಿಕೆ ಡೋಸ್ ಲಸಿಕೆ ಪಡೆದುಕೊಳ್ಳಬೇಕು' ಎಂದು ಸೂಚಿಸಿದ್ದಾರೆ.

ಚಿತ್ರಾವಳಿ



ಹರಿದಾಸ ಕೀರ್ತನ ಬಳಗ ನಗರದಲ್ಲಿ ಭಾನುವಾರ ಆಯೋಜಿಸಿದ್ದ 2ನೇ ಅಖಿಲ ಭಾರತ ದಾಸ ಸಾಹಿತ್ಯ ಸಮ್ಮೇಳನವನ್ನು ಬೇಲಿಮಠದ ಶಿವರುದ್ರ ಸ್ವಾಮೀಜಿ ಅವರು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿದರು. ಲೇಖಕ ಆರ್. ವಾದಿರಾಜು, ರಾಷ್ಟ್ರೀಯ ವೇದ ವಿಜ್ಞಾನ ಸಂಸ್ಥೆಯ ಕಾರ್ಯದರ್ಶಿ ಎಚ್.ಡಿ.ಲಕ್ಷ್ಮೀನಾರಾಯಣ, ಹರಿದಾಸ ವಿದ್ವಾಂಸ ಅರಳುಮಲ್ಲಿಗೆ ಪಾರ್ಥಸಾರಥಿ, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಮತ್ತು ದಾಸದೇನು ಟ್ರಸ್ಟ್ ಅಧ್ಯಕ್ಷ ವಾಸುದೇವ್ ಅಗ್ನಿಹೋತ್ರಿ ಇದ್ದಾರೆ.



ಮಲೈ ಮಹದೇಶ್ವರ ಬೆಟ್ಟ, ನಿಮಿಷಾಂಬದೇವಿ ದೇವಸ್ಥಾನ, ಶ್ರೀರಂಗಪಟ್ಟಣ, ಮೈಸೂರು ಚಾಮುಂಡಿಬೆಟ್ಟ, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನಕ್ಕೆ ರಾಜಾಜಿನಗರ ವಿಧಾನಸಭೆ ಕ್ಷೇತ್ರದ ಎರಡು ಸಾವಿರ ಭಕ್ತರಿಗೆ ಉಚಿತ ಪ್ರವಾಸವನ್ನು ಕಾಂಗ್ರೆಸ್ ಯುವ ನಾಯಕ ರಘುವೀರ್ ಎಸ್. ಗೌಡ ಆಯೋಜಿಸಿದ್ದರು. ನೇತಾಜಿ ಸುಭಾಷ್ ಚಂದ್ರ ಬೋಸ್ ಆಟದ ಮೈದಾನದಿಂದ 30 ಬಸ್‌ಗಳಲ್ಲಿ ಭಾನುವಾರ ತೆರಳಿದ ಪ್ರವಾಸಿಗರನ್ನು ರಘುವೀರ್ ಹಾಗೂ ಅಪೇಕ್ಷಾ ಕಟ್ಟಿ ಅವರು ಗೋ ಪೂಜೆ ಸಲ್ಲಿಸಿ ಬೀಳ್ಕೊಟ್ಟರು. ಪಾಲಿಕೆ ಮಾಜಿ ಸದಸ್ಯರಾದ ಜಿ.ಕೃಷ್ಣಮೂರ್ತಿ, ಮಂಜುಳ ವಿಜಯಕುಮಾರ್, ವಿಜಯಕುಮಾರ್, ಮುಖಂಡರಾದ ರಾಕೇಶ್, ಗಂಗಾಧರ್ ಇದ್ದರು



ಮೂಡಲಪಾಳ್ಯದ ಜ್ಞಾನಸೌಧದಲ್ಲಿ ವಿ. ಸೋಮಣ್ಣ ಪ್ರತಿಷ್ಠಾನ ಭಾನುವಾರ ಆಯೋಜಿಸಿದ್ದ ಶಿವಕುಮಾರ ಸ್ವಾಮೀಜಿ ನಾಲ್ಕನೇ ಪುಣ್ಯ ಸ್ಮರಣೋತ್ಸವದಲ್ಲಿ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ ಪುಷ್ಪನಮನ ಸಲ್ಲಿಸಿದರು. ವಿಧಾನಪರಿಷತ್ ಸದಸ್ಯ ಅ. ದೇವೇಗೌಡ, ಬಿಬಿಎಂಪಿ ಮಾಜಿ ಸದಸ್ಯ ಸಿ. ದಾಸೇಗೌಡ, ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ಫಾಲನೇತ್ರ, ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ ಇದ್ದರು



ಆರ್.ಟಿ. ನಗರದ ಶಿವರಾಮ ಕಾರಂತ ವೇದಿಕೆಯ 30ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಾಹಿತಿ ಕೆ. ಸತ್ಯನಾರಾಯಣ, ಚಲನಚಿತ್ರ ನಿರ್ದೇಶಕ ಪಿ. ಶೇಷಾದ್ರಿ, ವೇದಿಕೆಯ ಸಂಸ್ಥಾಪಕ ಚಂದ್ರಶೇಖರ ಚಡಗ ಹಾಗೂ ವೇದಿಕೆಯ ಅಧ್ಯಕ್ಷೆ ದೀಪಾ ಫಡ್ಕೆ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರಗಳು

ಶಿಕ್ಷಣ



ಶಾಲಾ-ಕಾಲೇಜುಗಳಲ್ಲಿ ಪಾಠಗಳೆಲ್ಲ ಮುಗಿದಿವೆ. ಪರೀಕ್ಷೆ ದಿನಾಂಕವೂ ಘೋಷಣೆಯಾಗಿದೆ. ವಿದ್ಯಾರ್ಥಿಗಳೀಗ ಕೊನೆಯ ಹಂತದ ಸಿದ್ಧತೆಯಲ್ಲಿದ್ದಾರೆ. ಆ ಸಿದ್ಧತೆ ಹೇಗಿರಬೇಕು. ಇಲ್ಲಿದೆ ಮಾಹಿತಿ.

ಪಾಠಗಳು ಮುಗಿದ ಮೇಲೆ..

ಸದಾಶಿವ್ ಸೊರಟೂರು

ವಿದ್ಯಾರ್ಥಿಗಳೀಗ ಪುಸ್ತಕದ ಕೊನೆಯ ಪುಟದಲ್ಲಿದ್ದಾರೆ ಎಂದರೆ, ಇನ್ನೇನು ಪರೀಕ್ಷೆ ಅವನ ಕೈಗೆ ಎಟುಕುವ ದೂರದಲ್ಲಿದೆ ಎಂತಲೇ ಅರ್ಥ. ಸುಮ್ಮನೆ ಹಾಗೆ ದಿನಪತ್ರಿಕೆಯನ್ನು ಗಮನಿಸಿದರೆ ಸಾಕು ಪರೀಕ್ಷೆಯ ವೇಳಾಪಟ್ಟಿ ದೊಡ್ಡ ಅಕ್ಷರದಲ್ಲಿ ಮುದ್ರಿತವಾಗಿರುತ್ತದೆ. ವಿದ್ಯಾರ್ಥಿಗೆ ಭಯ, ಆತಂಕ. ಎಲ್ಲ ಪಠ್ಯಗಳು(ಸಿಲಬಸ್) ಮುಗಿದಿವೆ, ಪರೀಕ್ಷೆ ದಿನಾಂಕವೂ ಬಂದಿದೆ. ಆದರೆ ತಯಾರಿ ಹೇಗೆ? ಎಂಬ ದೊಡ್ಡ ಪ್ರಶ್ನೆ ಎದುರಾಗುತ್ತದೆ.

ನೋಡಿ, ಈಗಾಗಲೇ ಎಸ್ಸೆಸ್ಸೆಲ್ಸಿ ಮತ್ತು ಪಿಯು ತರಗತಿಗಳ ಪರೀಕ್ಷಾ ವೇಳಾಪಟ್ಟಿ ಪ್ರಕಟವಾಗಿ ತಿಂಗಳಾಯ್ತು. ಬಹುಶಃ ಆ ಮಕ್ಕಳ ಆಯಾ ತರಗತಿಯ ಪಠ್ಯಗಳು ಕೂಡ ಇನ್ನೇನು ಮುಗಿಯಲ್ಲಿವೆ. ಪರೀಕ್ಷೆಗೆ ತಯಾರಿ ಗಂಭೀರವಾಗಬೇಕಿದೆ.

ವಿದ್ಯಾರ್ಥಿಯ ಓದನ್ನು ನಾವು ಎರಡು ರೀತಿಯಲ್ಲಿ ವಿಭಾಗಿಸಬಹುದು. ಸಿಲಬಸ್ ಮುಗಿಯುವ ಮೊದಲಿನ ಓದು ಮತ್ತು ನಂತರದ ಓದು. ವಿದ್ಯಾರ್ಥಿಗಳು ಅಂದಂದಿನ ಪಾಠವನ್ನು ಅಂದಂದು ಓದಿ, ಕಿರುಪರೀಕ್ಷೆ ಬರೆದು ಮುಚ್ಚಿಟ್ಟು ಮುಂದೆ ಹೋಗಿರುತ್ತಾರೆ. ಪೂರ್ತಿ ಪಠ್ಯ ಮುಗಿದ ಮೇಲೆ ಎಲ್ಲವನ್ನೂ ಮುಂದೆ ಹರಡಿಕೊಂಡು ಮಾಡಿಕೊಳ್ಳಬೇಕಾದ ತಯಾರಿ ಬಹಳ ಮುಖ್ಯವಾದದ್ದು. ಇದು ಮಗುವಿಗೆ ನಿಜಕ್ಕೂ ಬಂಗಾರದ ಅವಧಿ. ಸಿಲಬಸ್ ಮುಗಿದ ಮೇಲೆ ವಿದ್ಯಾರ್ಥಿಯ ತಯಾರಿಗಳೇನು? ಒಂದಷ್ಟು ಮಾಹಿತಿ ಇಲ್ಲಿದೆ.

ನಕಾರಾತ್ಮಕ ತಂತ್ರದ ಯೋಚನೆಯೇ ಬೇಡ

ಪತ್ರಿಕೆ ತೀರಾ ಸುಲಭ ಇರಬಹುದಾ, ಅಯ್ಯೊ ತುಂಬಾ ಕಷ್ಟ ಇದ್ರೆ? ಪರೀಕ್ಷೆ ರೂಮಿನಲ್ಲಿ ಏನಾದ್ರೂ ಸಹಾಯವಾಗಬಹುದಾ? ಗ್ರೇಸ್ ಮಾರ್ಕ್ಸ್‌ಗೆ ಅವಕಾಶ ಸಿಗಬಹುದಾ? ಕೋವಿಡ್ ಹೆಚ್ಚಾಗಿ ಲಾಕ್‌ಡೌನ್ ಆಗಬಹುದು? ಇಂತಹ ವಿಚಿತ್ರ ಯೋಚನೆಗಳಿಂದ ದೂರ ಇರಿ. ಇವು ನಿಮ್ಮ ಶಿಸ್ತುಬದ್ಧ ಓದನ್ನು ಕೊಲ್ಲುತ್ತವೆ.

ಶಿಕ್ಷಕರ ಸಂಪರ್ಕದಲ್ಲಿರಿ

ಸಿಲಬಸ್ ಮುಗೀತು ಅಂದರೆ ಶಾಲೆ-ಕಾಲೇಜು ಬಾಗಿಲು ಮುಚ್ಚಿತು ಅಂತಲ್ಲ. ಶಿಕ್ಷಕರು ಹೇಳುವವರೆಗೂ ಶಾಲೆಗೆ ಹೋಗಿ. ನಿಮ್ಮ ಶಿಕ್ಷಕರೊಂದಿಗೆ ಸಂಪರ್ಕದಲ್ಲಿರಿ. ನಿಮ್ಮ ಓದಿನ ಅನುಮಾನಗಳನ್ನು ಗುರುತು ಮಾಡಿಕೊಂಡು ಅವರ ಮುಂದಿಟ್ಟು ಉತ್ತರ ಕಂಡುಕೊಳ್ಳಿ. ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಅವರು ಖಂಡಿತ ನಿಮಗೆ ಸಲಹೆ-ಸೂಚನೆ ನೀಡುತ್ತಾರೆ.

ಓದಿನ ಸ್ವರೂಪ

ಏನನ್ನು ಓದಬೇಕು? ಎಷ್ಟು ಓದಬೇಕು? ಪ್ರಶ್ನೆಗಳ ಸ್ವರೂಪ ಹೇಗಿರುತ್ತದೆ? ಇಷ್ಟು ಬರೆಯಲು ಎಷ್ಟು ಸಮಯಬೇಕು? ಎಂಬುದನ್ನು ತಿಳಿಯಲು ಪ್ರಶ್ನೆಪತ್ರಿಕೆಯ ನೀಲನಕ್ಷೆ ಸಹಾಯ ಮಾಡುತ್ತದೆ. ಸಂಬಂಧಿಸಿದ ಶಿಕ್ಷಕರಿಂದ ಅದನ್ನು ಸಂಗ್ರಹಿಸಿಕೊಳ್ಳಬೇಕು. ಈ ಹಿಂದೆ ಬಂದ ಪ್ರಶ್ನೆಪತ್ರಿಕೆಗಳು ನಿಮ್ಮ ದಾರಿ ದೀಪ. ಅದರ ಸಹಾಯದಿಂದ ತಯಾರಿ ನಡೆಸಬಹುದು. ಮೌಲ್ಯಮಾಪನದಲ್ಲಿ ಉತ್ತರಕ್ಕೆ ಅಂಕಗಳನ್ನು ಹೇಗೆ ಹಂಚಲಾಗಿರುತ್ತದೆ? ಉತ್ತರ ಬರೆಯುವ ಕ್ರಮ ಹೇಗೆ? ಯಾವ ಪ್ರಶ್ನೆಗೆ ಎಷ್ಟು ಉತ್ತರ ಬೇಕಾಗುತ್ತದೆ ಎಂಬುದು ಉತ್ತರ ಸೂಚಿಯಲ್ಲಿ ಇರುತ್ತದೆ. ಶಿಕ್ಷಕರಿಗೆ ಕೇಳಿದರೆ ಅದನ್ನು ಒದಗಿಸಿಕೊಡುತ್ತಾರೆ.

ಪುನರಾವರ್ತನೆ ಮತ್ತು ಅಭ್ಯಾಸ

ಪಾಠ ಬೋಧಿಸುವಾಗ ಶಿಕ್ಷಕರಿಗೆ ಕೇವಲ ಪರೀಕ್ಷೆ ಗಮನದಲ್ಲಿರುವುದಿಲ್ಲ. ಮಗುವಿಗೆ ವಿಷಯ ಜ್ಞಾನ ನೀಡುವುದಾಗಿರುತ್ತದೆ. ವಿದ್ಯಾರ್ಥಿಗಳು ಕೂಡ ಪಾಠದ ಆಶಯ ಕಲಿಯುತ್ತಾ ಹೋಗುತ್ತಾರೆ. ಆದರೆ ಸಿಲಬಸ್ ಮುಗಿದ ನಂತರದ ಎಲ್ಲಾ ಅವಧಿಯು ಕೇವಲ ಪರೀಕ್ಷೆ ದೃಷ್ಟಿಯದ್ದಾಗಿರುವುದರಿಂದ ಆ ಸಮಯವನ್ನು ಪರೀಕ್ಷಾ ದೃಷ್ಟಿಯಿಂದ ಪುನರಾವರ್ತನೆಗೆ ಒಡ್ಡಿಕೊಳ್ಳಬೇಕಾಗುತ್ತದೆ. ಓದಿದ್ದನ್ನು ಪದೇ ಪದೇ ಓದುವುದರಿಂದ ನೆನಪಿನಲ್ಲಿ ಉಳಿಯುತ್ತದೆ. ತರಗತಿಯಲ್ಲಿನ ಪಾಠದಷ್ಟೇ ಪುನರಾವರ್ತನೆಯೂ ಕೈ ಹಿಡಿಯುವುದರಿಂದ ಇದನ್ನು ಜತನವಾಗಿ ಮಾಡಬೇಕು. ಅದಕ್ಕೊಂದು ವೇಳಾಪಟ್ಟಿ, ಶಿಸ್ತುಬದ್ಧ ಕ್ರಮ ಬೇಕಾಗುತ್ತದೆ.

ಪೂರ್ವ ಸಿದ್ಧತೆ ಮತ್ತು ಅಣಕು ಪರೀಕ್ಷೆಗಳು

ಪಠ್ಯಮುಗಿಸಿ ಒಂದೆರಡು ವಾರಗಳ ಪುನರಾವರ್ತನೆಯ ನಂತರ ಶಾಲೆ-ಕಾಲೇಜುಗಳಲ್ಲಿ ಒಂದೆರಡು ಪೂರ್ವ ಸಿದ್ಧತಾ ಪರೀಕ್ಷೆ ನಡೆಸಲಾಗುತ್ತದೆ. ವಿದ್ಯಾರ್ಥಿ ಯಾವ ಕಾರಣಕ್ಕೂ ಇದನ್ನು ತಪ್ಪಿಸಿಕೊಳ್ಳಬಾರದು. ಮುಖ್ಯ ಪರೀಕ್ಷೆಗೆ ನಡೆಸುವ ತಾಲೀಮು ಇದು. ಇಲ್ಲಿ ನೀವು ನಿಮ್ಮ ತಪ್ಪುಗಳನ್ನು ಸುಧಾರಿಸಿಕೊಳ್ಳಲು ಅನುಕೂಲ. ನೀವು ಉತ್ತರ ಬರೆಯುವ ಕ್ರಮ ಸರಿಯಾದದ್ದೇ ಎಂಬುದು ಸ್ಪಷ್ಟವಾಗುತ್ತದೆ. ಅದಲ್ಲದೆ ಮನೆಯಲ್ಲಿ ವಿದ್ಯಾರ್ಥಿಗಳು ತಾವೇ ಒಂದಷ್ಟು ಅಣಕು ಪರೀಕ್ಷೆಗಳಿಗೆ ಒಡ್ಡಿಕೊಳ್ಳಬೇಕು. ತಮ್ಮ ಉತ್ತರವನ್ನು ತಾವೇ ಅವಲೋಕಿಸಕೊಳ್ಳಬೇಕು. ಇದು ಅವರಿಗೆ ಆತ್ಮಸ್ಥೈರ್ಯವನ್ನು, ಭರವಸೆಯನ್ನು, ಪರೀಕ್ಷೆ ಬಗ್ಗೆ ಹಿಡಿತವನ್ನು ದಯಪಾಲಿಸುತ್ತದೆ.


ತುಂಬಾ ಮೌಲ್ಯಯುತ ಅವಧಿ

ವರ್ಷವಿಡೀ ಓದಿದ ಓದು ಒಂದು ಹದಕ್ಕೆ ಬರುವ ಸಮಯವಿದು. ಬರೀ ಈ ಅವಧಿಯನ್ನಷ್ಟೆ ಚೆನ್ನಾಗಿ ದುಡಿಸಿ ಕೊಂಡು ಪರೀಕ್ಷೆಯಲ್ಲಿ ಗೆದ್ದವರು ತುಂಬಾ ಜನರಿದ್ದಾರೆ. ಈ ಸಮಯದ ಪ್ರತಿ ಗಂಟೆಗಳೂ ಮುಖ್ಯವಾಗುತ್ತವೆ. ಬೇರೆ ಯಾವುದೇ ವಿಚಾರಕ್ಕೆ ಸಮಯ ವ್ಯರ್ಥ ಮಾಡದೇ ಕೇವಲ ಪರೀಕ್ಷೆ ದೃಷ್ಟಿಯಿಂದ ಮಿತವಾಗಿ ಹಣವನ್ನು ಖರ್ಚು ಮಾಡುವಂತೆ ಸಮಯವನ್ನು ಬಳಸಿಕೊಳ್ಳಬೇಕು. ಪರೀಕ್ಷೆಗೆ ತುಂಬಾ ಹತ್ತಿರದ ಸಮಯವಾದ್ದರಿಂದ ಈ ಸಮಯದ ಪ್ರಾಮಾಣಿಕ ಓದು ನಿಮಗೆ ಪರೀಕ್ಷೆಯಲ್ಲಿ ಕೈ ಹಿಡಿಯುತ್ತದೆ.

ಆರೋಗ್ಯ ಮತ್ತು ಆತ್ಮವಿಶ್ವಾಸ

ಸಿಲಬಸ್ ಮುಗಿದು, ಪರೀಕ್ಷಾ ದಿನಾಂಕ ಘೋಷಣೆ ಆಗುತ್ತಿದ್ದಂತೆ ಸಾಮಾನ್ಯವಾಗಿ ಕೆಲವು ವಿದ್ಯಾರ್ಥಿಗಳು ಒತ್ತಡಕ್ಕೆ ಒಳಗಾಗುತ್ತಾರೆ. ಅದು ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯದ ಮೇಲೂ ಪರಿಣಾಮ ಬೀರಬಹುದು. ಈ ಅವಧಿಯ ಪರೀಕ್ಷೆಗೆ ತುಂಬಾ ಮುಖ್ಯಕಾಲ. ಹಾಗಾಗಿ ಆರೋಗ್ಯದ ಬಗ್ಗೆಯೂ ಗಮನ ಹರಿಸಬೇಕು. ಸರಿಯಾದ ಊಟ, ನಿದ್ದೆ, ವಿಶ್ರಾಂತಿ ಅಗತ್ಯವಾಗಿ ಬೇಕು. ಇದರ ಮಧ್ಯೆ ವಿದ್ಯಾರ್ಥಿ ತಮ್ಮ ಆತ್ಮವಿಶ್ವಾಸವನ್ನು ಕಾಯ್ದಿಟ್ಟುಕೊಳ್ಳಬೇಕಾಗುತ್ತದೆ. ನಾನು ಸರಿಯಾಗಿ ಓದಿದ್ದೇನೆ. ಪರೀಕ್ಷೆ ಚೆನ್ನಾಗಿಯೇ ಬರೆಯುತ್ತೇನೆ. ಒಳ್ಳೆಯ ಅಂಕಗಳು ಬರುತ್ತವೆ ಎಂಬ ಸಕಾರಾತ್ಮಕ ಭಾವನೆಯು ಪರೀಕ್ಷೆಯಲ್ಲಿ ವಿದ್ಯಾರ್ಥಿಯನ್ನು ಗೆಲ್ಲಿಸುತ್ತವೆ.

ಕೆಎಎಸ್: ಭಾಷೆ ಆಯ್ಕೆ ಹೇಗೆ?



ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ಪ್ರದೀಪ್ ಕುಮಾರ್ ವಿ.

● ನಾನು ಬಿ.ಎಸ್ಸಿ ಪದವಿಯ ನಂತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸುತ್ತಿದ್ದೇನೆ. ಕೆಎಎಸ್ ಮುಖ್ಯ ಪರೀಕ್ಷೆಯಲ್ಲಿ 5 ಪತ್ರಿಕೆಗಳಿದ್ದು ಅದರಲ್ಲಿ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಗಳ ಆಯ್ಕೆಗಳಿವೆ. ನಾವು ಯಾವುದಾದರೂ ಒಂದು ಪತ್ರಿಕೆಯನ್ನು ಕನ್ನಡ ಭಾಷೆಯಲ್ಲಿ ಬರೆದು ಇನ್ನೊಂದನ್ನು ಇಂಗ್ಲಿಷ್‌ನಲ್ಲಿ ಬರೆಯಬಹುದೇ?

ಅಜೇಯ, ಬಾಗಲಕೋಟೆ.

ಕರ್ನಾಟಕ ಲೋಕಸೇವಾ ಆಯೋಗ ನಡೆಸುವ ಕೆಎಎಸ್ ಮುಖ್ಯ ಪರೀಕ್ಷೆಯ ಮಾದರಿ ಹೀಗಿರುತ್ತದೆ.

- ಅರ್ಹತಾದಾಯಕ ಪತ್ರಿಕೆಗಳು (150 ಅಂಕಗಳ 2 ಪತ್ರಿಕೆಗಳು): ಕಡ್ಡಾಯ ಕನ್ನಡ ಮತ್ತು ಕಡ್ಡಾಯ ಇಂಗ್ಲಿಷ್.
- ಕಡ್ಡಾಯ ಪತ್ರಿಕೆಗಳು (250 ಅಂಕಗಳ 5 ಪತ್ರಿಕೆಗಳು; ಒಟ್ಟಾರೆ 1250 ಅಂಕಗಳು)
- **ಪ್ರಬಂಧ-1:** ◆ ಸಾಮಾನ್ಯ ಅಧ್ಯಯನ-2, ◆ ಸಾಮಾನ್ಯ ಅಧ್ಯಯನ-3 ◆ ಸಾಮಾನ್ಯ ಅಧ್ಯಯನ-4 ◆ ಸಾಮಾನ್ಯ ಅಧ್ಯಯನ-5
- ಕಡ್ಡಾಯ ಪ್ರಶ್ನೆ ಪತ್ರಿಕೆಗಳು ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡರಲ್ಲೂ ಮುದ್ರಿಸಲಾಗಿರುತ್ತದೆ. ನಮಗಿರುವ ಮಾಹಿತಿಯಂತೆ, ಅಭ್ಯರ್ಥಿಗಳು ಪತ್ರಿಕೆಯ ಉತ್ತರಗಳನ್ನು ಸಂಪೂರ್ಣವಾಗಿ ಕನ್ನಡ ಅಥವಾ ಇಂಗ್ಲಿಷ್‌ನಲ್ಲಿ ಉತ್ತರಿಸಬೇಕು. ನಿಖರವಾದ ಮಾಹಿತಿಗಾಗಿ 2023ರ ಪರೀಕ್ಷೆಯ ಅಧಿಸೂಚನೆಯನ್ನು ಗಮನಿಸಿ ಅಥವಾ ಕರ್ನಾಟಕ ಲೋಕಸೇವಾ ಆಯೋಗದ ಅಧಿಕೃತ ಜಾಲತಾಣವನ್ನು ಗಮನಿಸಿ: https://kpsc.kar.nic.in/

● ನಾನು ದ್ವಿತೀಯ ಪಿಯುಸಿ ಓದುತ್ತಿದ್ದೇನೆ. ಮುಂದೆ, ಎಂಬಿಬಿಎಸ್ ಅಥವಾ ಬಿ.ಎಸ್ಸಿ ಮಾಡಲು ಆಸಕ್ತಿ ಇದೆ. ಆದರೆ, ಯಾವುದೇ ತಯಾರಿ ನಡೆಸಿರುವುದಿಲ್ಲ. ಈ ಕಡಿಮೆ ಅವಧಿಯಲ್ಲಿ ನಾನು ಯಾವ ರೀತಿ ಓದಬೇಕು? ಈ ಪದವಿಗಳಲ್ಲಿ ಯಾವುದು ಉತ್ತಮ ಎಂದು ನನಗೆ ತಿಳಿಯುತ್ತಿಲ್ಲ. ಮಾರ್ಗದರ್ಶನ ಮಾಡಿ.

ಹೆಸರು, ಊರು ತಿಳಿಸಿಲ್ಲ.

ನಿಮಗೆ ವೈದ್ಯಕೀಯ ವೃತ್ತಿಯಲ್ಲಿ ಆಸಕ್ತಿಯಿದ್ದರೆ ಈಗಲೂ ಕಾಲ ಮಿಂಚಿಲ್ಲ. ಈ ವೃತ್ತಿಯಲ್ಲಿ ಯಶಸ್ವಿಯಾಗಲು ಸೇವಾ ಮನೋಭಾವ, ಜ್ಞಾಪಕ ಶಕ್ತಿ, ಪ್ರಾಮಾಣಿಕತೆ, ಸಮಯದ ನಿರ್ವಹಣೆ, ವೃತ್ತಿ ಮತ್ತು ವೈಯಕ್ತಿಕ ಬದುಕಿನ ಸಮತೋಲನ ಅತ್ಯಗತ್ಯ. ನೀಟ್ ಪರೀಕ್ಷೆಯಲ್ಲಿ ಯಶಸ್ವಿಯಾಗಲು ಸಮಗ್ರ ಮತ್ತು ಆಳವಾದ ಓದುವಿಕೆ, ಏಕಾಗ್ರತೆ, ಪರಿಶ್ರಮ, ದೃಢತೆ, ಗೆಲ್ಲುವ ಆಶಾಭಾವನೆ ಅತ್ಯಗತ್ಯ. ಹಿಂದಿನ ವರ್ಷಗಳ ರ‍್ಯಾಂಕ್ ಮತ್ತು ಅಂಕಗಳ ಆಧಾರದ ಮೇಲೆ, ನಾನಾ ಕಾಲೇಜುಗಳಲ್ಲಿ ಸೀಟ್ ಲಭಿಸಿದ ಮಾಹಿತಿಯನ್ನು ಪರಿಶೀಲಿಸಿ, ನಿಮ್ಮ ಗುರಿ ಮತ್ತು ಕಾರ್ಯತಂತ್ರವನ್ನು ನಿರ್ಧರಿಸಬೇಕು.

ನಿಮಗಿರುವ ಎರಡು ಆಯ್ಕೆಗಳಲ್ಲಿ, ಮೊದಲ ಆದ್ಯತೆ ಎಂಬಿಬಿಎಸ್ ಆಗಿರಲಿ. ಪರಿಣಾಮಕಾರಿ ಓದುವಿಕೆ ಮತ್ತು ಜ್ಞಾಪಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುವ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:

https://www.youtube.com/watch?v=3PzmKRaJHmk

● ನಾನು ಬಿಎ ಅಂತಿಮ ವರ್ಷದ ವಿದ್ಯಾರ್ಥಿ. ಬಿಎ ಮುಗಿದ ನಂತರ ಅರ್ಥಶಾಸ್ತ್ರದಲ್ಲಿ ಎಂಎ ಮಾಡಬೇಕು ಎಂದು ನಿರ್ಧರಿಸಿದ್ದೇನೆ. ಹೀಗೆ ಮಾಡಿದರೆ ಉಪನ್ಯಾಸಕರಾಗಬಹುದೇ? ಅಥವಾ, ಬೇರೆ ಆಯ್ಕೆಗಳಿವೆಯೇ

ಹೆಸರು, ಊರು ತಿಳಿಸಿಲ್ಲ.

ಎಂಎ ನಂತರ ಬಿ.ಇಡಿ ಮಾಡಿ, ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ಪ್ರೌಢಶಾಲೆಗಳಲ್ಲಿ/ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರಾಗಬಹುದು. ಶಿಕ್ಷಕ ವೃತ್ತಿಯನ್ನು ಅನುಸರಿಸಲು ಆಳವಾದ ಜ್ಞಾನದ ಜೊತೆಗೆ ಸಂವಹನ ಕೌಶಲ, ಸಮಯದ ನಿರ್ವಹಣೆ, ತಾಳ್ಮೆ, ಸಹನೆ, ನಾಯಕತ್ವದ ಕೌಶಲ ಮತ್ತು ವೃತ್ತಿಯ ಬಗ್ಗೆ ಅಭಿರುಚಿಯಿರಬೇಕು.

ಅರ್ಥಶಾಸ್ತ್ರದಲ್ಲಿ ಎಂಎ ಮಾಡಿದ ನಂತರ ಬ್ಯಾಂಕಿಂಗ್, ಹಣಕಾಸು, ಸಂಶೋಧನೆ ಮತ್ತು ವಿಶ್ಲೇಷಣೆ, ಬಂಡವಾಳ ಹೂಡಿಕೆ, ಮಾಧ್ಯಮ, ವಿಷಯಾಭಿವೃದ್ಧಿ ಮುಂತಾದ ಕ್ಷೇತ್ರಗಳಲ್ಲಿಯೂ ಅವಕಾಶಗಳಿವೆ ಹಾಗೂ, ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಸರ್ಕಾರಿ ವಲಯದ ಇಲಾಖೆಗಳಲ್ಲಿಯೂ ವೃತ್ತಿಯನ್ನು ಅರಸಬಹುದು.

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಮತ್ತು ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ, ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಹಾಗೂ ವೃತ್ತಿ ಸಲಹೆಗಾರ ವಿ. ಪ್ರದೀಪ್‌ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.inಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಡಿಬಿಎಸ್ ಸ್ಕಾಲರ್‌ಷಿಪ್ ಪ್ರೋಗ್ರಾಂ

- **ವಿವರ:** 9 ಅಥವಾ 10ನೇ ತರಗತಿ ವಿದ್ಯಾರ್ಥಿಗಳಿಗೆ ತಮ್ಮ ಶಿಕ್ಷಣವನ್ನು ಮುಂದುವರಿಸಲು ಆರ್ಥಿಕ ನೆರವು ನೀಡುವುದಕ್ಕಾಗಿ ಡಿಬಿಎಸ್ ಬ್ಯಾಂಕ್ ಸ್ಕಾಲರ್‌ಷಿಪ್ ಪ್ರೋಗ್ರಾಂ ರೂಪಿಸಿದೆ. ಇದು ವಿಶೇಷವಾಗಿ ಪೊಲೀಸ್ ಸಿಬ್ಬಂದಿ ಮಕ್ಕಳಿಗಾಗಿಯೇ ರೂಪಿಸಿರುವ ಕಾರ್ಯಕ್ರಮವಾಗಿದೆ.
- **ಅರ್ಹತೆ:** ತಮಿಳುನಾಡು, ಕರ್ನಾಟಕ, ಕೇರಳ, ಆಂಧ್ರಪ್ರದೇಶ ಅಥವಾ ಪುದುಚೆರಿಯಲ್ಲಿ ನೆಲೆಸಿರುವ ಪೊಲೀಸ್ ಸಿಬ್ಬಂದಿಯ (ಸಬ್-ಇನ್‌ಸ್ಪೆಕ್ಟರ್ ಮತ್ತು ಅದಕ್ಕಿಂತ ಕೆಳಗಿನ ಶ್ರೇಣಿ) 9 ಅಥವಾ 10ನೇ ತರಗತಿಗೆ ದಾಖಲಾಗಿರುವ ಮಕ್ಕಳು ಅರ್ಜಿ ಸಲ್ಲಿಸಬಹುದು.
- **ಆರ್ಥಿಕ ನೆರವು:** ವಾರ್ಷಿಕ ₹20 ಸಾವಿರ(ಮೂರು ವರ್ಷಗಳವರೆಗೆ)
- **ಅರ್ಜಿ ಸಲ್ಲಿಸಲು ಕೊನೆ ದಿನ:** 5ನೇ ಫೆಬ್ರುವರಿ 2023
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/DBSDS11

ಕೃಪೆ: buddy4study.com

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಮಾದರಿ ಪ್ರಶ್ನೋತ್ತರ

ಎಸ್ಸೆಸ್ಸೆಲ್ಸಿ

I) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಬ್ಯೂಟನೋನ್ ನಾಲ್ಕು ಕಾರ್ಬನ್ ಪರಮಾಣು ಹೊಂದಿರುವ ಸಂಯುಕ್ತವಾಗಿದ್ದು, ಇದರಲ್ಲಿನ ಕ್ರಿಯಾಗುಂಪೆಂದರೆ
(ಎ) ಕಾರ್ಬಾಕ್ಸಿಲಿಕ್ ಆಮ್ಲ (ಬಿ) ಆಲ್ಡಿಹೈಡ್
(ಸಿ) ಕೀಟೋನ್ (ಡಿ) ಆಲ್ಕೋಹಾಲ್

ಉತ್ತರ:- (ಸಿ)

2) ಆವರ್ತಕ ಕೋಷ್ಟಕದ ಆವರ್ತಗಳಲ್ಲಿ ಎಡದಿಂದ ಬಲಕ್ಕೆ ಹೋದಂತೆ ತೋರುವ ಪ್ರವೃತ್ತಿಗೆ ಸಂಬಂಧಿಸಿದಂತೆ ಇರುವ ಈ ಕೆಳಗಿನ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿಯಲ್ಲ.
(ಎ) ಧಾತುಗಳ ಲೋಹೀಯ ಸ್ವಭಾವ ಕಡಿಮೆಯಾಗುತ್ತದೆ
(ಬಿ) ವೇಲೆನ್ಸ್ ಇಲೆಕ್ಟ್ರಾನ್‌ಗಳ ಸಂಖ್ಯೆ ಹೆಚ್ಚಾಗುತ್ತದೆ
(ಸಿ) ಪರಮಾಣುಗಳು ಹೆಚ್ಚು ಸುಲಭವಾಗಿ ತಮ್ಮ ಇಲೆಕ್ಟ್ರಾನ್‌ಗಳನ್ನು ಕಳೆದುಕೊಳ್ಳುತ್ತವೆ
(ಡಿ) ಆಕ್ಸೈಡ್‌ಗಳು ಹೆಚ್ಚು ಆಮ್ಲೀಯವಾಗುತ್ತವೆ

ಉತ್ತರ:- (ಸಿ)

3) ಪರಾಗಕೋಶವು ಈ ಕೆಳಗಿನವುಗಳನ್ನು ಹೊಂದಿದೆ.
(ಎ) ಪುಷ್ಪಪತ್ರಗಳು (ಬಿ)ಅಂಡಾಣುಗಳು
(ಸಿ) ಶಲಾಕ (ಡಿ)ಪರಾಗರೇಣುಗಳು

ಉತ್ತರ:- (ಡಿ)

4) ಸಮರೂಪಿ ಅಂಗಗಳಿಗೆ ಉದಾಹರಣೆಯೆಂದರೆ,______
ಎ) ನಮ್ಮ ತೋಳು ಮತ್ತು ನಾಯಿಯ ಮುಂಗಾಲು
ಬಿ) ನಮ್ಮ ಹಲ್ಲುಗಳು ಮತ್ತು ಆನೆಯ ದಂತಗಳು
ಸಿ) ಆಲೂಗೆಡ್ಡೆ ಮತ್ತು ಹುಲ್ಲಿನ ಉಪಕಾಂಡಗಳು
ಡಿ) ಮೇಲಿನ ಎಲ್ಲವೂ

ಉತ್ತರ:- ಡಿ) ಮೇಲಿನ ಎಲ್ಲವೂ
(ಅನುವಂಶೀಯತೆ ಮತ್ತು ಜೀವವಿಕಾಸ)

5) ನಿಮ್ನ ದರ್ಪಣದಿಂದ ಉಂಟಾದ ಪ್ರತಿಬಿಂಬವು ಮಿಥ್ಯ, ನೇರ ಮತ್ತು ವಸ್ತುವಿಗಿಂತ ದೊಡ್ಡದಾಗಿದೆ. ಹಾಗಾದರೆ ವಸ್ತುವಿನ ಸ್ಥಾನ ಎಲ್ಲಿರಬೇಕು ?
(ಎ) ಪ್ರಧಾನ ಸಂಗಮ ಮತ್ತು ವಕ್ರತಾ ಕೇಂದ್ರಗಳ ನಡುವೆ.
(ಬಿ) ವಕ್ರತಾ ಕೇಂದ್ರದಲ್ಲಿ (ಸಿ) ವಕ್ರತಾ ಕೇಂದ್ರದಿಂದ ದೂರದಲ್ಲಿ
(ಡಿ) ಧ್ರುವ ಮತ್ತು ಪ್ರಧಾನ ಸಂಗಮದ ನಡುವೆ

ಉತ್ತರ:- (ಡಿ)

6) ಮಾನವನ ಕಣ್ಣು ತನ್ನ ಕಣ್ಣಿನ ಮಸೂರದ ಸಂಗಮದೂರವನ್ನು ವಿವಿಧ ದೂರಗಳಲ್ಲಿರುವ ವಸ್ತುಗಳು ಕಾಣುವಂತೆ ಸರಿಹೊಂದಿಸಲು ಕಾರಣ.
(ಎ) ಪ್ರಿಸ್‌ಬಯೊಪಿಯಾ (ಬಿ) ಕಣ್ಣಿನ ಹೊಂದಾಣಿಕೆ
(ಸಿ) ಸಮೀಪದೃಷ್ಟಿ (ಡಿ) ದೂರದೃಷ್ಟಿ

ಉತ್ತರ:- (ಬಿ)

7) ಕಬ್ಬಿಣದ ಕಾವಲಿ ತುಕ್ಕು ಹಿಡಿಯದಂತೆ ತಡೆಗಟ್ಟಲು ಈ ಕೆಳಗಿನವುಗಳಲ್ಲಿ ಯಾವ ವಿಧಾನ ಸೂಕ್ತವಾಗಿದೆ?
(ಎ) ಗ್ರೀಸ್ ಹಚ್ಚುವುದು (ಬಿ) ಬಣ್ಣ ಹಚ್ಚುವುದು
(ಸಿ) ಸತುವಿನ ಲೇಪನ ಮಾಡುವುದು (ಡಿ) ಮೇಲಿನ ಎಲ್ಲವೂ


ಉತ್ತರ:- (ಸಿ)

ಪ್ರಜಾವಾಣಿ ನೋಡಿಯೊ — ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ತೆರೆದ ಪತ್ರರಂಧ್ರವನ್ನು ತೋರಿಸುವ ಚಿತ್ರವನ್ನು ಬರೆದು ಕೆಳಗಿನ ಭಾಗಗಳನ್ನು ಗುರುತಿಸಿ
1) ಕಾವಲು ಕೋಶ 2) ಪತ್ರರಂಧ್ರ 3) ಕ್ಲೋರೋ ಪ್ಲಾಸ್ಟ್


ಉತ್ತರ:-



2) ಶಕ್ತಿಯ ಉತ್ತಮ ಆಕಾರದ ಗುಣಲಕ್ಷಣಗಳನ್ನು ಪಟ್ಟಿ ಮಾಡಿ
ಉತ್ತರ:-
- ಸುಲಭವಾಗಿ ದೊರೆಯಬೇಕು
- ಸುಲಭವಾಗಿ ಸಂಗ್ರಹಿಸುವಂತೆ ಇರಬೇಕು
- ಮಿತವ್ಯಯಕಾರಿಯಾಗಿರಬೇಕು
- ಸುಲಭವಾಗಿ ಸಾಗಿಸಲು ಸಾಧ್ಯವಾಗುವಂತೆ ಇರಬೇಕು
- ಅದು ಪ್ರತಿ ಘಟಕ ಪರಿಮಾಣ ಅಥವಾ ದ್ರವ್ಯರಾಶಿಗೆ ಅತಿಹೆಚ್ಚು ಕೆಲಸ ಮಾಡಬೇಕು

3) ವಿಭವಾಂತರದ ಅಂತರರಾಷ್ಟ್ರೀಯ ಏಕಮಾನ ಯಾವುದು? ವಿಭವಾಂತರವನ್ನು ಅಳೆಯಲು ಬಳಸುವ ಸಾಧನವನ್ನು ಹೆಸರಿಸಿ.
ಉತ್ತರ:-
- ವಿಭವಾಂತರದ ಅಂತಾರಾಷ್ಟ್ರೀಯ ಏಕಮಾನ :- ವೋಲ್ಟ್
- ವಿಭವಾಂತರವನ್ನು ಅಳೆಯಲು ಬಳಸುವ ಸಾಧನ:- ವೋಲ್ಟ್ ಮೀಟರ್

4) ಮಾನವನ ಹೃದಯದ ಛೇದ ನೋಟವನ್ನು ತೋರಿಸುವ ಚಿತ್ರ ಬರೆದು ಭಾಗವನ್ನು ಹೆಸರಿಸಿ
ಉತ್ತರ:-



5) ವಿದ್ಯುದ್ವಿಭಜನೀಯ ಶುದ್ಧೀಕರಣದ ಕುರಿತು ಬರೆಯಿರಿ
ಉತ್ತರ:- ತಾಮ್ರ, ಸತು, ತವರ, ನಿಕ್ಕಲ್, ಬೆಳ್ಳಿ, ಚಿನ್ನ ಇತ್ಯಾದಿಗಳಂಥ ಅನೇಕ ಲೋಹಗಳನ್ನು ವಿದ್ಯುದ್ವಿಭಜನೀಯ ವಿಧಾನದಿಂದ ಶುದ್ಧೀಕರಿಸುವರು. ಈ ವಿಧಾನದಲ್ಲಿ ಅಶುದ್ಧ ಲೋಹವನ್ನು ಧನಾಗ್ರಕ್ಕೆ, ಶುದ್ಧಲೋಹದ ತೆಲು ತಗಡನ್ನು ಋಣಾಗ್ರಕ್ಕೆ ಜೋಡಿಸುವರು. ಲೋಹೀಯ ಲವಣದ ದ್ರಾವಣವನ್ನು ವಿದ್ಯುದ್ವಿಭಜನೀಯವಾಗಿ ಬಳಸುವರು. ವಿದ್ಯುದ್ವಿಭಾಜ್ಯದ ಮೂಲಕ ವಿದ್ಯುತ್ ಅನ್ನು ಹಾಯಿಸಿದಾಗ ಧನಾಗ್ರದ ಅಶುದ್ಧ ಲೋಹವು ವಿದ್ಯುದ್ವಿಭಜನೀಯ ದ್ರಾವಣದಲ್ಲಿ ಕರಗುವುದು. ಅಷ್ಟೇ ಪ್ರಮಾಣದ ಶುದ್ಧ ಲೋಹವು ವಿದ್ಯುದ್ವಿಭಜನೀಯ ದ್ರಾವಣದಿಂದ ಋಣಾಗ್ರದ ಮೇಲೆ ಸಂಗ್ರಹಗೊಳ್ಳುವುದು. ಕರಗುವ ಕಶ್ಮಲಗಳು ದ್ರಾವಣಕ್ಕೆ ಸೇರಿಕೊಂಡರೆ, ಕರಗದೇ ಇರುವ ಕಶ್ಮಲಗಳು ಧನಾಗ್ರದ ಕೆಳಭಾಗದಲ್ಲಿ ಸಂಗ್ರಹಗೊಳ್ಳುತ್ತವೆ.

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

ಭೌತವಿಜ್ಞಾನ

ಮಾದರಿ ಪ್ರಶ್ನೋತ್ತರ

ಪಿಯುಸಿ

(...ಹಿಂದಿನ ಸಂಚಿಕೆಯಿಂದ)

46) ಯಂಗ್ ದ್ವಿ ಸೀಳು-ಗಂಡಿ ಪ್ರಯೋಗದಲ್ಲಿನ ವ್ಯತಿಕರಣ ಪಟ್ಟಿಯಲ್ಲಿ ಕೆಳಗಿನ ಪ್ರತಿಯೊಂದು ಕ್ರಿಯೆ ಉಂಟಾಗುವ ಪರಿಣಾಮವೇನು?
(e) ಆಕರ ಗಂಡಿಯ ಅಗಲವನ್ನು ಹೆಚ್ಚಿಸಿದಾಗ
(ಜಿ) ಏಕವರ್ಣೀಯ ಬೆಳಕಿನ ಆಕರವನ್ನು ಬಿಳಿಯ ಬಣ್ಣದ ಆಕರವಾಗಿ ಬದಲಾಯಿಸಿದಾಗ (ಪ್ರತಿಯೊಂದು ಘಟನೆಯಲ್ಲಿಯೂ ಬದಲಾಗದೇ ಇರುವ, ನಿರ್ದಿಷ್ಟವಾಗಿ ಹೇಳಿದ ಪಾರಾ ಮೀಟರ್‌ನ್ನು ಹೊರತುಪಡಿಸಿ ಎಲ್ಲಾ ಪಾರಾಮೀಟರ್‌ಗಳನ್ನು ತೆಗೆದುಕೊಳ್ಳಿ)

ಉತ್ತರ:-

(e) ಆಕರಗಂಡಿಯ ಅಗಲ ಹೆಚ್ಚಾದಂತೆ ಫ್ರಿಜ್ ವಿನ್ಯಾಸ ಕಡಿಮೆ ಶಾರ್ಪ್ ಹೊಂದುತ್ತದೆ. ಯಾವಾಗ ಆಕರ ಸರಳಿನ ಅಗಲ ಎಷ್ಟು ದೊಡ್ಡದೆಂದರೆ ಅದು ನಿರ್ಬಂಧನೆ $s/S \le \lambda/d$ಯನ್ನು ತೃಪ್ತಿಪಡಿಸದಿದ್ದರೆ ವ್ಯತಿಕರಣ ಪಟ್ಟೆಯು ಮಾಯವಾಗುತ್ತದೆ.

(ಜಿ) ಬೇರೆ ಬೇರೆ ಬಿಳಿಯ ಬಣ್ಣದ ಘಟಕಗಳು ವ್ಯತಿಕರಣ ಪಟ್ಟಿಯಲ್ಲಿ ಅಧಿ ವ್ಯಾಪಿಸುತ್ತದೆ. (ಅಸಂಸಕ್ತವಾಗಿ) ಬೇರೆ ಬೇರೆ ಬಣ್ಣದಿಂದ ಉಂಟಾಗುವ ಕೇಂದ್ರ ಪ್ರಕಾಶ ಫ್ರಿಂಜ್ ಅದೇ ಸ್ಥಾನದಲ್ಲಿರುತ್ತದೆ. ಆದುದರಿಂದ ಕೇಂದ್ರದ ಫ್ರಿಂಜ್ ಬಿಳಿಯಾಗಿರುತ್ತದೆ.

P ಬಿಂದುವಿಗೆ $S_2P - S_1P = \lambda b/2$, ಇಲ್ಲಿ λb ($\approx$ 4000 Å) ನೀಲಿ ಬಣ್ಣದ ಘಟಕವು ಇಲ್ಲದಾಗ ಫ್ರಿಂಜ್ ಕೆಂಪು ಬಣ್ಣವಾಗಿ ಕಂಡುಬರುತ್ತದೆ. ಸ್ವಲ್ಪ ಮಟ್ಟಿಗೆ ಮುಂದುವರಿದರೆ $S_2Q - S_1Q = \lambda b = \lambda r/2$ ಇಲ್ಲಿ λb ($\approx$8000Å) ಕೆಂಪು ಬಣ್ಣದ ತರಂಗಾಂತರ ಫ್ರಿಂಜ್ ಪ್ರಭಾವವಾಗಿ ನೀಲಿಯಾಗಿರುತ್ತದೆ.ಈ ರೀತಿಯಾಗಿ ಕೇಂದ್ರದ ಬಿಳಿ ಪ್ರಿಂಜ್‌ಗೆ ಹತ್ತಿರವಾಗಿ ಎರಡೂ ಬದಿಗೆ ಕೆಂಪು ಫ್ರಿಂಜ್ ಮತ್ತು ಇನ್ನೊಂದು ಬದಿ ನೀಲಿಯಾಗಿ ಕಂಡುಬರುತ್ತದೆ. ಕೆಲವು ಪ್ರಿಂಜ್‌ಗಳ ನಂತರ ಯಾವುದೇ ಫ್ರಿಂಜ್ ವಿನ್ಯಾಸ ಕಂಡುಬರುವುದಿಲ್ಲ.

47) ಬ್ರೂಸ್ಟರನ ನಿಯಮದ ಬಗ್ಗೆ ಬರೆಯಿರಿ

ಉತ್ತರ:- ಎರಡು ಪಾರದರ್ಶಕ ಮಾಧ್ಯಮಗಳ ನಡುವಿನ ಸೀಮೆಯಮೇಲೆ ಅಧ್ರುವೀಕೃತ ಬೆಳಕು ಆಪಾತವಾದಾಗ, ಪ್ರತಿಫಲಿತ ಬೆಳಕು ಧ್ರುವೀಕರಣ ಹೊಂದಿ ಅದರ ವಿದ್ಯುತ್ ಸದಿಶವು ವಕ್ರೀಭವಿತ ಮತ್ತು ಪ್ರತಿಫಲಿತ ಕಿರಣಗಳು ಪರಸ್ಪರ ಲಂಬವಾಗಿರುವಾಗ, ಅಪಾತ ಸಮತಲಕ್ಕೆ ಲಂಬವಾಗಿರುವುದು. ಪ್ರತಿಫಲಿತ ತರಂಗವು ವಕ್ರೀಭವಿತ ತರಂಗಕ್ಕೆ ಲಂಬವಾಗಿರುವಾಗ, ಪ್ರತಿಫಲಿತ ತರಂಗವು ಪೂರ್ಣವಾಗಿ ಧ್ರುವೀಕರಣಗೊಂಡ ತರಂಗವಾಗಿರುತ್ತದೆ. ಈ ಸಂದರ್ಭದಲ್ಲಿನ ಆಪಾತಕೋನವನ್ನು ಬ್ರೂಸ್ಟರನ ಕೋನ ಎನ್ನುವರು, ಇದನ್ನು i_B ಎಂದು ಬರೆಯುವರು. i_B ಯು ಸಾಂದ್ರ ಮಾಧ್ಯಮದ ವಕ್ರೀಭವನಾಂಶದೊಂದಿಗೆ ಸಂಬಂಧಿತವಾಗಿದೆ. $i_B + b = \pi/2$ ಆಗಿರುವುದರಿಂದ, ಸ್ನೆಲ್ಲನ ನಿಯಮಾನುಸಾರವಾಗಿ.

$$n = \frac{\sin i_B}{\sin r} = \frac{\sin i_B}{\sin(\pi/2 - i_B)}$$

$$= \frac{\sin i_B}{\cos i_B} = \tan i_B$$

ಇದನ್ನು ಬ್ರೂಸ್ಟರನ ನಿಯಮ ಎನ್ನುವರು.

48) ಯಾವುದನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು?

ಉತ್ತರ:- ವಿದ್ಯುತ್ ಕ್ಷೇತ್ರದ ಎರಡು ಲಂಬ ಘಟಕಗಳಲ್ಲಿ ಒಂದು ಶೂನ್ಯವಾಗಿರುತ್ತದೆ. ಬೇರೆ ಕೋನಗಳಲ್ಲಿ ಎರಡು ಘಟಕಗಳೂ ಇರುತ್ತವೆ. ಆದರೆ ಒಂದು ಇನ್ನೊಂದಕ್ಕಿಂತ ಪ್ರಬಲವಾಗಿರುತ್ತದೆ. ಅಧ್ರುವೀಕೃತ ಪುಂಜದ ಎರಡು ಲಂಬಘಟಕಗಳಿಂದ ಇವುಗಳನ್ನು ಪಡೆದುಕೊಂಡಿರುವುದರಿಂದಾಗಿ ಈ ಎರಡು ಲಂಬ ಘಟಕಗಳ ನಡುವೆ ಸ್ಥಿರವಾದ ಪ್ರಾವಸ್ಥಾ ಸಂಬಂಧವಿರುವುದಿಲ್ಲ. ತಿರುಗುತ್ತಿರುವ ವಿಶ್ಲೇಷಕದಿಂದ ಅಂತಹ ಬೆಳಕನ್ನು ವೀಕ್ಷಿಸಿದಾಗ, ವೀಕ್ಷಕನು ಗರಿಷ್ಠ ಮತ್ತು ಕನಿಷ್ಠ ತೀವ್ರತೆಯನ್ನು ಕಾಣುತ್ತಾನೆ. ಆದರೆ ಪೂರ್ಣ ಕತ್ತಲನ್ನಲ್ಲ. ಇಂತಹ ಬೆಳಕನ್ನು ಆಂಶಿಕ ಧ್ರುವೀಕೃತ ಬೆಳಕು ಎನ್ನುವರು.

49) ಯಾವುದಕ್ಕೆ ಸಮತಲ ಧ್ರುವೀಕೃತ ಬೆಳಕು ಎನ್ನುವರು?

ಉತ್ತರ:- ಸ್ವಾಭಾವಿಕ ಬೆಳಕು, ಉದಾಹರಣೆಗೆ ಸೂರ್ಯನ ಬೆಳಕು, ಅಧ್ರುವೀಕೃತ. ಇದರರ್ಥ ಅಡ್ಡ ಸಮತಲದಲ್ಲಿ ವಿದ್ಯುತ್ ಸದಿಶಗಳು ಎಲ್ಲಾ ಸಾಧ್ಯ ದಿಕ್ಕುಗಳನ್ನು ವೇಗವಾಗಿ ಮತ್ತು ಯಾದೃಚ್ಛಿಕವಾಗಿ ಹೊಂದುತ್ತವೆ. ಪೋಲರಾಯಿಡ್ ಕೇವಲ ಒಂದು ಘಟಕವನ್ನು (ವಿಶೇಷ ಅಕ್ಷಕ್ಕೆ ಸಮಾಂತರವಾದ) ರವಾನಿಸುತ್ತದೆ. ಈ ಬೆಳಕನ್ನು ರೇಖೀಯವಾಗಿ ಧ್ರುವೀಕರಣಗೊಂಡ ಅಥವಾ ಸಮತಲ ಧ್ರುವೀಕೃತ ಬೆಳಕು ಎನ್ನುವರು.

50) ದ್ಯುತಿ ವಿದ್ಯುತ್ ಪರಿಣಾಮ ಕುರಿತು ಹಾಲ್‌ವಾಕ್ ಮತ್ತು ಲಿನಾರ್ಡ್ ಅವಲೋಕನಗಳ ಬಗ್ಗೆ ಬರೆಯಿರಿ

ಉತ್ತರ:- 1888ರಲ್ಲಿ ಹಾಲ್‌ವಾಕ್‌ನು ನಿರಂತರ ಅಧ್ಯಯನದೊಂದಿಗೆ ಋಣವಿದ್ಯುದಾವೇಶದ ಸತುವಿನ ತಟ್ಟೆಯೊಂದಿಗೆ ವಿದ್ಯುತ್ ಧಾರಕವನ್ನು ಜೋಡಿಸಿದನು. ಸತುವಿನ ತಟ್ಟೆಯ ಮೇಲೆ ನೇರಾಳಾತೀತ ಕಿರಣಗಳು ಪತನಗೊಂಡಾಗ ತಟ್ಟೆಯು ಆವೇಶವನ್ನು ಕಳೆದುಕೊಳ್ಳುವುದನ್ನು ಅವಲೋಕಿಸಿದನು. ಅಂತೆಯೇ ತಟಸ್ಥ ಸತುವಿನ ತಟ್ಟೆಯ ಮೇಲೆ ಈ ನೇರಳಾತೀತ ಕಿರಣಗಳು ಪತನಗೊಂಡಾಗ ಅವುಗಳ ಧನಾತ್ಮಕ ವಿದ್ಯುದಾವೇಶ ಹೊಂದುವುದನ್ನು ಗಮನಿಸಿದನು. ಅದರಂತೆ ಧನ ವಿದ್ಯುದಾವೇಶದ ಸತುವಿನ ತಟ್ಟೆಯಮೇಲೆ ಈ ನೇರಳಾತೀತ ಕಿರಣಗಳೂ ಪತನಗೊಂಡಾಗ ಧನ ವಿದ್ಯುದಾವೇಶದ ವರ್ಧನೆಯನ್ನು ಗಮನಿಸಿದನು. ಸತುವಿನ ತಟ್ಟೆಯ ಮೇಲೆ ನೇರಳಾತೀತ ಕಿರಣಗಳು ಪತನಗೊಂಡಾಗ ಋಣ ಆವೇಶಗಳು ಹೊರಸೂಸುವುದನ್ನು ಈ ಅಧ್ಯಯನದಿಂದ ಅವಲೋಕಿಸಿದನು. 1897ರಲ್ಲಿ ಎಲೆಕ್ಟ್ರಾನ್ ಆವಿಷ್ಕಾರದ ನಂತರ, ಉತ್ಸರ್ಜಕ ತಟ್ಟೆಯ ಮೇಲೆ ಬೆಳಕು ಬಿದ್ದಾಗ ಎಲೆಕ್ಟ್ರಾನುಗಳು ಹೊರಬರುತ್ತವೆ ಎಂಬ ವಿಚಾರವು ಸ್ಫುಟವಾಯಿತು. ಎಲೆಕ್ಟ್ರಾನುಗಳು ಋಣ ವಿದ್ಯುದಾವೇಶ ಹೊಂದಿರುವುದರಿಂದ ಅವುಗಳು ವಿದ್ಯುತ್ ಕ್ಷೇತ್ರದಲ್ಲಿ ಸಂಗ್ರಾಹಕ ತಟ್ಟೆಯ ಕಡೆಗೆ ತಳ್ಳಲ್ಪಡುತ್ತವೆ. ನೇರಳಾತೀತ ಕಿರಣಗಳು ಉತ್ಸರ್ಜಕ ಫಲಕದ ಮೇಲೆ ಬಿದ್ದಾಗ ಕಿರಣಗಳ ಆವೃತ್ತಿಯು ನಿರ್ದಿಷ್ಟವಾದ ಕನಿಷ್ಠ ಮೌಲ್ಯಕ್ಕಿಂತ ಕಡಿಮೆಯಿದ್ದರೆ ಎಲೆಕ್ಟ್ರಾನುಗಳು ಹೊರಬರಲಾರವು ಎಂದು ಹಾಲ್‌ವಾಕ್ ಮತ್ತು ಲಿನಾರ್ಡ್ರವರು ಅವಲೋಕಿಸಿದರು. ಈ ಕನಿಷ್ಠ ಆವೃತ್ತಿಯನ್ನು ನಿರ್ಣಾಯಕ ಆವೃತ್ತಿ ಎನ್ನುತ್ತಾರೆ. ಈ ಕನಿಷ್ಠ ಉತ್ಸರ್ಜಕ ಫಲಕದ ಸ್ವಭಾವದ ಮೇಲೆ ಅವಲಂಬಿತವಾಗಿದೆ. ಕೆಲವು ಲೋಹಗಳಾದ ಸತು, ಕ್ಯಾಡ್ಮಿಯಂ, ಮೆಗ್ನೀಷಿಯಂ ಇವುಗಳು ತಮ್ಮ ಮೇಲ್ಮೈಯಿಂದ ಎಲೆಕ್ಟ್ರಾನ್ ಉತ್ಸರ್ಜನ ಮಾಡಲು ಕಿರುತರಂಗಾಂತರವುಳ್ಳ ನೇರಳಾತೀತ ಕಿರಣಗಳಿಗೆ ಮಾತ್ರ ಪ್ರತಿಕ್ರಿಯಿಸುತ್ತವೆ ಎಂದು ತಿಳಿದು ಬಂದಿತು. ಆದಾಗ್ಯೂ ಕೆಲವು ಆಲ್ಕಲೀ ಲೋಹಗಳಾದ ಲೀಥಿಯಂ, ಸೋಡಿಯಂ, ಪೊಟಾಷಿಯಂ, ಸೀಸಿಯಂ ಮತ್ತು ರುಬಿಡಿಯಮ್‌ಗಳು ಗೋಚರ ಬೆಳಕಿಗೆ ಸ್ಪಂದಿಸುತ್ತವೆ. ಈ ಎಲ್ಲ ದ್ಯುತಿ ಸೂಕ್ಷ್ಮ ಲೋಹಗಳ, ಅವುಗಳ ಮೇಲೆ ಆವಿಷ್ಕಾರದ ನಂತರ ಈ ಎಲೆಕ್ಟ್ರಾನುಗಳನ್ನು ದ್ಯುತಿ ಎಲೆಕ್ಟ್ರಾನುಗಳನ್ನು ಕರೆದರು. ಈ ತತ್ವವನ್ನು ದ್ಯುತಿ ವಿದ್ಯುತ್ ಪರಿಣಾಮ ಎನ್ನುತ್ತೇವೆ.

ಪ್ರಜಾವಾಣಿ ನೋಡಿಯೊ — ದ್ವಿತೀಯ ಪಿಯುಸಿ ಭೌತವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸಂವಿಧಾನದಲ್ಲಿ ಪ್ರತಿಪಾದಿಸಿದ ಸಮಾನತೆಯ ತತ್ವಕ್ಕೆ ಆರ್‌ಎಸ್‌ಎಸ್ ವಿರುದ್ಧವಾಗಿದೆ: ಸಿದ್ದರಾಮಯ್ಯ

‘ಹಿಂದುತ್ವ: ಬಿಜೆಪಿ ದುರುದ್ದೇಶಕ್ಕೆ ಯುವಕರು ಬಲಿ’

ಪ್ರಜಾವಾಣಿ ವಾರ್ತೆ


ಸಿದ್ಧರಾಮಯ್ಯ

ಉಡುಪಿ: ‘ಬಿಜೆಪಿಯ ದುರುದ್ದೇಶಪೂರಿತ ಹಿಂದುತ್ವಕ್ಕೆ ಕರಾವಳಿಯ ಯುವಕರು ಬಲಿಯಾಗುತ್ತಿದ್ದಾರೆ. ಈ ಷಡ್ಯಂತ್ರದ ಬಗ್ಗೆ ಈಗಲಾದರೂ ಎಚ್ಚೆತ್ತುಕೊಳ್ಳಬೇಕು’ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

ನಗರದ ಕ್ರಿಶ್ಚಿಯನ್ ಹೈಸ್ಕೂಲ್ ಮೈದಾನದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಪ್ರಜಾಧ್ವನಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ‘ಕಾಂಗ್ರೆಸ್ ಪಕ್ಷವು ಹಿಂದುತ್ವ ಹಾಗೂ ಮನುವಾದದ ವಿರುದ್ಧವಾಗಿದೆಯೇ ಹೊರತು ಹಿಂದೂಗಳ, ಹಿಂದೂ ಧರ್ಮದ ವಿರುದ್ಧವಾಗಿಲ್ಲ. ಆರ್‌ಎಸ್‌ಎಸ್‌ನಲ್ಲಿ ತರಬೇತಿ ಪಡೆದಿರುವ ಬಿಜೆಪಿ ನಾಯಕರು ಹಿಂದುತ್ವದ ಹೆಸರಲ್ಲಿ ಜನರ ದಾರಿ ತಪ್ಪಿಸುತ್ತಿದ್ದಾರೆ. ಬಿಜೆಪಿ ಹಿಂದೂಗಳ ಪರವಾಗಿಲ್ಲ; ಮನುಷ್ಯತ್ವದ ವಿರೋಧಿಯಾಗಿರುವ ಹಿಂದುತ್ವದ ಪರವಾಗಿದೆ’ ಎಂದು ಟೀಕಿಸಿದರು.

‘ಮನುವಾದಿಗಳು ಒಂದು ಧರ್ಮ, ಒಂದು ದೇಶ, ಒಂದು ಭಾಷೆಯನ್ನು ಪ್ರತಿಪಾದಿಸುತ್ತಾರೆ. ಹಲವು ಜಾತಿ, ಧರ್ಮ, ಭಾಷೆಗಳನ್ನು ಒಳಗೊಂಡಿರುವ ರಾಷ್ಟ್ರದಲ್ಲಿ ಎಲ್ಲರೂ ಒಟ್ಟಾಗಿ ಸಾಗಬೇಕು. ಸಂವಿಧಾನದಲ್ಲಿ ಪ್ರತಿಪಾದಿಸಿದ ಸಮಾನತೆಯ ತತ್ವಕ್ಕೆ ಆರ್‌ಎಸ್‌ಎಸ್ ವಿರುದ್ಧವಾಗಿದೆ’ ಎಂದು ಟೀಕಿಸಿದರು.

ಭರವಸೆ ಈಡೇರಿಸದಿದ್ದರೆ ರಾಜಕೀಯ ನಿವೃತ್ತಿ (ಹಾಸನ ವರದಿ): ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ 200 ಯೂನಿಟ್ ಉಚಿತ ವಿದ್ಯುತ್, ಕುಟುಂಬದ ಯಜಮಾನಿಗೆ ₹2 ಸಾವಿರ ಸಹಾಯಧನ, 10 ಕೆ.ಜಿ. ಅಕ್ಕಿಯನ್ನು ಕೊಡುವುದಾಗಿ ಭರವಸೆ ನೀಡಿದ್ದು, ಅದನ್ನು ಈಡೇರಿಸುತ್ತೇವೆ. ಇಲ್ಲದಿದ್ದರೆ ರಾಜಕೀಯ ನಿವೃತ್ತಿ ಘೋಷಿಸುತ್ತೇವೆ’ ಎಂದು ಸಿದ್ದರಾಮಯ್ಯ ಹೇಳಿದರು.

‘ಪ್ರಜಾಧ್ವನಿ’ ಯಾತ್ರೆಯಲ್ಲಿ ಮಾತನಾಡಿರುವ ಅವರು, ‘ಈ ಬಗ್ಗೆ ಜಿಲ್ಲೆಯ ಪ್ರತಿಯೊಬ್ಬರಿಗೆ ಪಕ್ಷದ ಕಾರ್ಯಕರ್ತರೂ ಮನವರಿಕೆ ಮಾಡಿಕೊಡಬೇಕು. ಜಿಲ್ಲೆಯಲ್ಲಿ ಕನಿಷ್ಠ 5 ಸ್ಥಾನಗಳನ್ನು ಗೆಲ್ಲಲೇಬೇಕು’ ಎಂದರು.

ಪ್ರಜಾಧ್ವನಿ ಅಲ್ಲ, ಅಧಿಕಾರಕ್ಕಾಗಿ ಕಾಂಗ್ರೆಸ್ ಧ್ವನಿ: ಎಚ್‌ಡಿಕೆ

ವಿಜಯಪುರ: ‘ಪಂಚರತ್ನ ರಥಯಾತ್ರೆ’ ಬಗ್ಗೆ ಸಿದ್ದರಾಮಯ್ಯ ಮಾಡಿದ್ದಾರೆ ಎನ್ನಲಾದ ಟೀಕೆಗೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದ್ದು, ‘ಹಾಗಿದ್ದರೆ ಕಾಂಗ್ರೆಸ್ ನಡೆಸುತ್ತಿರುವುದು ಏನು? ನಿಮ್ಮದು ಪ್ರಜಾಧ್ವನಿ ಅಲ್ಲ, ಅಧಿಕಾರಕ್ಕಾಗಿ ನಡೆಸುತ್ತಿರುವ ಧ್ವನಿ’ ಎಂದು ತಿರುಗೇಟು ನೀಡಿದರು.

ಮುದ್ದೇಬಿಹಾಳ ವಿಧಾನಸಭೆ ಕ್ಷೇತ್ರದ ಬಳವಾಟ ಗ್ರಾಮದಲ್ಲಿ ‘ಪಂಚರತ್ನ ರಥಯಾತ್ರೆ’ ನಿಮಿತ್ತ ಶನಿವಾರ ರಾತ್ರಿ ಗ್ರಾಮ ವಾಸ್ತವ್ಯ ಮಾಡಿದ್ದ ಅವರು ಭಾನುವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಜಯಪ್ರಕಾಶ ನಾರಾಯಣ್ ಅವರ ಸಿದ್ಧಾಂತವನ್ನು ಗಾಳಿಗೆ ತೂರಿದ ಸಿದ್ದರಾಮಯ್ಯ ಅವಕಾಶವಾದಿ ರಾಜಕಾರಣಿ’ ಎಂದು ಟೀಕಿಸಿದರು.

‘ಲೋಕನಾಯಕ ಜೆಪಿ ಅವರು ಕಟ್ಟಿದ ಪಕ್ಷ ಉಳಿಸಿಕೊಂಡು ಹೊರಟಿದ್ದು ನಾವು. ಅಂಥ ಪಕ್ಷವನ್ನು, ಅವರ ಸಿದ್ಧಾಂತವನ್ನು ಗಾಳಿಗೆ ತೂರಿ ಸಿ.ಎಂ ಕುರ್ಚಿ ಹಿಂದೆ ಓಡಿ ಹೋದವರು ಯಾರು? ನಿಮ್ಮ ಯೋಗ್ಯತೆ ಏನು ಅಂತಾ ಗೊತ್ತಿದೆ. ಸುಮ್ಮನೆ ಜೆಡಿಎಸ್ ಪಕ್ಷದ ಬಗ್ಗೆ ಏನೇನು ಮಾತನಾಡಬೇಡಿ. ಮುಖ್ಯಮಂತ್ರಿ ಆಸೆಗಾಗಿ ಪಕ್ಷ ಬಿಟ್ಟು ಹೋಗಿದ್ದು ನೆನಪಿದೆಯಾ ನಿಮಗೆ? ಜಾತ್ಯತೀತ ತತ್ವ ತಮ್ಮ ಆಸ್ತಿ ಎನ್ನುವ ರೀತಿ ವರ್ತಿಸುತ್ತಿದ್ದೀರಿ. ಜೆಪಿ ಅವರ ಸಿದ್ಧಾಂತಕ್ಕೆ ನೀವು ಬದ್ಧರಾಗಿ ಇದ್ದಿದ್ದರೆ ನೀವು ಅಧಿಕಾರಕ್ಕಾಗಿ ಮಾತೃಪಕ್ಷವನ್ನು ಕಾಲಿನಲ್ಲಿ ಒದ್ದು ಹೋಗುತ್ತಿರಲಿಲ್ಲ. ನಿಮ್ಮಿಂದ ಪಾಠ ಹೇಳಿಸಿಕೊಳ್ಳುವ ಅಗತ್ಯ ನನಗಿಲ್ಲ’ ಎಂದು ಗುಡುಗಿದರು.

‘ನನ್ನ ನೇತೃತ್ವದ ಮೈತ್ರಿ ಸರ್ಕಾರವನ್ನು ಕೆಡವಲು ಧರ್ಮಸ್ಥಳದ ಸಿದ್ಧವನದಲ್ಲಿ ನೀವು ನಡೆಸಿದ ಷಡ್ಯಂತ್ರವನ್ನು ಬಿಚ್ಚಿಡಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದರು.

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಅನುಷ್ಠಾನಗೊಳಿಸಲಾಗದ ಭರವಸೆ ನೀಡುತ್ತಿರುವ ಕಾಂಗ್ರೆಸ್: ಸಿ.ಎಂ

ಮೈಸೂರು: ‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಸೋಲುವ ಭೀತಿಗೆ ಒಳಗಾಗಿರುವ ಕಾಂಗ್ರೆಸ್ ನಾಯಕರು, ಯಾವುದನ್ನು ಅನುಷ್ಠಾನಕ್ಕೆ ತರುವುದು ಸಾಧ್ಯವಿಲ್ಲವೋ ಅಂತಹ ಭರವಸೆಗಳನ್ನು ನೀಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಭಾನುವಾರ ಆಗಮಿಸಿದ ವೇಳೆ ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ನಿವೃತ್ತಿ ತೆಗೆದುಕೊಳ್ಳಬೇಕಾಗುತ್ತೆ: ‘ಸಿದ್ದರಾಮಯ್ಯ ರಾಜಕೀಯ ನಿವೃತ್ತಿ ತೆಗೆದುಕೊಳ್ಳಬೇಕಾದ ಪರಿಸ್ಥಿತಿಯೇ ಬರಲಿದೆ. ಏಕೆಂದರೆ, ಎಸ್ಕಾಂಗಳ ಪರಿಸ್ಥಿತಿ ಅವರಿಗೂ ಗೊತ್ತಿದೆ. ಅವರ ಕಾಲದಲ್ಲಿ ಇನ್ನಷ್ಟು ಹದಗೆಟ್ಟಿತ್ತು. ನಾವು ಬಂದ ಮೇಲೆ ₹ 8 ಸಾವಿರ ಕೋಟಿ ನೇರವಾಗಿ ಹಾಗೂ ₹13 ಸಾವಿರ ಕೋಟಿ ಸಾಲ ನೀಡಿ ಎಸ್ಕಾಂಗಳನ್ನು ಉಳಿಸಿಕೊಂಡಿದ್ದೇವೆ. ಹೀಗಿರುವಾಗ, 200 ಯೂನಿಟ್ ವಿದ್ಯುತ್ ಉಚಿತ ಪೂರೈಕೆ ಅಸಾಧ್ಯವಾದುದು’ ಎಂದು ಅವರು ಹೇಳಿದರು.

ಕೀಳು ಮಟ್ಟದ ಟೀಕೆ ಶೋಭೆ ತರದು: ‘ಹೇಳಿಕೆಗೂ ಒಂದು ಮಿತಿ ಇದೆ. ನಾಯಿ ಎನ್ನುವುದು, ಮನೆ ಹಾಳಾಗಲಿ ಎನ್ನುವುದು ಕರ್ನಾಟಕದ ಹಾಗೂ ಇಲ್ಲಿನ ರಾಜಕಾರಣದ ಸಂಸ್ಕೃತಿಯಲ್ಲ. ಸಿದ್ದರಾಮಯ್ಯ, ಬಿ.ಕೆ.ಹರಿಪ್ರಸಾದ್ ಇಂತಹ ಹೇಳಿಕೆಗಳನ್ನು ನನ್ನ ವಿರುದ್ಧ ನೀಡುತ್ತಲೇ ಬಂದಿದ್ದಾರೆ. ಟೀಕೆಯು ಆರೋಗ್ಯಕರವಾಗಿರಬೇಕು’ ಎಂದು ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

‘ಗೌಡರ ಕುಟುಂಬದಲ್ಲಿ ಎಲ್ಲರೂ ದೋಚಲು ಶುರು ಮಾಡಿದ್ದಾರೆ’

ತುಮಕೂರು: ‘ಅಪ್ಪ, ಮಕ್ಕಳು, ಮೊಮ್ಮಕ್ಕಳು, ಹೆಂಡತಿಯರು ಎಲ್ಲರೂ ದೋಚಲು ಶುರು ಮಾಡಿದ್ದಾರೆ’ ಎಂದು ಸಚಿವ ಜೆ.ಸಿ. ಮಾಧುಸ್ವಾಮಿ ಅವರು ಎಚ್.ಡಿ. ದೇವೇಗೌಡರ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮತ್ತಿಘಟ್ಟದಲ್ಲಿ ಭಾನುವಾರ ಬಿಜೆಪಿ ವಿಜಯ ಸಂಕಲ್ಪ ಅಭಿಯಾನದಲ್ಲಿ ಮಾತನಾಡಿದರು.

‘ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಭಿವೃದ್ಧಿಯಾಗಿಲ್ಲ. ಮಾಧುಸ್ವಾಮಿ ಮಾತ್ರ ಅಭಿವೃದ್ಧಿಯಾಗಿದ್ದಾರೆ ಎಂದು ಕುಮಾರಸ್ವಾಮಿ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಅವರಪ್ಪನನ್ನು ಲೋಕಸಭಾ ಚುನಾವಣೆಯಲ್ಲಿ ಗೆಲ್ಲಿಸೋಕೆ ಬಾರದವನು, ಈಗ ನಮ್ಮ ಕ್ಷೇತ್ರಕ್ಕೆ ಬಂದು ಭಾಷಣ ಮಾಡುತಿದ್ದಾನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಏಕವಚನದಲ್ಲಿಯೇ ಹರಿಹಾಯ್ದರು.



‘ಇವರಪ್ಪನಿಗೆ ಹೊಳೆನರಸೀಪುರದಲ್ಲಿ ₹50 ರೂಪಾಯಿ ಕೊಟ್ಟು ಅಯ್ನೋರು ಕಾಂಟ್ರಾಕ್ಟ್ ಶುರು ಮಾಡಿಸಿದ್ದರು. ನನಗೆ ಆ ಸ್ಥಿತಿ ಬಂದಿಲ್ಲ. ಇವರ ಹಾಗೆ ದೋಚಿದ್ದು, ಬಾಚಿದ್ದು ನಂಬಿಕೊಂಡು ನಾನು ಬದುಕಲ್ಲ’ ಎಂದರು.

‘ನಮ್ಮ ಕ್ಷೇತ್ರದಲ್ಲಿ ನಾನು ಯಾರ ಜೊತೆ ಹೋರಾಟ ಮಾಡುತ್ತಿದ್ದೇನೆ ಎಂಬುವುದು ತಿಳಿಯುತ್ತಿಲ್ಲ. ಅದಕ್ಕೆ ನಾನು ಸಿದ್ದರಾಮಯ್ಯ ಅವರನ್ನು ಚಿಕ್ಕನಾಯಕನಹಳ್ಳಿ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಬನ್ನಿ ಎಂದು ಕರೆದಿದ್ದೆ. ಚುನಾವಣೆಯಲ್ಲಿ ಸೆಣಸಾಡುವುದಕ್ಕೂ ಗೌರವ ಇರುತ್ತದೆ’ ಎಂದರು.

‘ಕೋಮು ಸಾಮರಸ್ಯಕ್ಕಾಗಿ ವಿವೇಕಾನಂದ ಸಮಿತಿ ರಚನೆ’

ಮಂಗಳೂರು: ‘ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಸ್ವಾಮಿ ವಿವೇಕಾನಂದ ಕೋಮು ಮತ್ತು ಸಾಮಾಜಿಕ ಸಾಮರಸ್ಯ ಸಮಿತಿ ರಚಿಸಿ ಅನುದಾನ ಒದಗಿಸುತ್ತೇವೆ’ ಎಂದು ಕಾಂಗ್ರೆಸ್ ಪಕ್ಷ ತಿಳಿಸಿದೆ.

‘ಪ್ರಜಾಧ್ವನಿ ಯಾತ್ರೆ’ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಸಮಾವೇಶದಲ್ಲಿ ಕರಾವಳಿಯ ವಿಶೇಷ ಪ್ರಣಾಳಿಕೆಯಲ್ಲಿದ್ದ ಪ್ರಮುಖ ಅಂಶವನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಪ್ರಕಟಿಸಿದರು.

ಪ್ರಣಾಳಿಕೆ ಅನುಷ್ಠಾನದ ಕುರಿತು ಬಹಿರಂಗ ಚರ್ಚೆಗೆ ಬರುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಸವಾಲು ಹಾಕಿದರು. ‘ನಾನು ಬಿಲ್ ಪಾವತಿಗೆ ಯಾವುದೇ ಗುತ್ತಿಗೆದಾರರಿಂದ 5 ಪೈಸೆ ಲಂಚ ತೆಗೆದುಕೊಂಡಿದ್ದೇನೆ ಎಂದು ಹೇಳಿದರೆ ರಾಜಕೀಯ ನಿವೃತ್ತಿಯಾಗುತ್ತೇನೆ’ ಎಂದರು.

‘ಕರಾವಳಿಯ ಸರಣಿ ಕೊಲೆಗಳ ಹಿಂದೆ ಬಿಜೆಪಿ ಹಾಗೂ ಬಜರಂಗದಳದ ಕುತಂತ್ರ ಇದೆ’ ಎಂದು ಆರೋಪಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ‘ಇಂಧನ ಸಚಿವನಾಗಿದ್ದ ನನಗೆ ಪ್ರತಿ ಕುಟುಂಬಕ್ಕೆ ತಿಂಗಳಿಗೆ 200 ಯೂನಿಟ್ ಉಚಿತ ವಿದ್ಯುತ್ ಉಚಿತ ನೀಡುವುದು ಹೇಗೆಂದು ಗೊತ್ತಿದೆ’ ಎಂದರು.

ಕಾರ್ಯಕ್ರಮವನ್ನು ಕಾಂಗ್ರೆಸ್ ಮುಖಂಡ ಬಿ.ಜನಾರ್ದನ ಪೂಜಾರಿ ಉದ್ಘಾಟಿಸಿದರು.

ಆಂತರಿಕ ಸಮೀಕ್ಷೆಯಲ್ಲಿ ಬಿಎಸ್‌ವೈ ಪರ ಒಲವು • ಪ್ರಚಾರಕ್ಕೆ ಬಳಸಿಕೊಳ್ಳಲು ಕೆಲ ನಾಯಕರ ಹಿಂದೇಟು

ಪ್ರಚಾರ ಸಮಿತಿಯಲ್ಲಿ ಬಿಎಸ್‌ವೈಗೆ ಆದ್ಯತೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ಆಡಳಿತ ದಲ್ಲಿದ್ದರೂ ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಅವರನ್ನು ಮೂಲೆಗುಂಪು ಮಾಡುವ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಚುನಾವಣಾ ಪ್ರಚಾರದಲ್ಲಿ ಅವರಿಗೆ ಪ್ರಾಧಾನ್ಯತೆ ನೀಡುವುದು ನಿಚ್ಚಳವಾಗಿದೆ.

ಯಡಿಯೂರಪ್ಪ ಅವರಿಗೆ ಪಕ್ಷದ ಚುನಾವಣಾ ಪ್ರಚಾರ ಸಮಿತಿಯ ಅಧ್ಯಕ್ಷತೆ ನೀಡುವ ಸಾಧ್ಯತೆಯೂ ಇದೆ ಎನ್ನುವ ಮಾತುಗಳು ಪಕ್ಷದ ವಲಯದಲ್ಲಿ ಕೇಳಿಬಂದಿವೆ. ಆದರೆ, ಈ ಬಗ್ಗೆ ಯಾವುದೇ ಮಾಹಿತಿ ತಮಗೆ ಬಂದಿಲ್ಲ ಎನ್ನುತ್ತವೆ ಯಡಿಯೂರಪ್ಪ ಅವರ ಆಪ್ತ ವಲಯದ ಮೂಲಗಳು.

ಬಿಜೆಪಿ ನಡೆಸಿರುವ ಹಲವು ಆಂತರಿಕ ಸಮೀಕ್ಷೆಗಳಲ್ಲಿ ಯಡಿಯೂರಪ್ಪ ನಾಯಕತ್ವದ ಬಗ್ಗೆ ರಾಜ್ಯದ ಜನತೆಯಲ್ಲಿ ಇನ್ನೂ ವಿಶ್ವಾಸವಿರುವುದು ವ್ಯಕ್ತವಾಗಿದೆ ಮತ್ತು ಅವರನ್ನು ಮೂಲೆಗುಂಪು ಮಾಡಿದರೆ ಪಕ್ಷಕ್ಕೆ ಹಿನ್ನಡೆ ಆಗುವುದು ಖಚಿತ ಎಂಬ ಮಾಹಿತಿ ವರಿಷ್ಠರಿಗೆ ಸಿಕ್ಕಿದೆ. ಆದ ಬಳಿಕ ಅವರನ್ನು ಜತೆಗಿಟ್ಟುಕೊಂಡೇ ಮುನ್ನಡೆಯುವ ನಿರ್ಧಾರಕ್ಕೆ ಬಿಜೆಪಿ ಬಂದಿದೆ. ಆದ್ದರಿಂದಲೇ ಸಂಸದೀಯ ಮಂಡಳಿಯಲ್ಲಿ ಸ್ಥಾನ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

ಆದರೆ, ಯಡಿಯೂರಪ್ಪ ಅವರನ್ನು ಮೂಲೆಗೆ ಸರಿಸುವ ಪ್ರಯತ್ನ ನಡೆಸುತ್ತಲೇ ಬಂದಿದ್ದ ಕೆಲ ನಾಯಕರು ಮತ್ತೆ ಅವರನ್ನು ಚುನಾವಣಾ ಪ್ರಚಾರದ ಕಾರ್ಯದಲ್ಲಿ ಮುಂಚೂಣಿಗೆ ತರುವ ಬಗ್ಗೆ ಒಲವು ಹೊಂದಿಲ್ಲ. ಹೀಗಾಗಿ ಎಲ್ಲ ಕಾರ್ಯಕ್ರಮಗಳಿಗೂ ಅವರನ್ನು ಕರೆಯುತ್ತಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲೂ ಈ ನಾಯಕರಿಂದಾಗಿಯೇ ಹಲವರಿಗೆ ಟಿಕೆಟ್ ಕೊಡದೇ ಪಕ್ಷ ಸ್ವಂತ ಬಲದಿಂದ ಬಹುಮತ ಸಾಧಿಸಲು ಸಾಧ್ಯವಾಗಲಿಲ್ಲ. ಈಗಲೂ ಅದೇ ಧೋರಣೆ ಮುಂದುವರಿದರೆ ಏನೂ ಮಾಡಲು ಸಾಧ್ಯವಿಲ್ಲ ಎಂಬ ನಿಲುವು ಬಿಎಸ್‌ವೈ ಆಪ್ತ ವಲಯದ್ದು.

ಯಡಿಯೂರಪ್ಪ ಅವರು ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಪುತ್ರ ಬಿ.ವೈ.ವಿಜಯೇಂದ್ರ ಅವರಿಗೆ ಟಿಕೆಟ್ ಬಯಸಿದ್ದಾರೆ. ಅವರಿಗೆ ಟಿಕೆಟ್ ನೀಡಿದರೆ ಪ್ರತಿಸ್ಪರ್ಧಿ ಹುಟ್ಟಿಕೊಳ್ಳುತ್ತಾರೆ ಎಂಬ ಆತಂಕ ಪಕ್ಷದಲ್ಲಿ ಕೆಲವರಿಗೆ ಇದೆ. ಹೀಗಾಗಿ, ಯಡಿಯೂರಪ್ಪ ಅವರನ್ನು ಮೂಲೆಗುಂಪಾಗಿಸುವ ಪ್ರಯತ್ನ ನಡೆಸಿದ್ದಾರೆ ಎಂಬ ಅಭಿಪ್ರಾಯ ಈ ವಲಯದ್ದು.

ಮುಸ್ಲಿಂ ಬಾಹುಳ್ಯದ ಪ್ರದೇಶಗಳಲ್ಲೂ ಬೂತ್ ಚಟುವಟಿಕೆ

ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಬೂತ್ ಸಮಿತಿಗಳನ್ನು ರಚಿಸಲು ಬಿಜೆಪಿ ತೀರ್ಮಾನಿಸಿದೆ. ಈ ಚುನಾವಣೆಯಲ್ಲಿ ಹೊಸ ಪ್ರಯತ್ನಕ್ಕೆ ಮುಂದಾಗಿದೆ.

ಮುಸ್ಲಿಮರು ಹೆಚ್ಚು ಇರುವೆಡೆ ಬೂತ್‌ಗಳನ್ನು ತೆರೆಯಲು ಬಿಜೆಪಿಗೆ ಆ ಸಮುದಾಯದ ಕಾರ್ಯಕರ್ತರು ಸಿಗುತ್ತಿರಲಿಲ್ಲ. ಹೀಗಾಗಿ ಅಲ್ಲಿ ಬಿಜೆಪಿಗೆ ಮತಗಳು ಬೀಳುತ್ತಿರಲಿಲ್ಲ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಈಗ ಅಲ್ಲಿಯೂ ಒಂದಷ್ಟು ಮತಗಳನ್ನು ಪಡೆಯಲು ಚಿಂತನೆ ನಡೆಸಿರುವುದಾಗಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸಿದ್ದರಾಜು ಅವರು ‘ಪ್ರಜಾವಾಣಿ’ಗೆ ವಿವರಿಸಿದರು.

ರಾಜ್ಯದಲ್ಲಿ 58 ಸಾವಿರ ಮತಗಟ್ಟೆಗಳಿವೆ. ಈವರೆಗೆ 51 ಸಾವಿರ ಮತಗಟ್ಟೆಗಳ ವ್ಯಾಪ್ತಿಯಲ್ಲಿ ‘ಬೂತ್ ಸಮಿತಿ’ಗಳನ್ನು ರಚಿಸಲಾಗಿದೆ. ಪ್ರತಿ ಬೂತ್ ಸಮಿತಿಯಲ್ಲೂ ಎಸ್‌ಸಿ, ಎಸ್‌ಟಿ, ಒಬಿಸಿಯವರು ಸೇರಿ 12 ಸದಸ್ಯರಿರುತ್ತಾರೆ. 51 ಸಾವಿರ ಬೂತ್ ಸಮಿತಿಗಳಲ್ಲಿ 6 ಲಕ್ಷ ಸದಸ್ಯರಿದ್ದಾರೆ ಎಂದರು.

ಬೂತ್ ಸಮಿತಿಗಳ ಉಸ್ತುವಾರಿಗೆ ಸುಮಾರು 10 ಸಾವಿರ ಮಂದಿ ವಿಸ್ತಾರಕರನ್ನು ನೇಮಿಸಲಾಗಿದೆ. ಪ್ರತಿ ಮತದಾರರ ಪಟ್ಟಿಗೆ ಒಬ್ಬ ‘ಪೇಜ್ ಪ್ರಮುಖ್’ ನೇಮಿಸಲಾಗಿರುತ್ತದೆ. ಇವರು ಆಯಾ ಮತಗಟ್ಟೆ ವ್ಯಾಪ್ತಿಯಲ್ಲಿ ಗರಿಷ್ಠ ಮತದಾನ ಆಗುವಂತೆ ನೋಡಿಕೊಳ್ಳುವ ಜವಾಬ್ದಾರಿ ಹೊಂದಿರುತ್ತಾರೆ. ಮತದಾನದ ಪ್ರಮಾಣ ಶೇಕಡ 65ಕ್ಕೂ ಹೆಚ್ಚು ದಾಟುವಂತೆ ನೋಡಿಕೊಳ್ಳುವುದು ಬೂತ್ ಸಮಿತಿಗಳ ಸದಸ್ಯರ ಕೆಲಸ ಎಂದು ಸಿದ್ದರಾಜು ವಿವರಿಸಿದರು. ಮನೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ‘ಮಿಸ್ಡ್ ಕಾಲ್’ ಮೂಲಕ ಸದಸ್ಯತ್ವದ ಅಭಿಯಾನವೂ ನಡೆಯಲಿದೆ ಎಂದರು.

ದಾಖಲೆಗಳಿಲ್ಲದೆ ಹಣ ಸಾಗಣೆ: ₹1.14 ಕೋಟಿ ವಶ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ದಾಖಲೆಗಳಿಲ್ಲದೆ ಅಕ್ರಮವಾಗಿ ಖಾಸಗಿ ಬಸ್‌ನಲ್ಲಿ ಹಣ ಸಾಗಿಸುತ್ತಿದ್ದ ವಿದ್ಯಾರ್ಥಿಯೊಬ್ಬನನ್ನು ಉಪನಗರ ಠಾಣೆ ಪೊಲೀಸರು ನಗರದ ಬಸವವನ ಬಳಿ ಶನಿವಾರ ರಾತ್ರಿ ಬಂಧಿಸಿ, ₹1.14 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ.

ಕೇಶ್ವಾಪುರದ ಮಯೂರಿ ಎಸ್ಟೇಟ್ ನಿವಾಸಿ, ವಿದ್ಯಾರ್ಥಿ ರಿತೀಕ್ ಬಸವಾ ಬಂಧಿತ ಆರೋಪಿ. ರಿತೀಕ್ ಬಸವವನದಿಂದ ವಿಆರ್‌ಎಲ್ ಬಸ್‌ನಲ್ಲಿ ಮಂಗಳೂರಿಗೆ ತೆರಳುತ್ತಿದ್ದ ಮಾಹಿತಿ ಆಧರಿಸಿ ಇನ್‌ಸ್ಪೆಕ್ಟರ್ ಎಂ.ಎಸ್. ಹೂಗಾರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತ್ತು. ದಾಖಲೆಗಳಿಲ್ಲದೆ ಎರಡು ಬ್ಯಾಗ್‌ನಲ್ಲಿ ಹಣ ಸಾಗಿಸುತ್ತಿರುವುದು ಕಂಡು ಬಂದಿದೆ. ಮಂಗಳೂರಿನಲ್ಲಿ ಬಂಗಾರ ಖರೀದಿಸಲು ತೆರಳುತ್ತಿರುವುದಾಗಿ ಆತ ವಿಚಾರಣೆ ವೇಳೆ ಹೇಳಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಪ್ರಕರಣ ದಾಖಲಾಗಿದೆ.

ವಿಐಎಸ್‌ಎಲ್ ಮುಚ್ಚದಂತೆ ಪ್ರಧಾನಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭದ್ರಾವತಿಯ ವಿಶ್ವೇಶ್ವರಯ್ಯ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ (ವಿಐಎಸ್‌ಎಲ್) ಖಾಸಗೀಕರಣ ಕೈಬಿಟ್ಟು, ಕಾರ್ಖಾನೆ ಪುನಶ್ಚೇತನಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ರಾಜ್ಯಸಭೆ ಸದಸ್ಯ, ಜೆಡಿಎಸ್ ವರಿಷ್ಠರಾದ ಎಚ್.ಡಿ.ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

‘ನಷ್ಟದ ಕಾರಣ ನೀಡಿ ಕಾರ್ಖಾನೆಯನ್ನು ಮುಚ್ಚಲು ನಿರ್ಧರಿಸಲಾಗಿದೆ. ಕೆಲವು ಕೋಟಿ ರೂಪಾಯಿ ಬಂಡವಾಳ ಒದಗಿಸಿದರೆ ಸಂಸ್ಥೆಯನ್ನು ಮತ್ತೆ ಲಾಭದ ಹಳಿಗೆ ತರಬಹುದು. ‘ಆತ್ಮನಿರ್ಭರ ಭಾರತ’ ಯೋಜನೆಯಡಿ ಪುನಶ್ಚೇತನಕ್ಕೆ ಯೋಜನೆ ರೂಪಿಸಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

‘1918ರಲ್ಲಿ ಆರಂಭವಾದ ವಿಐಎಸ್‌ಎಲ್ ಅನ್ನು ನಾನು ಪ್ರಧಾನಿಯಾಗಿದ್ದಾಗ 1996ರಲ್ಲಿ ಭಾರತೀಯ ಉಕ್ಕು ಪ್ರಾಧಿಕಾರದ ವ್ಯಾಪ್ತಿಗೆ ತರಲಾಗಿತ್ತು. ಪ್ರಾಧಿಕಾರ ₹ 650 ಕೋಟಿ ವೆಚ್ಚದಲ್ಲಿ ಕಾರ್ಖಾನೆ ಆಧುನೀಕರಣಗೊಳಿಸಲು ಪ್ರಸ್ತಾವ ಸಿದ್ಧಪಡಿಸಿತ್ತು. ಆದರೆ, ಅದು ಸಾಕಾರಗೊಳ್ಳಲಿಲ್ಲ’ ಎಂದು ಉಲ್ಲೇಖಿಸಿದ್ದಾರೆ. ಈಗ 20,000 ಕುಟುಂಬಗಳು ಕಾರ್ಖಾನೆಯನ್ನು ಅವಲಂಬಿಸಿದ್ದು, ಮುಚ್ಚುವ ನಿರ್ಧಾರದಿಂದ ಅವರ ಜೀವನ ಸಂಕಷ್ಟಕ್ಕೆ ಸಿಲುಕಿದೆ ಎಂದು ಗಮನಸೆಳೆದಿದ್ದಾರೆ.

ಹಿಂದುಳಿದ ಜಿಲ್ಲೆ ‘ಕಲ್ಯಾಣ’ ಆಮೆಗತಿ

ಒಂದನೇ ಪುಟದಿಂದ...

ವಾಸ್ತವ ಮಾಹಿತಿಗೆ ಸೂಚನೆ: ಜ. 5ರಂದು ನಡೆದ ಪ್ರಗತಿ ಪರಿಶೀಲನೆ ಸಭೆಯ ಮಾಹಿತಿ ಹಂಚಿಕೊಂಡ ಕಲ್ಯಾಣ ಕರ್ನಾಟಕ ಭಾಗದ ಜಿಲ್ಲಾಧಿಕಾರಿಯೊಬ್ಬರು, ‘ಬಿಡುಗಡೆಯಾದ ಅನುದಾನವನ್ನು ವೆಚ್ಚವೆಂದು ತೋರಿಸಿರುವುದು ಸರಿಯಾದ ಕ್ರಮ ಅಲ್ಲ. ವಾಸ್ತವ ವೆಚ್ಚವನ್ನು ನಮೂದಿಸಬೇಕು. ಅನುಷ್ಠಾನ ಅಧಿಕಾರಿಗಳು ಭಾಗಶಃ ವೆಚ್ಚ ಮಾಡಿರುವುದನ್ನು ನಮೂದಿಸಲು ಮಂಡಳಿ ವ್ಯಾಪ್ತಿಯ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಸಿಇಒಗಳು ಮತ್ತು ಮಂಡಳಿ ಕಾರ್ಯದರ್ಶಿ ಕ್ರಮ ವಹಿಸಬೇಕು ಎಂದು ಶಾಲಿನಿ ರಜನೀಶ್ ಸೂಚಿಸಿದ್ದಾರೆ’ ಎಂದರು.

‘ಪ್ರಗತಿಯ ವೇಗ ಹೆಚ್ಚಿಸುವ ಅಗತ್ಯವಿದೆ. ನಿಮ್ಮ ಪ್ರಗತಿಯ ವೇಗದ ಆಧಾರದಲ್ಲಿ ಮುಂದಿನ ಸಾಲಿನಲ್ಲಿ ₹ 5 ಸಾವಿರ ಕೋಟಿ ನೀಡಲು ಮುಖ್ಯಮಂತ್ರಿ ಉದ್ದೇಶಿಸಿದ್ದಾರೆ. ಪ್ರಗತಿ ತೃಪ್ತಿಕರವಾಗಿ ಇಲ್ಲದೇ ಇದ್ದರೆ ಅನುದಾನ ನೀಡಲು ಸಾಧ್ಯವಾಗುವುದಿಲ್ಲ ಎನ್ನುವ ಅಂಶವನ್ನು ಗಮನಿಸಬೇಕು. ಇನ್ನೂ ಆರಂಭವಾಗದ ಎಲ್ಲ ಕಾಮಗಾರಿಗಳನ್ನು ಜನವರಿ ಅಂತ್ಯದೊಳಗೆ ಆರಂಭಿಸಬೇಕು ಎಂದೂ ಅವರು ಸೂಚಿಸಿದ್ದಾರೆ’ ಎಂದರು.

1,296 ಕಾಮಗಾರಿ ಆರಂಭವೇ ಆಗಿಲ್ಲ: 2022–23ನೇ ಸಾಲಿನಲ್ಲಿ 2,277 ಕಾಮಗಾರಿಗಳ ಆರಂಭಕ್ಕೆ ಅನುಮೋದನೆ ನೀಡಲಾಗಿದೆ. ಅದರಲ್ಲಿ 93 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿದೆ. 888 ಕಾಮಗಾರಿಗಳು ಪ್ರಗತಿಯಲ್ಲಿದೆ. 1,296 ಕಾಮಗಾರಿಗಳು ಆರಂಭವೇ ಆಗಿಲ್ಲ. 2020–21ನೇ ಸಾಲಿನಲ್ಲಿ ಅನುಮೋದನೆ ನೀಡಿದ್ದ 2,275 ಕಾಮಗಾರಿಗಳಲ್ಲಿ 117 ಕಾಮಗಾರಿಗಳು ಎರಡು ವರ್ಷ ದಾಟಿದ್ದರೂ ಆರಂಭ ಆಗಿಲ್ಲ. ಆ ಕಾಮಗಾರಿಗಳನ್ನು ಕೈಬಿಡಲು ಸಚಿವ ಮುನಿರತ್ನ ಸೂಚಿಸಿದ್ದಾರೆ.

ಎರಡು ವರ್ಷ ಕಳೆದರೂ ಆರಂಭವಾಗದ ಕಾಮಗಾರಿಗಳ ಪಟ್ಟಿಯನ್ನು ಮಂಡಳಿಯ ಕಾರ್ಯದರ್ಶಿ ತಕ್ಷಣ ಸರ್ಕಾರಕ್ಕೆ ಸಲ್ಲಿಸಬೇಕು. ಹೀಗೆ ಕೈಗೊಳ್ಳದ ಕಾಮಗಾರಿಗಳಿಂದ ಉಳಿತಾಯವಾಗುವ ಅನುದಾನವನ್ನು ಮರುವಿನಿಯೋಗಿಸಲು ಪ್ರತ್ಯೇಕ ಆದೇಶ ಹೊರಡಿಸಲಾಗುವುದು ಎಂದೂ ಸಭೆಯ ನಡಾವಳಿಯಲ್ಲಿ ತಿಳಿಸಲಾಗಿದೆ.

ಅಧಿಕಾರಿಗಳಿಂದ ‘ಮುಚ್ಚಳಿಕೆ ಪತ್ರ’!

ಅಕ್ಟೋಬರ್ 20ರಂದು ನಡೆದ ಮಂಡಳಿಯ ಪ್ರಗತಿ ಪರಿಶೀಲನೆ ಸಭೆಯಲ್ಲಿ ಅನುದಾನ ವೆಚ್ಚ ಆಗದಿರುವ ಬಗ್ಗೆ ಅಧಿಕಾರಿಗಳನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದ ಯೋಜನೆ ಮತ್ತು ಸಾಂಖ್ಯಿಕ ಸಚಿವ ಮುನಿರತ್ನ, ಅಧಿಕಾರಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡಿದ್ದರು.

‘ಸರ್ಕಾರದ ಆದೇಶದಂತೆ ಅನುಮೋದನೆ ನೀಡಿರುವ ಕಾಮಗಾರಿಗಳಿಗೆ ಅಂದಾಜು ತಯಾರಿಸಿ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ಪಡೆದು ಟೆಂಡರ್ ಕರೆದು ಕಾರ್ಯಾದೇಶ ನೀಡಿ, ನ. 30ರೊಳಗೆ ಕಾಮಗಾರಿಗಳನ್ನು ಆರಂಭಿಸುತ್ತೇನೆ. ತಪ್ಪಿದರೆ ಸರ್ಕಾರ ನನ್ನ ಮೇಲೆ ಅಗತ್ಯ ಶಿಸ್ತು ಕ್ರಮ ಕೈಗೊಳ್ಳಬಹುದು’ ಎಂಬ ಮುಚ್ಚಳಿಕೆಗೆ ಎಲ್ಲ ಅಧಿಕಾರಿಗಳು ಸಹಿ ಹಾಕಿದ್ದರು. ಆದರೂ ಹಲವು ಕಾಮಗಾರಿಗಳು ಆರಂಭವಾಗಿಲ್ಲ ಎಂದು ತಿಳಿಸಿವೆ.

‘ಮಠಾಧೀಶರು ಜಾತಿ ಸೋಂಕಿನಿಂದ ಮುಕ್ತರಾಗಲಿ’

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): ‘ಸಮಾಜಕ್ಕೆ ಮಾರ್ಗದರ್ಶನ ಮಾಡುವ ಮಠಗಳು ಹಾಗೂ ಮಠಾಧೀಶರು ಜಾತಿ, ಧರ್ಮಗಳ ಸೋಂಕಿನಿಂದ ಮುಕ್ತರಾಗಿ ಎಲ್ಲರನ್ನೂ ಅಪ್ಪಿಕೊಳ್ಳುವ ಶ್ರೇಷ್ಠ ಗುಣ ಹೊಂದಿರಬೇಕು’ ಎಂದು ಸಾಹಿತಿ ಕುಂ. ವೀರಭದ್ರಪ್ಪ ಅಭಿಪ್ರಾಯಪಟ್ಟರು.

ವಾಡಿ ಸಮೀಪದ ನಾಲವಾರ ಗ್ರಾಮದಲ್ಲಿ ಭಾನುವಾರ ಕೋರಿಸಿದ್ದೇಶ್ವರ ಶಿವಯೋಗಿಗಳ ಜಾತ್ರೆಯ ಉದ್ಘಾಟನೆಯಲ್ಲಿ 2023ರ ‘ಶ್ರೀಸಿದ್ಧ ತೋಟೇಂದ್ರ ಸಾಹಿತ್ಯ ರತ್ನ’ ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

‘ಮಠದ ಪರಂಪರೆ ಹೊಂದಿರುವ ಭಾರತದಲ್ಲಿ ಅಕ್ಷರದ ಅರಿವು ಮೂಡಿಸುವಲ್ಲಿ ಮಠಗಳು ಬಹುದೊಡ್ಡ ಪಾತ್ರ ವಹಿಸುತ್ತಿವೆ’ ಎಂದು ಅವರು ಹೇಳಿದರು.


ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನ ವೀಕ್ಷಿಸಲು ಭಾನುವಾರ ಬಂದ ಜನ ಸಾಗರ —ಪ್ರಜಾವಾಣಿ ಚಿತ್ರ

ಲಾಲ್‌ಬಾಗ್ ಫಲಪುಷ್ಪ ವೀಕ್ಷಿಸಲು ಜನ ಸಾಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವ ಅಂಗವಾಗಿ ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಆಯೋಜಿಸಿರುವ ‘ಬೆಂಗಳೂರು ನಗರದ ಇತಿಹಾಸ ವಿಷಯಾಧಾರಿತ ಫಲಪುಷ್ಪ ಪ್ರದರ್ಶನ’ ವೀಕ್ಷಿಸಲು ಭಾನುವಾರ ಜನ ಸಾಗರವೇ ಹರಿದು ಬಂದಿತ್ತು.

ತೋಟಗಾರಿಕೆ ಇಲಾಖೆ ಏರ್ಪಡಿಸಿದ್ದ ಈ ಪ್ರದರ್ಶನದಲ್ಲಿ ಬೆಂಗಳೂರಿನ 1500 ವರ್ಷಗಳ ಇತಿಹಾಸ ಅನಾವರಣಗೊಳಿಸಲಾಗಿದೆ. ವಾರಾಂತ್ಯದಲ್ಲಿ ವೀಕ್ಷಕರ ಸಂಖ್ಯೆ ಹೆಚ್ಚಾದ್ದರಿಂದ ತೋಟಗಾರಿಕೆ ಇಲಾಖೆಯ ಸಿಬ್ಬಂದಿ ಮತ್ತು ಪೊಲೀಸರು ಜನರನ್ನು ನಿಯಂತ್ರಿಸಲು ಹರಸಾಹಸಪಟ್ಟರು.

‘ಭಾನುವಾರ 31,722 ವಯಸ್ಕರು, 3,826 ಮಕ್ಕಳು ಫಲಪುಷ್ಪ ಪ್ರದರ್ಶನವನ್ನು ವೀಕ್ಷಿಸಿದರು. ₹24,93,725 ಪ್ರವೇಶ ಶುಲ್ಕ ಸಂಗ್ರಹವಾಗಿದೆ’ ಎಂದು ಲಾಲ್‌ಬಾಗ್ ಉದ್ಯಾನದ ಉಪನಿರ್ದೇಶಕಿ ಕುಸುಮಾ ಮಾಹಿತಿ ನೀಡಿದರು.

ಲೈಂಗಿಕ ದೌರ್ಜನ್ಯ: ಶಿಕ್ಷಕ ಬಂಧನ

ಜಮಖಂಡಿ(ಬಾಗಲಕೋಟೆ): ಇಬ್ಬರು ಬಾಲಕರ ಮೇಲೆ ಲೈಂಗಿಕ ದೌರ್ಜನ್ಯವೆಸಗಿದ ಆರೋಪದ ಮೇಲೆ ಸಾವಳಗಿ ಪೊಲೀಸ್ ಠಾಣೆ ವ್ಯಾಪ್ತಿಯ ಶಾಲೆಯೊಂದರ ಶಿಕ್ಷಕನನ್ನು ಪೋಕ್ಸೊ ಅಡಿ ಶನಿವಾರ ಬಂಧಿಸಲಾಗಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ವರ್ಷದಿಂದ ತಮ್ಮ ಮನೆಯಲ್ಲಿ ಟ್ಯೂಷನ್ ಹೇಳುವುದಾಗಿ ಕರೆಸಿಕೊಂಡು ಈ ಕೃತ್ಯ ನಡೆಸುತ್ತಿದ್ದ ಎನ್ನಲಾಗಿದೆ. ಈ ಬಗ್ಗೆ ಪಾಲಕರು ಜಿಲ್ಲಾಧಿಕಾರಿಗೆ ದೂರು ನೀಡಿದ್ದರು.

ಚಿರತೆ ದಾಳಿ: 3 ತಿಂಗಳಲ್ಲಿ 4 ಸಾವು

ಒಂದನೇ ಪುಟದಿಂದ...

ಇದರಿಂದ ವಾಹನಗಳ ಸಂಚಾರಕ್ಕೆ ಅಡ್ಡಿಯಾಯಿತು.

ಶಾಸಕ ಎಂ.ಅಶ್ವಿನ್ ಕುಮಾರ್ ಹಾಗೂ ಜಿಲ್ಲಾಧಿಕಾರಿ ಡಾ.ಕೆ. ವಿ.ರಾಜೇಂದ್ರ ಸ್ಥಳಕ್ಕೆ ಭೇಟಿ ನೀಡಿ ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.ಜನರ ಅಹವಾಲು ಆಲಿಸಿದರು. ‘ಚಿರತೆ ಸೆರೆಗೆ ಕಾರ್ಯಾಚರಣೆ ನಡೆಸಲಾಗುವುದು. ಪರಿಹಾರ ದೊರಕಿಸಲು ಕ್ರಮ ಕೈಗೊಳ್ಳಲಾಗುವುದು. ತ್ವರಿತವಾಗಿ ಕಬ್ಬು ಕಟಾವು ಮಾಡಿಸಲಾಗುವುದು ಹಾಗೂ ಜಮೀನುಗಳಲ್ಲಿನ ಪೊದೆಗಳನ್ನು ತೆರವುಗೊಳಿಸಲಾಗುವುದು. ಚಿರತೆಯನ್ನು ಕಂಡಲ್ಲಿ ಗುಂಡಿಕ್ಕುವ ಹಂತಕ್ಕೆ ತಲುಪಿದ್ದೇವೆ’ ಎಂದು ಜಿಲ್ಲಾಧಿಕಾರಿ ಭರವಸೆ ನೀಡಿದ ನಂತರ ಜನರು ಪ್ರತಿಭಟನೆ ಹಿಂಪಡೆದರು.

ಜನರಲ್ಲಿ ಆತಂಕ: ಕಳೆದ ಅಕ್ಟೋಬರ್ ಅಂತ್ಯದಲ್ಲಿ ಎಂ.ಎಲ್.ಹುಂಡಿಯ ಮಂಜುನಾಥ್ ಎಂಬ ಯುವಕ, ಅದಾದ ವಾರದ ಅಂತರದಲ್ಲಿ ಎಸ್. ಕೆಬ್ಬೆಹುಂಡಿಯ ಮೇಘನಾ ಎಂಬ ಯುವತಿ, ಶುಕ್ರವಾರ ಕನ್ನಾಯಕನಹಳ್ಳಿಯ ಸಿದ್ದಮ್ಮ ಎಂಬುವರು ಚಿರತೆ ದಾಳಿಗೆ ತುತ್ತಾಗಿದ್ದರು. 3 ತಿಂಗಳಲ್ಲಿ ನಾಲ್ವರನ್ನು ಚಿರತೆ ಕೊಂದಿರುವುದು, ಜನರಲ್ಲಿ ಭೀತಿ ಮೂಡಿಸಿದೆ.

‘ಇನ್ನೊಂದು ಸಾವಾದರೆ ನಿನ್ನನ್ನೇ ಕೊಲ್ಲುವೆ’

ಮೊಮ್ಮಗ ಸಾವಿಗೀಡಾಗಿದ್ದಕ್ಕೆ ಕಣ್ಣೀರಿಟ್ಟ ಅಜ್ಜ ಗುರುರಾಜ್, ‘ಚಿರತೆ ದಾಳಿಯಿಂದ ತಾಲ್ಲೂಕಿನಲ್ಲಿ ಇನ್ನೊಂದು ಸಾವಾದರೂ ನಿನ್ನನ್ನೇ ಕೊಲ್ಲುತ್ತೇನೆ’ ಎಂದು ಸಿಸಿಎಫ್ ಮಾಲತಿ ಪ್ರಿಯ ಅವರಿಗೆ ಎಚ್ಚರಿಕೆ ನೀಡಿದರು.

‘ಒಂದಲ್ಲ, ಎರಡು ಬಾರಿ ನಿಮಗೆ ದೂರು ನೀಡಿದ್ದೇನೆ. ಚಿರತೆಗಳು ಓಡಾಡುತ್ತಿವೆ ಎಂದು ಹೇಳಿದ್ದರೂ ಕ್ರಮ ಕೈಗೊಂಡಿಲ್ಲ ನೀವು. ಅಧಿಕಾರಿಗಳು ಎಸಿ ರೂಂನಲ್ಲಿ ಕುಳಿತಿದ್ದೀರಿ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರೈತನ ಮೇಲೆ ಚಿರತೆ ದಾಳಿ

ನಂಜನಗೂಡು (ಮೈಸೂರು ಜಿಲ್ಲೆ): ತಾಲ್ಲೂಕಿನ ನಂದಿಗುಂದಪುರದಲ್ಲಿ ಜಮೀನಿಗೆ ತೆರಳಿದ್ದ ರೈತರೊಬ್ಬರ ಮೇಲೆ ಚಿರತೆ ದಾಳಿ ನಡೆಸಿದ್ದರಿಂದ, ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ.

ನಂದಿಗುಂದಪುರ ಗ್ರಾಮದ ನಿವಾಸಿ ಶಿವಕುಮಾರ್ (50) ಗಾಯಗೊಂಡವರು. ಕೈ ಹಾಗೂ ಎದೆ ಭಾಗಕ್ಕೆ ಗಾಯವಾಗಿದೆ. ಚೀರಾಟ ಕೇಳಿ ಸ್ಥಳಕ್ಕೆ ಬಂದ ಸ್ಥಳೀಯರು ಅವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದೊಯ್ಯಲು ನೆರವಾದರು. ಸ್ಥಳದಲ್ಲಿ ಚಿರತೆ ಸೆರೆಗಾಗಿ ಬೋನು ಇರಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಬಿಜೆಪಿ ವಿರುದ್ಧ ತೀವ್ರ ಹೋರಾಟಕ್ಕೆ ನಿರ್ಣಯ

ಸರ್ಕಾರದಿಂದ ಧರ್ಮ ರಾಜಕಾರಣ– ಸಿಐಟಿಯು ಅಖಿಲ ಭಾರತ ಸಮ್ಮೇಳನದಲ್ಲಿ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರಕ್ಕೆ ಅರ್ಥವಾಗುವ ಭಾಷೆಯಲ್ಲಿಯೇ ಹಕ್ಕುಗಳನ್ನು ಕೇಳಿ ಪಡೆದುಕೊಳ್ಳಲು ಹೋರಾಟವನ್ನು ಮತ್ತಷ್ಟು ಗಟ್ಟಿಗೊಳಿಸಲು ಇಲ್ಲಿ ನಡೆದ ಸೆಂಟರ್ ಫಾರ್ ಇಂಡಿಯನ್ ಟ್ರೇಡ್ ಯೂನಿಯನ್‌ನ (ಸಿಐಟಿಯು) 17ನೇ ಅಖಿಲ ಭಾರತ ಸಮ್ಮೇಳನವು ನಿರ್ಧರಿಸಿದೆ.

ಐದು ದಿನಗಳ ಸಮ್ಮೇಳನದ ಕೊನೆಯ ದಿನವಾದ ಭಾನುವಾರ ನಡೆದ ಬಹಿರಂಗ ಸಭೆಯಲ್ಲಿ ಸಮ್ಮೇಳನದ ನಿರ್ಣಯಗಳನ್ನು ಸಿಐಟಿಯು ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಘೋಷಿಸಿದರು.

ರೈತ– ಕಾರ್ಮಿಕರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಏಪ್ರಿಲ್ 5ರಂದು ದೆಹಲಿಯಲ್ಲಿ ಪ್ರತಿಭಟಿಸಲಾಗುವುದು. ಪೂರ್ವಭಾವಿಯಾಗಿ ಜ.30 ರಂದು ಬೃಹತ್ ಸಮಾವೇಶ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಆರ್‌ಎಸ್‌ಎಸ್ ಅಣತಿಯಂತೆ ನಡೆಯುತ್ತಿರುವ ಸರ್ಕಾರ, ಧರ್ಮ ರಾಜಕಾರಣ ಮಾಡುತ್ತಿದೆ. ಈ ಸರ್ಕಾರಕ್ಕೆ ಮಾತಿನಲ್ಲಿ ಹೇಳಿದರೆ ತಿಳಿಯುವುದಿಲ್ಲ. ಹೋರಾಟದಿಂದಲೇ ಹಕ್ಕುಗಳನ್ನು ಪಡೆದುಕೊಳ್ಳಬೇಕು ಎಂದು ಹೇಳಿದರು.

ಸಿಐಟಿಯು ರಾಷ್ಟ್ರೀಯ ಅಧ್ಯಕ್ಷೆ ಕೆ.ಹೇಮಲತಾ ಅವರು, ‘ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದರೂ ಜನಪರ ನೀತಿಗಳು ಜಾರಿಯಾಗುತ್ತಿಲ್ಲ. ಬಿಜೆಪಿ ಆಡಳಿತವಿರುವ ಎಲ್ಲ ರಾಜ್ಯಗಳ ಸ್ಥಿತಿ ಇದೇ ಆಗಿದೆ’ ಎಂದರು.

ರಾಷ್ಟ್ರೀಯ ಸಮಿತಿಗೆ 41 ಪದಾಧಿಕಾರಿಗಳ ಆಯ್ಕೆ: ರಾಷ್ಟ್ರೀಯ ಅಧ್ಯಕ್ಷರಾಗಿ ಕೆ.ಹೇಮಲತಾ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ತಪನ್ ಸೇನ್ ಪುನರ್ ಆಯ್ಕೆಯಾಗಿದ್ದಾರೆ. ರಾಷ್ಟ್ರೀಯ ಉಪಾಧ್ಯಕ್ಷರಾಗಿ ಎಸ್. ವರಲಕ್ಷ್ಮಿ, ಕಾರ್ಯದರ್ಶಿಗಳಾಗಿ ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್ ಆಯ್ಕೆಯಾಗಿದ್ದಾರೆ.

ಬಹಿರಂಗ ಸಭೆಯಲ್ಲಿ ಎಲ್ಲೆಲ್ಲೂ ಕೆಂಬಾವುಟಗಳು ಹಾರಾಡಿದವು. ಬಹುತೇಕ ಕಾರ್ಯಕರ್ತರು ಕೆಂಪು ಟೋಪಿ ಮತ್ತು ಕೆಂಪು ಬಟ್ಟೆ ತೊಟ್ಟು ಭಾಗವಹಿಸಿದ್ದರಿಂದ ಇಡೀ ಮೈದಾನ ಕೆಂಪಾದಂತೆ ಕಂಡಿತು.


ಬಸವನಗುಡಿ ನ್ಯಾಷನಲ್ ಕಾಲೇಜು ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಸಿಐಟಿಯು ಕಾರ್ಯಕರ್ತರು ಕೆಂಪು ಟೋಪಿಯೊಂದಿಗೆ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ವಿಭಜನೆ ಸಂಕೇತ ಆಗುತ್ತಿರುವ ಕೇಸರಿ: ಎಸ್. ವರಲಕ್ಷ್ಮಿ

‘ಕೇಸರಿ ಎಂಬುದು ಒಂದು ಬಣ್ಣ ಮಾತ್ರ. ಆದರೆ, ಅದನ್ನು ವಿಭಜನೆಯ ಸಂಕೇತವಾಗಿ ಮಾಡಲಾಗುತ್ತಿದೆ’ ಎಂದು ಸಿಐಟಿಯು ರಾಜ್ಯ ಘಟಕದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಹೇಳಿದರು.

‘ಮುಸ್ಲಿಮರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರಿದ್ದಾರೆ ಎಂಬ ಕಾರಣಕ್ಕೆ ಕಾರ್ಮಿಕರ ವೇತನ ಹೆಚ್ಚಳ ಮಾಡುತ್ತಿಲ್ಲ. ಕಾರ್ಮಿಕರಿಗೆ ಯಾವುದೇ ಸವಲತ್ತುಗಳನ್ನು ನೀಡುತ್ತಿಲ್ಲ’ ಎಂದರು.

‘ಅಧಿಕಾರಕ್ಕೆ ಬರುವ ಮುನ್ನ 2 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿಸುವ ಭರವಸೆಗಳನ್ನು ಬಿಜೆಪಿ ನೀಡಿತ್ತು. ಈಗ ರಾವಣ ರಾಜ್ಯವಾಗಿ ಪರಿವರ್ತಿಸಲಾಗಿದೆ’ ಎಂದು ಟೀಕಿಸಿದರು.

ಕರ್ತವ್ಯ ಪಥ ಕಳೆಗಟ್ಟಿಸಲು 'ನಾರಿ ಶಕ್ತಿ' ಸಜ್ಜು

ನವದೆಹಲಿ (ಪಿಟಿಐ): ಇಲ್ಲಿನ ಕರ್ತವ್ಯಪಥದಲ್ಲಿ ಇದೇ 26ರಂದು ನಡೆಯಲಿರುವ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಪ್ರದರ್ಶಿಸಲು ಅಸ್ಸಾಂ, ಮಹಾರಾಷ್ಟ್ರ, ಉತ್ತರಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಗುಜರಾತ್, ಪಶ್ಚಿಮಬಂಗಾಳ ಸೇರಿ ಹಲವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳು ಈ ಬಾರಿ 'ನಾರಿ ಶಕ್ತಿ' ಪರಿಕಲ್ಪನೆಯಡಿ ಸಜ್ಜುಗೊಳಿಸುತ್ತಿರುವ ವರ್ಣರಂಜಿತ ಸ್ತಬ್ಧ ಚಿತ್ರಗಳು ಮೆರವಣಿಗೆಗೆ ಕಳೆಗಟ್ಟಿಸಲಿವೆ.

ದೇಶದ ಸಾಂಸ್ಕೃತಿಕ ಪರಂಪರೆ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ ಬಿಂಬಿಸುವ ಒಟ್ಟು 23 ಸ್ತಬ್ಧಚಿತ್ರಗಳು ಈ ಬಾರಿ ಪಥಸಂಚಲನದ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಇದರಲ್ಲಿ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ 17 ಹಾಗೂ ವಿವಿಧ ಸಚಿವಾಲಯ ಮತ್ತು ಇಲಾಖೆಗಳಿಂದ ಆರು ಸ್ತಬ್ಧಚಿತ್ರಗಳು ಇರಲಿವೆ ಎಂದು ರಕ್ಷಣಾ ಸಚಿವಾಲಯದ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಈ ಬಾರಿ ರಾಜ್ಯದಿಂದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಸೂಲಗಿತ್ತಿ ನರಸಮ್ಮ, ಸಾಲುಮರದ ತಿಮ್ಮಕ್ಕ ಮತ್ತು ತುಳಸಿ ಗೌಡ ಹಾಲಕ್ಕಿ ಅವರ ಸಾಧನೆಗಳನ್ನು ಬಿಂಬಿಸುವ ಸ್ತಬ್ಧಚಿತ್ರ ಪರೇಡ್‌ನಲ್ಲಿ ಭಾಗವಹಿಸಲಿದೆ.

'ನಗರದ ರಾಷ್ಟ್ರೀಯ ರಂಗಸ್ಥಳದ ಕ್ಯಾಂಪ್‌ನಲ್ಲಿ ಕೆಲವು ಸ್ತಬ್ಧಚಿತ್ರಗಳ ನಿರ್ಮಾಣ ನಡೆಯುತ್ತಿದ್ದರೆ, ಮತ್ತೆ ಕೆಲವು ಸ್ತಬ್ಧಚಿತ್ರಗಳಿಗೆ ಅಂತಿಮ ಸ್ಪರ್ಶ ನೀಡುವ ಕಾರ್ಯ ನಡೆಯುತ್ತಿದೆ. ಇದಲ್ಲದೇ ಪಥಸಂಚಲನದಲ್ಲಿ ಫ್ಲೋಟ್‌ಗಳು ಮತ್ತು ಅತ್ಯಾಧುನಿಕ ಯಂತ್ರೋಪಕರಣ, ವಾಹನಗಳನ್ನು ಡಿಆರ್‌ಡಿಒ, ಭೂಸೇನೆ, ನೌಕಾಪಡೆ ಮತ್ತು ವಾಯುಪಡೆ ಪ್ರದರ್ಶಿಸಲಿವೆ' ಎಂದರು. ಈ ಬಾರಿ ಭಾರತೀಯ ರೈಲ್ವೆಯು ಯಾವುದೇ ಸ್ತಬ್ಧಚಿತ್ರವನ್ನು ಪ್ರದರ್ಶಿಸುತ್ತಿಲ್ಲ.

ಪರ್ವತ ಶ್ರೇಣಿಗಳ ಅತಿ ಎತ್ತರದ ಪ್ರದೇಶಗಳಲ್ಲಿ ತುರ್ತು ರಕ್ಷಣಾ ಕಾರ್ಯಾಚರಣೆ


ಪರಿಣತರ ತಂಡಗಳ ನಿಯೋಜನೆ

ಮುಖ್ಯಾಂಶಗಳು

- ಎನ್‌ಡಿಆರ್‌ಎಫ್‌ಗೆ 125 ಮಂದಿ ಪರಿಣತರ ಸೇರ್ಪಡೆ
- 'ಪ್ರತಿ ತಂಡದಲ್ಲೂ ನಾಲ್ಕರಿಂದ ಐದು ಮಂದಿ ಇರಲಿದ್ದಾರೆ'

ನವದೆಹಲಿ (ಪಿಟಿಐ): ಹಿಮ ಕುಸಿತ, ಭೂಕುಸಿತ ಮತ್ತು ಹಿಮನದಿಗಳಿಂದ ಉಂಟಾಗುವ ದಿಢೀರ್ ಪ್ರವಾಹ ಸೇರಿದಂತೆ ಇನ್ನಿತರ ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ತ್ವರಿತ ರಕ್ಷಣಾ ಕಾರ್ಯಾಚರಣೆ ನಡೆಸಲು ಅನುವಾಗುವ ಉದ್ದೇಶದಿಂದ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯು (ಎನ್‌ಡಿಆರ್‌ಎಫ್) ಹಿಮಾಲಯದ ಅತಿ ಎತ್ತರದ ಪ್ರದೇಶಗಳಲ್ಲಿ ನುರಿತ ಪರ್ವತಾರೋಹಿಗಳ ತಂಡವನ್ನು ನಿಯೋಜಿಸಲು ನಿರ್ಧರಿಸಿದೆ.

'ಅತಿ ಎತ್ತರದ ಪ್ರದೇಶಗಳಲ್ಲಿರುವ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ (ಸಿಎಪಿಎಫ್) ಪೋಸ್ಟ್‌ಗಳಲ್ಲಿ ಎನ್‌ಡಿಆರ್‌ಎಫ್‌ನ ನುರಿತ ಪರ್ವತಾರೋಹಿಗಳ ತಂಡವನ್ನು ನಿಯೋಜಿಸಲು ಚಿಂತನೆ ನಡೆದಿದೆ. ಈ ಸಂಬಂಧ ಯೋಜನೆ ಸಿದ್ಧಪಡಿಸಲಾಗಿದೆ. ಪ್ರತಿ ತಂಡದಲ್ಲೂ ನಾಲ್ಕರಿಂದ ಐದು ಮಂದಿ ಇರಲಿದ್ದಾರೆ. ಈ ತಂಡಗಳನ್ನು ಮೂರು ಇಲ್ಲವೇ ನಾಲ್ಕು ತಿಂಗಳ ಅವಧಿಗೆ ಸರದಿಯ ಪ್ರಕಾರ ನಿಯೋಜಿಸಲಾಗುತ್ತದೆ. ಪರ್ವತ ಶ್ರೇಣಿಗಳಲ್ಲಿ ಪ್ರಕೃತಿ ವಿಕೋಪಗಳು ಸಂಭವಿಸಿದರೆ ತುರ್ತಾಗಿ ಕಾರ್ಯಾಚರಣೆ ಕೈಗೊಳ್ಳಲು ಇದರಿಂದ ನೆರವಾಗಲಿದೆ' ಎಂದು ಎನ್‌ಡಿಆರ್‌ಎಫ್ ಮಹಾ ನಿರ್ದೇಶಕ ಅತುಲ್ ಕರ್ವಾಲ್ ಹೇಳಿದ್ದಾರೆ.



ಅತುಲ್ ಕರ್ವಾಲ್

'ಪರ್ವತ ಶ್ರೇಣಿಗಳಲ್ಲಿನ ಆಗುಹೋಗುಗಳ ಬಗ್ಗೆ ನಮ್ಮ ಸಿಬ್ಬಂದಿಗೆ ಅರಿವಿರಬೇಕು. ಅವರು ಅಲ್ಲಿನ ವಾತಾವರಣಕ್ಕೆ ಒಗ್ಗಿಕೊಳ್ಳದಿದ್ದರೆ ಆ ಪ್ರದೇಶಗಳಲ್ಲಿ ಉಂಟಾಗಬಹುದಾದ ಪ್ರಕೃತಿ ವಿಕೋಪಗಳ ಸಂದರ್ಭದಲ್ಲಿ ಕ್ಷಿಪ್ರ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳುವುದು ಕಷ್ಟವಾಗುತ್ತದೆ. ಆಗ ನಾವು ಸಾಕಷ್ಟು ನಷ್ಟ ಅನುಭವಿಸಬೇಕಾಗುತ್ತದೆ' ಎಂದಿದ್ದಾರೆ.

'ಪರ್ವತಾರೋಹಣ ಸಂಸ್ಥೆಗಳಲ್ಲಿ ತರಬೇತಿ ಹೊಂದಿರುವ 125 ಮಂದಿಯನ್ನು ಇತ್ತೀಚೆಗೆ ಸೇರ್ಪಡೆ ಮಾಡಿಕೊಳ್ಳಲಾಗಿದೆ. ನಮ್ಮ 16 ಬೆಟಾಲಿಯನ್‌ಗಳಲ್ಲೂ ಪರಿಣತರ ತಂಡ ಇರಬೇಕು ಎಂದು ಬಯಸುತ್ತೇವೆ. ಪರ್ವತಶ್ರೇಣಿ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುವುಕ್ಕಾಗಿಯೇ ವಿಶೇಷವಾಗಿ ನಾಲ್ಕು ತಂಡಗಳನ್ನು ಮೀಸಲಿಡಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಜೋಶಿಮಠ; ಬಿರುಕು ಮೂಡಿದ ಕಟ್ಟಡಗಳ ಸಂಖ್ಯೆ 863ಕ್ಕೆ ಏರಿಕೆ (ಡೆಹ್ರಾಡೂನ್ ವರದಿ): 'ಜೋಶಿಮಠದಲ್ಲಿ ಬಿರುಕು ಮೂಡಿರುವ ಕಟ್ಟಡಗಳ ಸಂಖ್ಯೆಯು 863ಕ್ಕೆ ಏರಿದೆ. ಅಸುರಕ್ಷಿತ ಕಟ್ಟಡಗಳ ನೆಲಸಮ ಕಾರ್ಯವನ್ನು ಶನಿವಾರದಿಂದ ಪುನರಾರಂಭಿಸಲಾಗಿದೆ' ಎಂದು ಅಧಿಕಾರಿಗಳು ಹೇಳಿದ್ದಾರೆ.



ಜೋಶಿಮಠದಲ್ಲಿ ಭೂಕುಸಿತದಿಂದ ಹಾನಿಗೊಳಗಾದ ಮನೆಯನ್ನು ಸಿಬ್ಬಂದಿ ಭಾನುವಾರ ನೆಲಸಮಗೊಳಿಸಿದರು – ಪಿಟಿಐ ಚಿತ್ರ

'ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ ಒಎಫ್‌ಸಿ ಅಳವಡಿಕೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂದಿನ ಮೂರು ವರ್ಷಗಳ ಅವಧಿಯಲ್ಲಿ 25 ಸಾವಿರ ಕಿ.ಮೀ. ಉದ್ದದಷ್ಟು ರಾಷ್ಟ್ರೀಯ ಹೆದ್ದಾರಿ ಉದ್ದಕ್ಕೂ ಆಪ್ಟಿಕಲ್ ಫೈಬರ್ ಕೇಬಲ್ (ಒಎಫ್‌ಸಿ) ಮೂಲಸೌಕರ್ಯ ಅಭಿವೃದ್ಧಿಪಡಿಸಲು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಯೋಜನೆ ರೂಪಿಸಿದೆ.

₹6 ಸಾವಿರ ಕೋಟಿಗೂ ಅಧಿಕ ವೆಚ್ಚದ ಈ ಯೋಜನೆಗೆ ಸಚಿವಾಲಯವು ಟೆಂಡರ್ ಆಹ್ವಾನಿಸಿದೆ. ಪ್ರಾಯೋಗಿಕವಾಗಿ ಹೈದರಾಬಾದ್–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಹಾಗೂ ದೆಹಲಿ–ಮುಂಬೈ ಎಕ್ಸ್‌ಪ್ರೆಸ್‌ವೇನಲ್ಲಿ ₹500 ಕೋಟಿ ವೆಚ್ಚದಲ್ಲಿ ಒಎಫ್‌ಸಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

ರಾಷ್ಟ್ರೀಯ ಬ್ರಾಡ್‌ಬ್ಯಾಂಡ್ ಕಾರ್ಯಕ್ರಮದ ಅಂಗವಾಗಿ ಈ ಬೃಹತ್ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತದೆ. ಬರುವ ದಿನಗಳಲ್ಲಿ ದೇಶದಲ್ಲಿ 5ಜಿ ಸೇವೆ ಹೆಚ್ಚು ಬಳಕೆಯಾಗುವ ನಿರೀಕ್ಷೆ ಇದ್ದು, ಒಎಫ್‌ಸಿ ಅಳವಡಿಕೆ ಇದಕ್ಕೆ ಪೂರಕವಾಗಿರಲಿದೆ ಎಂದು ಸಚಿವಾಲಯ ಹೇಳಿದೆ.

ಬಿಜೆಪಿ ಮೈತ್ರಿ ತೊರೆಯುವುದೇ ಐಪಿಎಫ್‌ಟಿ?

ತ್ರಿಪುರಾ ವಿಧಾನಸಭೆ ಚುನಾವಣೆ: ಟಿಪ್ರಾ ಮೊಥಾ ಪಕ್ಷದೊಂದಿಗೆ ವಿಲೀನ ಅಥವಾ ಮೈತ್ರಿಗೆ ಚಿಂತನೆ

ಪ್ರಜಾವಾಣಿ ವಾರ್ತೆ

ಗುವಾಹಟಿ: ಅದಿವಾಸಿಗಳಿಗಾಗಿ ಪ್ರತ್ಯೇಕ ರಾಜ್ಯ ಟಿಪ್ರಾಲ್ಯಾಂಡ್ ರಚಿಸಬೇಕು ಎಂದು ಟಿಪ್ರಾ ಮೊಥಾ ಮುಂದಿಟ್ಟಿರುವ ಬೇಡಿಕೆಯನ್ನು ಈಡೇರಿಸುವ ಕುರಿತು 'ಲಿಖಿತ ಭರವಸೆ' ನೀಡಲು ಬಿಜೆಪಿ ನಿರಾಕರಿಸಿದೆ ಎನ್ನಲಾಗಿದೆ. ಹೀಗಾಗಿ ಬಿಜೆಪಿಯ ಮಿತ್ರ ಪಕ್ಷವಾದ ಇಂಡಿಜಿನಸ್ ಪೀಪಲ್ಸ್ ಫ್ರಂಟ್ ಆಫ್ ತ್ರಿಪುರಾ (ಐಪಿಎಫ್‌ಟಿ), ಟಿಪ್ರಾ ಮೊಥಾ ಪಕ್ಷದೊಂದಿಗೆ ವಿಲೀನ ಅಥವಾ ಮೈತ್ರಿ ಮಾಡಿಕೊಳ್ಳುವ ಸಂಬಂಧ ಮಾತುಕತೆ ಪ್ರಾರಂಭಿಸಿದೆ.

ತ್ರಿಪುರ ವಿಧಾನಸಭೆಗೆ ಫೆ.16ರಂದು ಚುನಾವಣೆ ನಡೆಯಲಿದೆ. ಪ್ರತ್ಯೇಕ ಟಿಪ್ರಾಲ್ಯಾಂಡ್ ರಚನೆ ಬೇಡಿಕೆಯನ್ನು ಮುಂದಿಟ್ಟುಕೊಂಡು ಚುನಾವಣೆ ಎದುರಿಸಲು ವಿವಿಧ ಪ್ರಾದೇಶಿಕ ಪಕ್ಷಗಳು ರಚಿಸಿಕೊಂಡಿರುವ ವೇದಿಕೆಯೇ ಟಿಪ್ರಾ ಮೊಥಾ.

'ಐಪಿಎಫ್‌ಟಿ ನಾಯಕರೊಂದಿಗೆ ಶನಿವಾರ ಮಾತುಕತೆ ನಡೆಸಲಾಗಿದೆ. ಎಲ್ಲ ಪ್ರಾದೇಶಿಕ ಪಕ್ಷಗಳನ್ನು ವಿಲೀನ ಗೊಳಿಸಿ, ಒಂದು ಪಕ್ಷವಾಗಿ ಚುನಾವಣಾ ಕಣಕ್ಕಿಳಿಯುವ ಪ್ರಸ್ತಾವದ ಬಗ್ಗೆ ಗಮನಹರಿಸುವಂತೆ ಕೋರಲಾಗಿದೆ. ಸಮಯ ಬಹಳ ಕಡಿಮೆ ಇದೆ. ಆದ್ದರಿಂದ ಅವರು ಸರಿಯಾದ ನಿರ್ಧಾರ ಕೈಗೊಳ್ಳಲಿ ಎಂಬ ನಿರೀಕ್ಷೆ ಇದೆ' ಎಂದು ಟಿಪ್ರಾ ಮೊಥಾದ ಅಧ್ಯಕ್ಷ ಪ್ರದ್ಯೋತ್ ದೇಬ್ ಬರ್ಮಾ ಅವರು ಭಾನುವಾರ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

'ಪಕ್ಷವು ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳಲು ಒಪ್ಪಿದೆ ಎಂಬ ವದಂತಿ ಹಬ್ಬಿತ್ತು. ಆದರೆ, ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಬಿಜೆಪಿ, ಸಿಪಿಎಂ ಅಥವಾ ಕಾಂಗ್ರೆಸ್ ಸೇರಿ ಯಾವುದೇ ಪಕ್ಷವು ಪ್ರತ್ಯೇಕ ಟಿಪ್ರಾಲ್ಯಾಂಡ್ ರಚನೆ ಬೇಡಿಕೆಗೆ ಸಾಂವಿಧಾನಿಕವಾದ ಪರಿಹಾರ ನೀಡುವ ಕುರಿತು 'ಲಿಖಿತ ಭರವಸೆ' ನೀಡದಿದ್ದರೆ ಯಾರೊಂದಿಗೆ ನಾವು ಮೈತ್ರಿ ಮಾಡಿಕೊಳ್ಳುವುದಿಲ್ಲ' ಎಂದು ದೇಬ್ ಬರ್ಮಾ ಅವರು ಸ್ಪಷ್ಟಪಡಿಸಿದ್ದಾರೆ.

'ಅತ್ತ ವಿದ್ದರೆ, ಸೋಲು–ಗೆಲುವಿನ ಕುರಿತು ತಲೆ ಕೆಡಿಸಿಕೊಳ್ಳದೆ ನಾವು ಏಕಾಂಗಿಯಾಗಿಯೇ ಚುನಾವಣೆಯಲ್ಲಿ ಸ್ಪರ್ಧಿಸುತ್ತೇವೆ' ಎಂದು ಶನಿವಾರ ರಾತ್ರಿ ಪ್ರದ್ಯೋತ್‌ದೇಬ್ ಬರ್ಮಾ ಅವರು ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ಇನ್ನೊಂದೆಡೆ, ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಸಂಬಂಧ ಪ್ರದ್ಯೋತ್ ದೇಬ್ ಬರ್ಮಾ ಅವರು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಅವರು ಸೇರಿದಂತೆ ಬಿಜೆಪಿಯ ಹಲವು ನಾಯಕರನ್ನು ಶುಕ್ರವಾರ ಭೇಟಿ ಮಾಡಿದ್ದಾರೆ.

> ಬಿಜೆಪಿಯೊಂದಿಗೆ ಕೈಜೋಡಿಸಿ, 2018ರಲ್ಲಿ ಐಪಿಎಫ್‌ಟಿ ಮಾಡಿದ ತಪ್ಪನ್ನು ನಾವು ಈಗ ಮಾಡುವುದಿಲ್ಲ. ನಾವು ಜನರಿಗೆ ಉತ್ತರಿಸಬೇಕಾಗಿದೆ.
> **ಪ್ರದ್ಯೋತ್ ದೇಬ್ ಬರ್ಮಾ**, ಅಧ್ಯಕ್ಷ, ಟಿಪ್ರಾ ಮೊಥಾ

> ಐಪಿಎಫ್‌ಟಿ ಜೊತೆಗೆ ಚುನಾವಣೆಯನ್ನು ಎದುರಿಸಲು ಬಿಜೆಪಿ ಇಚ್ಛಿಸುತ್ತದೆ. ಆದರೆ, ಮೈತ್ರಿ ಮುಂದುವರಿಸುವುದು, ಬಿಡುವುದು ಐಪಿಎಫ್‌ಟಿ ನಾಯಕರಿಗೆ ಬಿಟ್ಟ ವಿಚಾರ
> **ಹಿಮಂತ್ ಬಿಸ್ವ ಶರ್ಮಾ**, ಅಸ್ಸಾಂ ಮುಖ್ಯಮಂತ್ರಿ

ಪ್ರಜಾ ಮತ ಜನತಂತ್ರದ ಹಬ್ಬ 2023

ಮೇಘಾಲಯ: ₹10 ಲಕ್ಷ ವಶ: (ಶಿಲ್ಲಾಂಗ್ ಪಿಟಿಐ ವರದಿ): ಮೇಘಾಲಯದ 'ಜೈಂತಿಯಾ ಹಿಲ್ಸ್' ಜಿಲ್ಲೆಯ ಪೂರ್ವ ಭಾಗದ ಗ್ರಾಮವೊಂದರಲ್ಲಿ ದಾಖಲೆ ಇಲ್ಲದ ₹10 ಲಕ್ಷವನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಅಧಿಕಾರಿಗಳು ಭಾನುವಾರ ತಿಳಿಸಿದರು.

'ಸುತಂಗ್–ಸಾಯಿಪುಂಗ್ ವಿಧಾನ ಸಭಾ ಕ್ಷೇತ್ರಕ್ಕೆ ಶುಕ್ರವಾರ ಅಸ್ಸಾಂನಿಂದ ಬರುತ್ತಿದ್ದ ಮೂರು ವಾಹನಗಳಲ್ಲಿ ಹಣ ಪತ್ತೆಯಾಗಿದೆ. ಈ ಸಂಬಂಧ ಇದುವರೆಗೂ ಯಾರನ್ನೂ ಬಂಧಿಸಿಲ್ಲ' ಎಂದು ಮೇಘಾಲಯದ ಮುಖ್ಯ ಚುನಾವಣಾ ಅಧಿಕಾರಿ ತಿಳಿಸಿದರು.

ಈ ವಿಧಾನಸಭಾ ಕ್ಷೇತ್ರವನ್ನು, 'ಅಭ್ಯರ್ಥಿಗಳು ಚುನಾವಣೆಗಾಗಿ ದೊಡ್ಡ ಮೊತ್ತದ ಹಣವನ್ನು ಖರ್ಚು ಮಾಡುವ ಕ್ಷೇತ್ರ' ಎಂದು ಚುನಾವಣಾ ಆಯೋಗವು ಗುರುತಿಸಿದೆ.

'ಸಿಪಿಎಂ-ಕಾಂಗ್ರೆಸ್ ಜೊತೆ ಮೈತ್ರಿ ಇಲ್ಲ'

ಅಗರ್ತಲಾ (ಪಿಟಿಐ): 'ಸಿಪಿಎಂ ಹಾಗೂ ಕಾಂಗ್ರೆಸ್ ಮೈತ್ರಿಕೂಟದೊಂದಿಗೆ ಪಕ್ಷವು ಕೈಜೋಡಿಸುವುದಿಲ್ಲ' ಎಂದು ಟಿಎಂಸಿ ಭಾನುವಾರ ಹೇಳಿದೆ.

'ಸಿಪಿಎಂ ಅಧಿಕಾರದಲ್ಲಿದ್ದಾಗ ತೊಂದರೆ ಅನುಭವಿಸಿದ ಕಾಂಗ್ರೆಸ್ ನಾಯಕರು ಹಾಗೂ ಕಾರ್ಯಕರ್ತರೇ ಆ ಮೈತ್ರಿಯ ಪರವಾಗಿ ಮತ ಹಾಕುವುದಿಲ್ಲ. ಆದ್ದರಿಂದ ಸಿಪಿಎಂ–ಕಾಂಗ್ರೆಸ್ ಮೈತ್ರಿಗೆ ನಮ್ಮ ಬೆಂಬಲವಿಲ್ಲ' ಎಂದು ತ್ರಿಪುರಾ ತೃಣಮೂಲ ಕಾಂಗ್ರೆಸ್ ಅಧ್ಯಕ್ಷ ಪಿಯೂಷ್ ಕಾಂತಿ ಬಿಸ್ವಾಸ್ ಹೇಳಿದರು.

'ಎಲ್ಲೆಲ್ಲಿ ನಮ್ಮ ಪಕ್ಷ ಗೆಲ್ಲುವ ವಿಶ್ವಾಸ ಇದೆಯೋ, ಅಂಥ ಕ್ಷೇತ್ರಗಳಲ್ಲಿ ನಾವು ಸ್ಪರ್ಧಿಸಲಿದ್ದೇವೆ. ಜೊತೆಗೆ ಚುನಾವಣೆಯಲ್ಲಿ ಮೈತ್ರಿ ಬಯಸುವ ಬೇರೆ ಪಕ್ಷಗಳಿಗೂ ಟಿಎಂಸಿ ಬಾಗಿಲು ತೆರೆಯಲಿದೆ' ಎಂದೂ ಹೇಳಿದರು.

ಮಮತಾ ಭೇಟಿ: 'ಟಿಎಂಸಿ ಅಧ್ಯಕ್ಷೆ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಫೆ.6ರಂದು ಎರಡು ದಿನಗಳ ಭೇಟಿಗಾಗಿ ತ್ರಿಪುರಕ್ಕೆ ಬರಲಿದ್ದು, ಫೆ.7ರಂದು ರೋಡ್ ಷೋ ನಡೆಸಲಿದ್ದಾರೆ' ಎಂದು ಮಾಹಿತಿ ನೀಡಿದರು.

> 2021ರಲ್ಲಿ ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಬಂದ ಫಲಿತಾಂಶವೇ ಇಲ್ಲೂ ಬರಲಿದೆ. ಆದ್ದರಿಂದಲೇ ನಾವು ಈ ಮೈತ್ರಿಯಿಂದ ಅಂತರ ಕಾಯ್ದುಕೊಂಡಿದ್ದೇವೆ
> **ಪಿಯೂಷ್ ಕಾಂತಿ ಬಿಸ್ವಾಸ್**, ಅಧ್ಯಕ್ಷ, ಟಿಎಂಸಿ ತ್ರಿಪುರಾ ಘಟಕ

ಸಂಕ್ಷಿಪ್ತ ಸುದ್ದಿ

ಪ್ರಾದೇಶಿಕ ಭಾಷೆಯಲ್ಲಿ ತೀರ್ಪು: ಮೋದಿ ಶ್ಲಾಘನೆ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ತೀರ್ಪುಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗುವಂತೆ ಮಾಡಲು ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರು ಒತ್ತು ನೀಡಿರುವುದನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಶ್ಲಾಘಿಸಿದ್ದಾರೆ.

ಮುಂಬೈನಲ್ಲಿ ಮಹಾರಾಷ್ಟ್ರ ಮತ್ತು ಗೋವಾದ ಬಾರ್ ಕೌನ್ಸಿಲ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಿಜೆಐ ಮಾಡಿದ ಭಾಷಣದ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿರುವ ಮೋದಿ, 'ಪ್ರಾದೇಶಿಕ ಭಾಷೆಗಳಲ್ಲಿ ತೀರ್ಪುಗಳು ಲಭ್ಯವಾಗುವಂತೆ ತಂತ್ರಜ್ಞಾನವನ್ನು ಬಳಸಲು ಚಂದ್ರಚೂಡ್ ಸಲಹೆ ನೀಡಿದರು. ಇದು ಶ್ಲಾಘನೀಯ ಚಿಂತನೆಯಾಗಿದೆ' ಎಂದಿದ್ದಾರೆ.

ಅತ್ಯಾಚಾರಕ್ಕೆ ಪ್ರತಿರೋಧ: ಯುವತಿಗೆ ಬೆಂಕಿ ಹಚ್ಚಿ ಕೊಲೆ

ಹಜಾರಿಬಾಗ್ (ಜಾರ್ಖಂಡ್) (ಪಿಟಿಐ): ಅತ್ಯಾಚಾರ ಯತ್ನಕ್ಕೆ ಪ್ರತಿರೋಧ ವ್ಯಕ್ತಪಡಿಸಿದ 23 ವರ್ಷದ ಯುವತಿ ಮೇಲೆ ದುಷ್ಕರ್ಮಿಗಳು ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದು, ತೀವ್ರ ಗಾಯಗೊಂಡ ಯುವತಿ ರಾಂಚಿ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದರು.

'ಜ.7ರ ರಾತ್ರಿ ಸಂತ್ರಸ್ತೆಯ ಇಲ್ಲಿನ ನಿವಾಸದಲ್ಲಿಯೇ ಘಟನೆ ನಡೆದಿದ್ದು, ನಾಲ್ವರು ಆರೋಪಿಗಳ ಪೈಕಿ ಮೂವರು ಯುವತಿಯ ಸಂಬಂಧಿಕರು. ಗಾಯಗೊಂಡಿದ್ದ ಯುವತಿಗೆ ರಾಂಚಿಯಲ್ಲಿರುವ ರಾಜೇಂದ್ರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ (ರಿಮ್ಸ್) ಚಿಕಿತ್ಸೆ ನೀಡಲಾಗುತ್ತಿತ್ತು' ಎಂದು ಪೊಲೀಸ್ ವರಿಷ್ಠಾಧಿಕಾರಿ ಮನೋಜ್ ರತನ್ ಚೋಥೆ ತಿಳಿಸಿದರು.

'ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಲಾಗಿದೆ. ಆದಾಗ್ಯೂ ಈವರೆಗೆ ಯಾರನ್ನೂ ಬಂಧಿಸಿಲ್ಲ' ಎಂದರು.

ಅಪಘಾತ ಸಂತ್ರಸ್ತರಿಗೆ ಪರಿಹಾರ ಕಾನೂನು ಜಾರಿಗೊಳಿಸಿ



ನವದೆಹಲಿ (ಪಿಟಿಐ): ವಿಮೆ ಇಲ್ಲದ ವಾಹನಗಳಿಂದ ಉಂಟಾಗುವ ರಸ್ತೆ ಅಪಘಾತಗಳು ಹಾಗೂ ಹಿಟ್ ಆ್ಯಂಡ್ ರನ್ ಪ್ರಕರಣಗಳ ಸಂತ್ರಸ್ತರಿಗೆ ಪರಿಹಾರ ಒದಗಿಸುವುದಕ್ಕಾಗಿ ಅಗತ್ಯ ಕಾನೂನು ಜಾರಿಗೊಳಿಸುವಂತೆ ದೆಹಲಿ ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

ಮುಖ್ಯ ನ್ಯಾಯಮೂರ್ತಿ ಸತೀಶ್ ಚಂದ್ರ ಶರ್ಮಾ ಮತ್ತು ನ್ಯಾಯಮೂರ್ತಿ ಸುಬ್ರಮಣಿಯಮ್ ಪ್ರಸಾದ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠವು ಅಪಘಾತದಲ್ಲಿ ಮೃತಪಟ್ಟಿದ್ದ ವ್ಯಕ್ತಿಯೊಬ್ಬರ ಕುಟುಂಬದವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಇತ್ತೀಚೆಗೆ ನಡೆಸಿದೆ.

'ವಿಮೆ ಮಾಡಿಸದ ವಾಹನಗಳಿಂದ ಉಂಟಾಗುವ ರಸ್ತೆ ಅಪಘಾತ ಪ್ರಕರಣಗಳಲ್ಲಿ ಸಂತ್ರಸ್ತರಿಗೆ ಪರಿಹಾರ ಕಲ್ಪಿಸುವುದಕ್ಕಾಗಿ ಮೋಟಾರು ವಾಹನ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದೆ. ಈ ಸಂಬಂಧ ಮಾರ್ಗಸೂಚಿಗಳನ್ನು ರೂಪಿಸಬೇಕಿದೆ' ಎಂದು ಕೇಂದ್ರ ಸರ್ಕಾರವು ನ್ಯಾಯಪೀಠಕ್ಕೆ ತಿಳಿಸಿದೆ.

'ಸಂತ್ರಸ್ತರಿಗೆ ಪರಿಹಾರ ಕಲ್ಪಿಸುವುದಕ್ಕಾಗಿ ಈಗಾಗಲೇ ಯೋಜನೆಯೊಂದು ಅಸ್ತಿತ್ವದಲ್ಲಿದೆ. ಅದರಲ್ಲಿ ಕೆಲ ಮಾರ್ಪಾಡುಗಳನ್ನು ಮಾಡಬೇಕಿದ್ದು, ಅದಕ್ಕಾಗಿ 6 ತಿಂಗಳು ಕಾಲಾವಕಾಶ ನೀಡಬೇಕು' ಎಂದೂ ಕೇಂದ್ರ ಸರ್ಕಾರ ಮನವಿ ಮಾಡಿದ್ದು, ಇದನ್ನು ನ್ಯಾಯಪೀಠವು ಮಾನ್ಯ ಮಾಡಿದೆ.

'ಒಕ್ಕಲಿಗರ ಮೀಸಲಾತಿ: ನಿಲುವು ಪ್ರಕಟಿಸಿ'

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): 'ಒಕ್ಕಲಿಗರ ಮೀಸಲಾತಿಗೆ ಸಂಬಂಧಿಸಿ ರಾಜ್ಯ ಸರ್ಕಾರ ತನ್ನ ಸ್ಪಷ್ಟ ನಿಲುವನ್ನು ಆದಷ್ಟು ಬೇಗ ಪ್ರಕಟಿಸಬೇಕು' ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಆಗ್ರಹಿಸಿದರು.

ಬಾಲಗಂಗಾಧರನಾಥ ಸ್ವಾಮೀಜಿ ಅವರ 78ನೇ ಜಯಂತಿ ಮತ್ತು ನಿರ್ಮಲಾನಂದನಾಥ ಶ್ರೀಗಳ ಪಟ್ಟಾಭಿಷೇಕದ ದಶಮಾನೋತ್ಸವದ ಅಂಗವಾಗಿ ಪುತ್ತೂರಿನ ಮಹಾಲಿಂಗೇಶ್ವರ ದೇವಸ್ಥಾನದ ಮುಂಭಾಗದ ಆವರಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

'ಒಕ್ಕಲಿಗರಿಗೂ ಮೀಸಲಾತಿ ಸಿಗುತ್ತಿದೆ. ಆದರೆ ಶೇ 4ರಷ್ಟು ಮಾತ್ರ. ಈ ಪ್ರಮಾಣವನ್ನು ಹೆಚ್ಚಿಸಬೇಕೆಂಬ ಬೇಡಿಕೆಗೆ ಸರ್ಕಾರ ಪೂರಕವಾಗಿ ಸ್ಪಂದಿಸಿದೆ. ಆದರೆ, ಸ್ಪಷ್ಟವಾದ ಉತ್ತರ ಇನ್ನೂ ಸಿಗಲಿಲ್ಲ. ಸರ್ಕಾರದ ಮೇಲೆ ಭರವಸೆ ಮತ್ತು ನಿರೀಕ್ಷೆ ಇರುವುದರಿಂದ ಸದ್ಯಕ್ಕೆ ಹೋರಾಟದ ಬಗ್ಗೆ ಯೋಚನೆ ಮಾಡಲಿಲ್ಲ' ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, 'ಜನಸಂಖ್ಯೆ ಆಧಾರದ ಮೇಲೆ ಶೇಕಡ 12ರಷ್ಟು ಮೀಸಲಾತಿ ಕೇಳುತ್ತಿದ್ದೇವೆ. ಇದರಲ್ಲಿ ಬೇರೆ ಸಮುದಾಯದವರಿಗೆ ತೊಂದರೆ ಕೊಡುವ ಉದ್ದೇಶವಿಲ್ಲ' ಎಂದರು.



ಬಾಲಗಂಗಾಧರನಾಥ ಶ್ರೀಗಳ ಪುತ್ಥಳಿಗೆ ಆದಿಚುಂಚನಗಿರಿ ಸಂಸ್ಥಾನದ ಪೀಠಾಧ್ಯಕ್ಷ ನಿರ್ಮಲಾನಂದನಾಥ ಶ್ರೀಗಳು ಪುಷ್ಪಾರ್ಚನೆ ಮಾಡಿದರು. ಸಂಜೀವ ಮಠಂದೂರು, ಶೋಭಾ ಕರಂದ್ಲಾಜೆ, ಡಿ.ವಿ. ಸದಾನಂದಗೌಡ, ಡಾ.ಧರ್ಮಪಾಲನಾಥ ಸ್ವಾಮೀಜಿ ಇದ್ದಾರೆ – ಪ್ರಜಾವಾಣಿ ಚಿತ್ರ

ಶಾಸಕ ಸಂಜೀವ ಮಠಂದೂರು ಅಧ್ಯಕ್ಷತೆ ವಹಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವ ಸಿ. ಅಶ್ವತ್ಥನಾರಾಯಣ, ಸಂಸದ ಡಿ.ವಿ. ಸದಾನಂದಗೌಡ, ರಾಜ್ಯಸಭಾ ಜಗ್ಗೇಶ್, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಉಪಾಧ್ಯಕ್ಷ ಕೆ.ವಿ.ರೇಣುಕಾ ಪ್ರಸಾದ್, ರಾಜ್ಯ ಒಕ್ಕಲಿಗ ಸಂಘದ ಅಧ್ಯಕ್ಷ ಸಿ.ಎನ್. ಬಾಲಕೃಷ್ಣ, ಮಾಜಿ ಸಚಿವ ಗಂಗಾಧರ ಗೌಡ ಇದ್ದರು.

ಮಂಗಳವಾದ್ಯಗಳ ಹಿಮ್ಮೇಳ ಮತ್ತು ಮಂಗಳ ದ್ರವ್ಯ, ಹೂಗಳ ಸೊಬಗಿನಲ್ಲಿ ನಿರ್ಮಲಾನಂದನಾಥರ ರಜತ ತುಲಾಭಾರ ನಡೆಯಿತು. ಆದಿಚುಂಚನಗಿರಿಯ ಮಂಗಳೂರು ಶಾಖಾ ಮಠದ ಪೀಠಾಧ್ಯಕ್ಷ ಡಾ. ಧರ್ಮಪಾಲನಾಥ ಸ್ವಾಮೀಜಿ ಅವರ ಸಂಶೋಧನಾ ಪ್ರಬಂಧ 'ಸಂಸ್ಕೃತ- ಸಂಸ್ಕೃತಿಗೆ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರ ಕೊಡುಗೆ, ಒಂದು ಅಧ್ಯಯನ' ಬಿಡುಗಡೆ ಮಾಡಲಾಯಿತು. ಕೃತಿಯ ಬಗ್ಗೆ ಪ್ರಾಧ್ಯಾಪಕ ಡಾ.ಎಚ್.ಎಸ್. ಸತ್ಯನಾರಾಯಣ ಮಾತನಾಡಿದರು.

ತ್ರಿಶ್ಶೂರ್: ಗುರುವಾಯೂರು ದೇಗುಲದಲ್ಲಿದೆ 260 ಕೆ.ಜಿ. ಚಿನ್ನ

ತ್ರಿಶ್ಶೂರ್: ಮಧ್ಯ ಕೇರಳದ ಪ್ರಸಿದ್ಧ ಗುರುವಾಯೂರು ದೇವಸ್ಥಾನದಲ್ಲಿ 263.637 ಕೆ.ಜಿ. ಚಿನ್ನದ ಸಂಗ್ರಹವಿದೆ ಎಂದು ದೇಗುಲದ ಆಡಳಿತ ಮಂಡಳಿ ತಿಳಿಸಿದೆ.

ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಮೂಲಕ ಕೇಳಿದ ಪ್ರಶ್ನೆಗೆ ಉತ್ತರಿಸಿರುವ ದೇವಾಲಯದ ಆಡಳಿತ ಮಂಡಳಿಯು, 'ಅಮೂಲ್ಯ ರತ್ನಗಳು, ಚಿನ್ನದ ನಾಣ್ಯಗಳು, 20 ಸಾವಿರ ಚಿನ್ನದ ಪದಕಗಳು ಸೇರಿ ಒಟ್ಟು 263.637 ಕೆ.ಜಿ. ಚಿನ್ನದ ಸಂಗ್ರಹವಿದೆ' ಎಂದು ಹೇಳಿದೆ.

5,359 ಬೆಳ್ಳಿಯ ಪದಕಗಳು ಸೇರಿ ದೇಗುಲದಲ್ಲಿ ಒಟ್ಟು 6,605 ಕೆ.ಜಿ. ಬೆಳ್ಳಿಯ ಸಂಗ್ರಹವಿದೆ ಎಂಬುದು ಆರ್‌ಟಿಐ ದಾಖಲೆಗಳಿಂದ ಬಹಿರಂಗಗೊಂಡಿದೆ.

ಆರ್‌ಟಿಪಿಎಸ್: 4 ವಿದ್ಯುತ್ ಘಟಕಗಳು ಸ್ಥಗಿತ

ಪ್ರಜಾವಾಣಿ ವಾರ್ತೆ

ಶಕ್ತಿ ನಗರ (ರಾಯಚೂರು ಜಿಲ್ಲೆ): ತಾಂತ್ರಿಕ ಸಮಸ್ಯೆಯಿಂದಾಗಿ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದ (ಆರ್‌ಟಿಪಿಎಸ್) 4 ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ.

ವಾರ್ಷಿಕ ನಿರ್ವಹಣೆಗಾಗಿ 4ನೇ ಘಟಕ, ಬಾಯ್ಲರ್ ಟ್ಯೂಬ್ ಸೋರಿಕೆಯಿಂದ 210 ಮೆಗಾ ವಾಟ್ ಸಾಮರ್ಥ್ಯದ 6ನೇ ಘಟಕ ಮತ್ತು 5ನೇ ವಿದ್ಯುತ್ ಘಟಕದಲ್ಲಿ ಹಾರುಬೂದಿ ಹೊರ ಹಾಕುವ ಪೈಪ್ ಲೈನ್‌ನಲ್ಲಿ ತಾಂತ್ರಿಕ ಸಮಸ್ಯೆ ಕಂಡು ಬಂದ ಕಾರಣ ಉತ್ಪಾದನೆ ಸ್ಥಗಿತಗೊಳಿಸಲಾಗಿದೆ. ಕಳೆದ 6 ತಿಂಗಳಿಂದ 1ನೇ ಘಟಕ ಸ್ಥಗಿತ ಗೊಳಿಸಲಾಗಿದೆ. ಈ ಘಟಕವನ್ನು ಸಂಪೂರ್ಣವಾಗಿ ಮರು ನಿರ್ಮಾಣಗೊಳಿಸುವ ಸಾಧ್ಯತೆ ಇರುವುದರಿಂದ ವಿದ್ಯುತ್ ಉತ್ಪಾದನೆ ನಿಲ್ಲಿಸಲಾಗಿದೆ.

'ಇಲ್ಲಿರುವ 8 ವಿದ್ಯುತ್ ಘಟಕಗಳಲ್ಲಿ 1, 4, 5 ಮತ್ತು 6ನೇ ವಿದ್ಯುತ್ ಘಟಕಗಳ ಉತ್ಪಾದನೆ ಸ್ಥಗಿತಗೊಂಡಿದ್ದರಿಂದ 1.720 ಮೆಗಾ ವಾಟ್ ಸಾಮರ್ಥ್ಯದ ಪೈಕಿ 560 ಮೆಗಾ ವಾಟ್ ಮಾತ್ರ ಉತ್ಪಾದನೆ ಆಗುತ್ತಿದೆ. ಕಲ್ಲಿದ್ದಲು ಗುಣಮಟ್ಟ ಮತ್ತು ಪೂರೈಕೆ ಪ್ರಮಾಣದಲ್ಲಿ ಯಾವುದೇ ತೊಂದರೆಯಿಲ್ಲ. ಸದ್ಯಕ್ಕೆ 3.20 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ದಾಸ್ತಾನಿದೆ. ಅಷ್ಟೇ ಅಲ್ಲದೆ ಮೂರು ಗಣಿಗಳು ಮತ್ತು ಆಮದು ಸೇರಿ ನಿತ್ಯ ತಲಾ 7–8 ರೈಲ್ವೆ ರೇಕ್ (ಪ್ರತಿ ರೇಕ್ 3,500 ಮೆಟ್ರಿಕ್ ಟನ್)ಗಳು ಆರ್‌ಟಿಪಿಎಸ್‌ಗೆ ತಲುಪುತ್ತಿವೆ' ಎಂದು ಮೂಲಗಳು ತಿಳಿಸಿವೆ.

'5ನೇ ವಿದ್ಯುತ್ ಘಟಕದಲ್ಲಿ ತಾಂತ್ರಿಕ ಸಮಸ್ಯೆ ನಿವಾರಿಸಿದ್ದು, ಕ್ರಮೇಣ ಪೂರ್ಣ ಸಾಮರ್ಥ್ಯದ ಉತ್ಪಾದನೆ ಸಾಧ್ಯವಾಗಲಿದೆ. ಬಾಯ್ಲರ್ ಟ್ಯೂಬ್ ಸೋರಿಕೆಯಿಂದ 6ನೇ ಘಟಕ ಸ್ಥಗಿತವಾಗಿದ್ದು, ದುರಸ್ತಿ ಕಾರ್ಯ ನಡೆಯುತ್ತಿದೆ. ಇನ್ನೆರಡು ದಿನಗಳಲ್ಲಿ ಉತ್ಪಾದನೆ ಆರಂಭವಾಗಲಿದೆ' ಎಂದು ಆರ್‌ಟಿಪಿಎಸ್ ಮುಖ್ಯ ಕಾರ್ಯ ನಿರ್ವಾಹಕ ನಿರ್ದೇಶಕ ಸಿ.ಎಂ. ದಿವಾಕರ್ ತಿಳಿಸಿದರು.

ಶಿವಮೊಗ್ಗ: ಈಡಿಗ ಸಮುದಾಯದ ಹಕ್ಕೊತ್ತಾಯ ಸಮಾವೇಶ

ಮೀಸಲಾತಿ, ಮುಳುಗಡೆ ಸಂತ್ರಸ್ತರ ನೆರವಿಗೆ ಕೂಗು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಈಡಿಗ ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪಿಸಿ ಕೂಡಲೇ ₹500 ಕೋಟಿ ಅನುದಾನ ಮೀಸಲಿರಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಭಾನುವಾರ ಶ್ರೀನಾರಾಯಣ ಗುರು ವಿಚಾರ ವೇದಿಕೆಯಿಂದ (ಎಸ್‌ಎನ್‌ಜಿವಿ) ಬೃಹತ್ ಹಕ್ಕೊತ್ತಾಯ ಸಮಾವೇಶ ನಡೆಯಿತು.

ಈಡಿಗ, ಬಿಲ್ಲವ, ನಾಮಧಾರಿ ಸೇರಿದಂತೆ ಸಮುದಾಯದ 26 ಉಪ ಪಂಗಡಗಳ ಸಾವಿರಾರು ಮಂದಿ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಪ್ರವರ್ಗ 2 'ಎ' ಮೀಸಲಾತಿ ಪಟ್ಟಿಗೆ ಪ್ರಬಲ ಸಮುದಾಯಗಳ ಸೇರ್ಪಡೆ ವಿರೋಧಿಸಲಾಯಿತಲ್ಲದೆ, ಶರಾವತಿ ಮುಳುಗಡೆ ಸಂತ್ರಸ್ತರಿಗೆ ಶಾಶ್ವತ ಪುನರ್ವಸತಿ ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು.



ಶಿವಮೊಗ್ಗದಲ್ಲಿ ಶ್ರೀನಾರಾಯಣಗುರು ವಿಚಾರ ವೇದಿಕೆಯಿಂದ ಭಾನುವಾರ ಆಯೋಜಿಸಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನರು – ಪ್ರಜಾವಾಣಿ ಚಿತ್ರ/ ಶಿವಮೊಗ್ಗ ನಾಗರಾಜ್

ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಬಂಗಾರಪ್ಪ ಅವರ ಹೆಸರಿಡಬೇಕು. ಸಿಗಂದೂರಿನ ಚೌಡೇಶ್ವರಿ ದೇವಸ್ಥಾನದ ಆಡಳಿತದಲ್ಲಿ ಸರ್ಕಾರ ಅನಗತ್ಯ ಹಸ್ತಕ್ಷೇಪ ಮಾಡಬಾರದು ಎಂಬುದೂ ಒಳಗೊಂಡಂತೆ ಸಮುದಾಯದ ಪ್ರಮುಖ 5 ಹಕ್ಕೊತ್ತಾಯಗಳನ್ನು ಎಸ್‌ಎನ್‌ಜಿವಿ ರಾಜ್ಯ ಘಟಕದ ಅಧ್ಯಕ್ಷ ಸತ್ಯಜಿತ್ ಸುರತ್ಕಲ್ ಮಂಡಿಸಿದರು.

ಸಮಾವೇಶಕ್ಕೆ ಮುನ್ನ ಇಲ್ಲಿನ ಸಾಗರ ರಸ್ತೆಯ ಈಡಿಗರ ಭವನದಿಂದ ಬಿ.ಎಚ್. ರಸ್ತೆಯ ಸೈನ್ಸ್ ಮೈದಾನದವರೆಗೆ ಪ್ರತಿಭಟನಾ ಮೆರವಣಿಗೆ ನಡೆಯಿತು. ಶಿವಮೊಗ್ಗ ಹಾಗೂ ಸುತ್ತಲಿನ ಜಿಲ್ಲೆಗಳಿಂದ ಬಂದಿದ್ದ ಸಮುದಾಯದವರು ಹಳದಿ ಬಾವುಟ ಹಿಡಿದು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಸಿಗಂದೂರು ದೇವಸ್ಥಾನದ ಧರ್ಮದರ್ಶಿ ರಾಮಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಮಾವೇಶದಲ್ಲಿ ನಿಟ್ಟೂರು ಶ್ರೀನಾರಾಯಣಗುರು ಪೀಠಾಧ್ಯಕ್ಷ ರೇಣುಕಾನಂದ ಸ್ವಾಮೀಜಿ, ನಿಪ್ಪಾಣಿಯ ಅರುಣಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಾ. ರಾಜನಂದಿನಿ ಕಾಗೋಡು ಇದ್ದರು.

'ಮೀಸಲಾತಿ ಪ್ರಮಾಣಕ್ಕೆ ಚ್ಯುತಿ ಇಲ್ಲ'

'ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರೊಂದಿಗೆ ಸಮುದಾಯದ ಏಳು ಮಂದಿ ಶಾಸಕರು ಚರ್ಚಿಸಿದ್ದೇವೆ. ಪ್ರವರ್ಗ 2 'ಎ' ಅಡಿ ಸಮುದಾಯಕ್ಕೆ ಈಗ ಇರುವ ಮೀಸಲಾತಿ ಪ್ರಮಾಣ ಕಡಿಮೆ ಆಗುವುದಿಲ್ಲ ಎಂಬ ಭರವಸೆ ದೊರೆತಿದೆ. ಕಾನೂನಾತ್ಮಕ ತೊಡಕು ನಿವಾರಿಸಿಕೊಂಡು ಶರಾವತಿ ಸಂತ್ರಸ್ತರಿಗೆ ಶಾಶ್ವತ ಪರಿಹಾರ ಕಲ್ಪಿಸಲಾಗುವುದು. ಈ ಬಾರಿಯ ಬಜೆಟ್‌ನಲ್ಲಿ ನಿಗಮ–ಮಂಡಳಿ ಘೋಷಿಸಲಾಗುವುದು. ಉಳಿದ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು' ಎಂದು ಹಕ್ಕೊತ್ತಾಯಕ್ಕೆ ಪ್ರತಿಕ್ರಿಯಿಸಿದ ಶಾಸಕ ಎಚ್. ಹರತಾಳು ಹಾಲಪ್ಪ ಹೇಳಿದರು.



ಸುಭಾಷಿತ

ಮನುಷ್ಯನೊಬ್ಬ ತನ್ನ ಮನಸ್ಸನ್ನು ನಿಯಂತ್ರಿಸಿದರೆ ಎಲ್ಲ ಜ್ಞಾನ ಮತ್ತು ಪ್ರಭಾವವೂ ಸಹಜವಾಗಿ ಆತನ ಬಳಿಗೆ ಬರುತ್ತದೆ.

–ಗೌತಮ ಬುದ್ಧ

ಶ್ರೀಮಂತ–ಬಡವರ ನಡುವಣ ಅಂತರ ಹೆಚ್ಚಳಕ್ಕೆ ಸರ್ಕಾರದ ನೀತಿಯೂ ಕಾರಣ

ಜಗತ್ತಿನಾದ್ಯಂತ ಮತ್ತು ನಿರ್ದಿಷ್ಟವಾಗಿ ಭಾರತದಲ್ಲಿ ಅಸಮಾನತೆ ಹೆಚ್ಚುತ್ತಲೇ ಇದೆ ಎಂಬ ನಿರಾಶಾದಾಯಕ ಚಿತ್ರಣವನ್ನು ಸರ್ಕಾರೇತರ ಸಂಸ್ಥೆ ಆಕ್ಸ್‌ಫಾಮ್ ಇತ್ತೀಚೆಗೆ ಪ್ರಕಟಿಸಿರುವ ವರದಿಯು ಮುಂದಿಟ್ಟಿದೆ. ದೇಶದ ಜನಸಂಖ್ಯೆಯ ಶೇಕಡ 1ರಷ್ಟು ಜನರು ಒಟ್ಟು ಸಂಪತ್ತಿನ ಶೇ 40ರಷ್ಟರ ಮಾಲೀಕತ್ವ ಹೊಂದಿದ್ದಾರೆ ಎಂದು 'ಸರ್ವೈವಲ್ ಆಫ್ ದಿ ರಿಚೆಸ್ಟ್: ದಿ ಇಂಡಿಯಾ ಸ್ಟೋರಿ' ಎಂಬ ಹೆಸರಿನ ವರದಿಯು ಹೇಳಿದೆ. ಸಂಪತ್ತಿನ ಹಂಚಿಕೆಯ ಪಿರಮಿಡ್‌ನ ತಳಭಾಗದಲ್ಲಿ ಇರುವ ಶೇ 50ರಷ್ಟು ಜನರಲ್ಲಿ ಇರುವುದು ಒಟ್ಟು ಸಂಪತ್ತಿನ ಶೇ 3ರಷ್ಟು ಭಾಗ ಮಾತ್ರ. 70 ಕೋಟಿ ಜನರು ಹೊಂದಿರುವಷ್ಟು ಸಂಪತ್ತನ್ನು ದೇಶದ 21 ವ್ಯಕ್ತಿಗಳು ಹೊಂದಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಹೆಚ್ಚಿನ ಜನರು ಸಂಪತ್ತನ್ನು ಕಳೆದುಕೊಂಡರೆ ಶ್ರೀಮಂತರು ಇನ್ನಷ್ಟು ಶ್ರೀಮಂತರಾಗಿದ್ದಾರೆ. ಸಾಂಕ್ರಾಮಿಕ ಆರಂಭವಾದಾಗಿನಿಂದ 2022ರ ನವೆಂಬರ್‌ವರೆಗಿನ ಅವಧಿಯಲ್ಲಿ ಶತಕೋಟ್ಯಧೀಶರ ಸೊತ್ತು ಶೇ 121ರಷ್ಟು ಏರಿಕೆಯಾಗಿದೆ. ಅಥವಾ ಪ್ರತಿದಿನ ₹3,608 ಕೋಟಿಯಷ್ಟು ಹೆಚ್ಚಳವಾಗಿದೆ. 2020ರಲ್ಲಿ ಇಂತಹ ಶ್ರೀಮಂತರ ಸಂಖ್ಯೆಯು 102 ಇದ್ದರೆ, 2022ರಲ್ಲಿ ಅದು 166ಕ್ಕೆ ಏರಿಕೆಯಾಗಿದೆ. ದೇಶದಲ್ಲಿ ಅಸಮಾನತೆಯು ಹೆಚ್ಚುತ್ತಲೇ ಇದೆ ಎಂಬುದು ಇದರಿಂದ ಅತ್ಯಂತ ಸ್ಪಷ್ಟವಾಗಿದೆ.



ಸಮಾಜದ ತಳವರ್ಗದಲ್ಲಿ ಇರುವ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದೇ ಈ ಸಮಸ್ಯೆಗೆ ಅತ್ಯುತ್ತಮ ಪರಿಹಾರ

ಸಮಾಜದಲ್ಲಿ ಎಲ್ಲರೂ ಸಮಾನರು ಎಂಬುದು ಒಂದು ಆದರ್ಶ ಮಾತ್ರ. ಆದರೆ, ಅಸಮಾನತೆ ಹೆಚ್ಚುತ್ತಲೇ ಹೋಗುತ್ತಿದೆ ಎಂದರೆ, ಬಡವರಲ್ಲಿರುವ ಸಂಪತ್ತು ಶ್ರೀಮಂತರನ್ನು ಸೇರುತ್ತಿದೆ ಎಂದು ಅರ್ಥ. ಇದು ನೈತಿಕ, ಸಾಮಾಜಿಕ ಮತ್ತು ರಾಜಕೀಯಕ್ಕೆ ಸಂಬಂಧಿಸಿದ ವಿಚಾರ. ಸಂಪತ್ತು ಹೇಗೆ ಹಂಚಿಕೆಯಾಗುತ್ತಿದೆ ಎಂಬುದಕ್ಕೆ ಸರ್ಕಾರದ ನೀತಿಯ ಕೊಡುಗೆಯೂ ಇರುತ್ತದೆ. ಹಾಗಾಗಿಯೇ ಬಡತನ ಹೆಚ್ಚಳವಾದಾಗ ಮತ್ತು ಬಡವರು ಹಾಗೂ ಶ್ರೀಮಂತರ ನಡುವಣ ಅಂತರ ಹೆಚ್ಚುತ್ತಲೇ ಹೋದಾಗ ಸರ್ಕಾರ ಅದಕ್ಕೆ ಉತ್ತರ ಕೊಡಲೇಬೇಕಾಗುತ್ತದೆ. ಬಡವರಿಗೆ ನೆರವಾಗಲು ಹಲವು ಕ್ರಮಗಳನ್ನು ಕೈಗೊಂಡಿರುವುದಾಗಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಆಗಾಗ ಹೇಳುತ್ತಲೇ ಬಂದಿದೆ. ಆದರೆ, ಬಡತನ ಕಡಿಮೆ ಆಗಿದೆ ಎಂಬುದು ಅದರ ಅರ್ಥ ಅಲ್ಲ. ಕಲ್ಯಾಣ ಕಾರ್ಯಕ್ರಮಗಳು ಜನರಿಗೆ ನೆರವಾಗುತ್ತವೆ ಎಂಬುದು ನಿಜ. ಆದರೆ, ಬಡತನ ನಿರ್ಮೂಲನೆ ಆಗಬೇಕಿದ್ದರೆ ಜನರ ಆದಾಯದಲ್ಲಿ ಹೆಚ್ಚಳ ಆಗಬೇಕು. ಸ್ವತಂತ್ರವಾಗಿ ಗಳಿಸುವ ವ್ಯವಸ್ಥೆ ಇರಬೇಕು ಮತ್ತು ಸರ್ಕಾರದ ಕೊಡುಗೆಗಳ ಮೇಲೆ ಅವಲಂಬನೆಯಾಗುವ ಸ್ಥಿತಿ ಇರಬಾರದು. ಕಳೆದ ದಶಕಗಳಲ್ಲಿ, ಅದರಲ್ಲೂ ವಿಶೇಷವಾಗಿ 2004ರಿಂದ 2016ರ ನಡುವಣ ಅವಧಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರನ್ನು ಬಡತನದಿಂದ ಮೇಲೆತ್ತಲಾಗಿದೆ. ಆದರೆ, ಇತ್ತೀಚಿನ ವರ್ಷಗಳಲ್ಲಿ ಬಡತನ ನಿರ್ಮೂಲನೆಯ ವೇಗ ಕಡಿಮೆಯಾಗಿದೆ. ನೋಟು ರದ್ದತಿಯ ಬಳಿಕ ಮತ್ತು ಕೋವಿಡ್ ಸಾಂಕ್ರಾಮಿಕದ ಸಂದರ್ಭದಲ್ಲಿ ಲಕ್ಷಾಂತರ ಜನರು ಮತ್ತೆ ಬಡತನಕ್ಕೆ ಜಾರಿದ್ದಾರೆ ಹಾಗೂ ಅವರಿಗೆ ಚೇತರಿಸಿಕೊಳ್ಳಲು ಸಾಧ್ಯವಾಗಿಲ್ಲ. ಜನರು ಬಡವರಾಗುತ್ತಿದ್ದಾರೆ ಮತ್ತು ಅನುಕೂಲವಂತ ವರ್ಗದ ಕೆಲವೇ ಕೆಲವು ಜನರು ಸಂಪತ್ತಿನ ಬಹುಭಾಗವನ್ನು ಕೂಡಿಟ್ಟುಕೊಂಡಿದ್ದಾರೆ ಎಂಬುದನ್ನು ಆಕ್ಸ್‌ಫಾಮ್ ವರದಿಯು ಹೇಳಿದೆ. ಇದು ಸಾಮಾಜಿಕ ಸಂಕಷ್ಟ, ಅತೃಪ್ತಿ ಮತ್ತು ಅಶಾಂತಿಗೆ ಕಾರಣವಾಗಲಿದೆ. ಭಾರತದ ರೀತಿಯಲ್ಲಿಯೇ ಜಗತ್ತಿನಲ್ಲಿ ಕೂಡ ಆಗಿದೆ. ಜಗತ್ತಿನ ಶೇ 1ರಷ್ಟು ಜನರಲ್ಲಿ 2020ರ ಬಳಿಕ ಸೃಷ್ಟಿಯಾದ ಒಟ್ಟು ಸಂಪತ್ತಿನ ಸರಿಸುಮಾರು ಮೂರನೇ ಎರಡರಷ್ಟು ಕ್ರೋಡೀಕರಣವಾಗಿದೆ ಎಂದು ವರದಿಯು ಹೇಳಿದೆ. 2020ರ ಬಳಿಕ ಸೃಷ್ಟಿಯಾದ ಸಂಪತ್ತಿನ ಮೌಲ್ಯ ₹ 3,400 ಲಕ್ಷ ಕೋಟಿ. ಜಗತ್ತಿನಲ್ಲಿಯೇ ಅತಿ ಹೆಚ್ಚು ಸಂಖ್ಯೆಯ ಬಡವರು ಭಾರತದಲ್ಲಿ ಇರುವುದರಿಂದ ಈ ವರದಿಯು ನಮ್ಮ ದೇಶಕ್ಕೆ ಹೆಚ್ಚು ಪ್ರಸ್ತುತವಾಗಿದೆ.

ಅತ್ಯಂತ ಶ್ರೀಮಂತರ ಮೇಲೆ ತೆರಿಗೆ ಹೇರಬೇಕು, ಸಂಪತ್ತು ತೆರಿಗೆ ವಿಧಿಸಬೇಕು ಮತ್ತು ಅತಿಯಾದ ಲಾಭ ಗಳಿಕೆಯ ಮೇಲೆಯೂ ತೆರಿಗೆ ಹಾಕಬೇಕು ಎಂದು ವರದಿಯು ಶಿಫಾರಸು ಮಾಡಿದೆ. ಇದರಿಂದಾಗಿ ಶ್ರೀಮಂತರು ಮತ್ತು ಬಡವರ ನಡುವಣ ಅಂತರ ತಗ್ಗುತ್ತದೆ ಎಂದೂ ವರದಿಯು ಅಭಿಪ್ರಾಯಪಟ್ಟಿದೆ. ಶ್ರೀಮಂತರು ಮತ್ತು ಬಡವರ ನಡುವಣ ಅಂತರ ಹೆಚ್ಚುತ್ತಿರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಇದು ಭಾಗಶಃ ನೆರವಾಗಬಹುದು. ಸಮಾಜದ ತಳವರ್ಗದಲ್ಲಿ ಇರುವ ಜನರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದೇ ಸಮಸ್ಯೆಗೆ ಅತ್ಯುತ್ತಮ ಪರಿಹಾರ.

ಈ ಕುರಿತು ನಮ್ಮ ನೀತಿ ನಿರೂಪಕರಲ್ಲಿ ಕಾಳಜಿ ಕೊರತೆಯೇಕೆ?

ನಗರದ ಜೀವವೈವಿಧ್ಯಕ್ಕೆ ಬೇಕಿದೆ ರಕ್ಷಣೆ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಬೆಂಗಳೂರಿನ ಸ್ಯಾಂಕಿ ರಸ್ತೆಯ ಬಳಿ ಮೇಲ್ಸೇತುವೆ ನಿರ್ಮಾಣ ಮತ್ತು ರಸ್ತೆ ವಿಸ್ತರಣೆಗಾಗಿ, ನೂರಾರು ವರ್ಷ ಹಳೆಯದಾದ ಪಾರಂಪರಿಕ ಮರಗಳನ್ನು ಕಡಿಯಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ನಿರ್ಧರಿಸಿದೆ. ಇದನ್ನು ವಿರೋಧಿಸಿರುವ ಸ್ಥಳೀಯರು, ಪರಿಸರಪ್ರಿಯರು ಪ್ರತಿಭಟನೆಗೆ ಇಳಿದಿದ್ದಾರೆ. ಎಳೆಯ ವಿದ್ಯಾರ್ಥಿಗಳು ಮುಖ್ಯಮಂತ್ರಿಗೆ ಪತ್ರ ಬರೆದು, ಯೋಜನೆ ಕೈಬಿಡುವಂತೆ ಮನವಿ ಮಾಡಿದ್ದಾರೆ. ಈ ನಿರ್ಧಾರದ ವಿರುದ್ಧ ಕೆಲವು ಸಂಘಟನೆಗಳು ಸಹಿ ಸಂಗ್ರಹ ಅಭಿಯಾನ ಶುರು ಮಾಡಿವೆ.

ಸ್ಯಾಂಕಿ ಕೆರೆಯ ದಂಡೆಗೆ ಗಟ್ಟಿತನ ನೀಡಿರುವ ಮರಗಳನ್ನು ತೆರವುಗೊಳಿಸುವುದು ಕೆರೆಯ ಅಸ್ತಿತ್ವಕ್ಕೆ ಅಪಾಯ ತರುತ್ತದೆ ಎಂಬುದು ಪರಿಸರ ತಜ್ಞರ ಅಭಿಪ್ರಾಯ. ಮರಗಳನ್ನು ಸ್ಥಳಾಂತರಗೊಳಿಸುವ ಸಾಧ್ಯತೆ ಕುರಿತು ಪ್ರಶ್ನಿಸಿರುವ ಕೆಲವು ಹಿರಿಯ ನಾಗರಿಕರು, 'ಇದು ಬೇರೆ ರಸ್ತೆಗಳಂತಲ್ಲ, ಕೆರೆಯ ದಂಡೆಯ ರಸ್ತೆಯಾದ್ದರಿಂದ ಬೃಹತ್ ಭಾರದ ಸೇತುವೆ ಮತ್ತು ರಸ್ತೆ ವಿಸ್ತರಣೆಗಾಗಿ ಮರ ಕಡಿದರೆ ಕೆರೆ ದಂಡೆ ಶಿಥಿಲವಾಗಿ ಕೆರೆ ಒಡೆಯುವ ಅಪಾಯ ಹೆಚ್ಚಾಗುತ್ತದೆ, ಅಲ್ಲಿನ ಹಸಿರು ಪರಿಸರ ಮಾಯವಾಗುತ್ತದೆ, ನಮಗದು ಬೇಡ' ಎನ್ನುತ್ತಾರೆ. ಹಕ್ಕಿಗಳನ್ನು ಉಳಿಸಬೇಕು ಎನ್ನುವ ವಿದ್ಯಾರ್ಥಿಯೊಬ್ಬ, 'ಅಂಕಲ್, ಮರ ಕಡಿದರೆ ಇಲ್ಲಿರುವ ಮರಗಳಲ್ಲಿ ಗೂಡು ಕಟ್ಟಿರುವ ಪಕ್ಷಿ, ಕೀಟ, ಜೇಡ, ಹಲ್ಲಿ, ಬಾವಲಿಗಳ ಮನೆ ಇಲ್ಲದಂತಾಗುವುದಲ್ಲವೇ' ಎಂದು ಮುಗ್ಧವಾಗಿ ಪ್ರಶ್ನಿಸುತ್ತಾನೆ. 'ಕಾಡಿನಲ್ಲಿರುವ ಜೀವವೈವಿಧ್ಯ ಕಾಯಲು ಅರಣ್ಯಪಾಲಕರು ಇರುತ್ತಾರೆ, ನಗರದ ಜೀವವೈವಿಧ್ಯ ಕಾಪಾಡುವವರು ಯಾರು?' ಎಂದು ಇನ್ನೊಬ್ಬ ಹುಡುಗಿ ಕೇಳುತ್ತಾಳೆ.

ಜೀವವೈವಿಧ್ಯ ಎಂದಾಕ್ಷಣ ನಿತ್ಯಹರಿದ್ವರ್ಣ ಕಾಡು, ಹುಲ್ಲುಗಾವಲು, ಸಾಗರ, ನದಿ, ಸರೋವರ, ಮರುಭೂಮಿ, ಕುರುಚಲು ಕಾಡು, ಬೆಟ್ಟ, ಬೋಳುಗುಡ್ಡ, ಕಣಿವೆ, ಕಂದರ, ತೊರೆ, ಕೆರೆ, ನೆಡುತೋಪು, ಕಾಲುವೆ, ದೇವರಕಾಡು, ಕಾಂಡ್ಲಾ, ಶೋಲಾ, ಅರಾವಳಿ, ಹಿಮಾಲಯ, ಅಂಟಾರ್ಕ್ಟಿಕ, ಗ್ರೇಟ್ ಬ್ಯಾರಿಯರ್ ರೀಫ್, ಪಶ್ಚಿಮಘಟ್ಟ, ಪಕ್ಷಿ, ಪತಂಗ, ಪ್ರಾಣಿ, ಹಾವು, ತರಿ ಭೂಮಿಗಳು ಕಣ್ಣ ಮುಂದೆ ಬರುತ್ತವೆ. ಹುಲಿ, ಆನೆ, ಪಾಂಡಾ, ಚಿರತೆ, ಘರಿಯಾಲ್ ಮೊಸಳೆ, ಘೇಂಡಾಮೃಗ, ಚೀತಾ, ಕಾಳಿಂಗಸರ್ಪ, ವಲಸೆ ಹಕ್ಕಿ, ಔಷಧ ಸಸ್ಯಗಳ ಬಗ್ಗೆ ಕಾಳಜಿ ಶುರುವಾಗುತ್ತದೆ. ಜಲಮೂಲಗಳ ಸಂರಕ್ಷಣೆ, ಅರಣ್ಯ ಒತ್ತುವರಿ, ಕಾಳ್ಗಿಚ್ಚು, ಕಳ್ಳಬೇಟೆ, ಟ್ರೀ ಫೆಲ್ಲಿಂಗ್, ಮರ ಕಡಿತ, ಮಾನವ- ವನ್ಯಜೀವಿ ಸಂಘರ್ಷ, ಜಾನುವಾರು ಬಲಿ, ಅರಣ್ಯ ಇಲಾಖೆಯ ಕಾರ್ಯವೈಖರಿ ಕುರಿತು ವಿಸ್ತೃತ ಚರ್ಚೆಗಳಾಗುತ್ತವೆ. ಆದರೆ ಜನ ಒತ್ತೊತ್ತಾಗಿ ವಾಸಿಸುವ, ತಮ್ಮದೇ ಜೀವಿ ಪರಿಸರವನ್ನು ಹೊಂದಿರುವ ನಗರಗಳ ಜೀವವೈವಿಧ್ಯದ ಕುರಿತು ಯಾರೂ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ.

ಅಂಕಿ ಅಂಶಗಳಂತೆ, ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ 430 ಕೋಟಿ ಜನ ನಗರಗಳಲ್ಲಿ ವಾಸಿಸುತ್ತಿದ್ದಾರೆ. ನಗರಗಳಂತೂ ಜನರಿಂದ ಕಿಕ್ಕಿರಿದು ತುಂಬಿದ್ದು, ನೀರು, ಶುದ್ಧ ಗಾಳಿ, ರಸ್ತೆ ಸಂಪರ್ಕ, ಉದ್ಯಾನ, ಮನರಂಜನೆಗಾಗಿ ತಮ್ಮ ಸುತ್ತಲಿನ ಪರಿಸರವನ್ನೇ ಅವಲಂಬಿಸಿದ್ದಾರೆ. ಅವರ ಅಗತ್ಯಗಳನ್ನು ಪೂರೈಸುವ ಕೆರೆ, ಪಾರ್ಕು, ರಸ್ತೆ ಬದಿಯ ಮರ, ತಾರಸಿ ತೋಟ, ಮನೆಯ ಮುಂದಿನ ಕೈತೋಟ, ಓಡಾಡಲು ಬಳಸುವ ವಾಹನ, ಸಾಕುಪ್ರಾಣಿಗಳು, ತಿನ್ನುವ ಆಹಾರ, ವಾಸಿಸುವ ಮನೆ, ಅದರ ಸುತ್ತಲಿನ ಬೀದಿ, ರಸ್ತೆ, ಸುತ್ತಲಿನ ಗ್ರಾಮಗಳು, ಹೊರವಲಯದ ಕಾಡು, ಹಕ್ಕಿ, ಕ್ರಿಮಿಕೀಟ, ಪ್ರಾಣಿ-ಪಕ್ಷಿಗಳದ್ದೇ ಒಂದು ಪರಿಸರಜಾಲ ಸೃಷ್ಟಿಯಾಗಿರುತ್ತದೆ. ನಗರಗಳ ಬೃಹತ್ ಹಸಿರು ಉದ್ಯಾನಗಳು, ಕೃಷಿ-ತೋಟಗಾರಿಕೆ ಕಾಲೇಜುಗಳ ಸಾವಿರಾರು ಹೆಕ್ಟೇರ್‌ಗಳ ಹಸಿರು, ವನ್ಯಜೀವಿ ಸಂರಕ್ಷಣೆಗೆಂದು ನಗರಕ್ಕಂಟಿಕೊಂಡ ಕಾಡುಗಳಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಉದ್ಯಾನಗಳು ಆಮ್ಲಜನಕದ ಟ್ಯಾಂಕ್‌ಗಳಂತಿದ್ದು, ವಾಹನ, ಕಾರ್ಖಾನೆ, ಜನ ಎಬ್ಬಿಸುವ ಮಸಿ, ದೂಳನ್ನು ಹೀರಿಕೊಂಡು, ಉಸಿರಾಡುವ ಗಾಳಿಯ ವಿಷವನ್ನು ದೊಡ್ಡ ಮಟ್ಟದಲ್ಲಿ ಶುದ್ಧೀಕರಿಸುತ್ತ ಜನ- ಜಾನುವಾರುಗಳ ಆರೋಗ್ಯ ಕಾಪಾಡುತ್ತಿವೆ. ಕಾಡಿನ ಪ್ರಾಣಿಗಳ ರಕ್ಷಣೆ, ಕಾಡಿನ ಜೀವಿವೈವಿಧ್ಯ ಮತ್ತು ಅವುಗಳ ಪ್ರಾಮುಖ್ಯದ ಪ್ರಾಥಮಿಕ ಪಾಠ ಹೇಳಿಕೊಡುತ್ತವೆ.

ಹಸಿರನ್ನು ನುಂಗುವ ಕೆಲಸ ದೇಶದಾದ್ಯಂತ ಅವ್ಯಾಹತವಾಗಿ ನಡೆಯುತ್ತಿದೆ. ಕೇಂದ್ರ ಪರಿಸರ ಸಚಿವಾಲಯವು ಎರಡು ವರ್ಷಗಳ ಹಿಂದೆ ಬೆಂಗಳೂರಿನ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯನ್ನು 268.4 ಚದರ ಕಿಲೊಮೀಟರ್‌ನಿಂದ 168.4 ಚದರ ಕಿಲೊಮೀಟರ್‌ಗೆ ಇಳಿಸುವ ಆದೇಶ ಹೊರಡಿಸಿತ್ತು. ಇದನ್ನು ಪ್ರಶ್ನಿಸಿ ಕೆಲವು ಪರಿಸರ ಸಂಘಟನೆಗಳು ಕೋರ್ಟ್ ಮೆಟ್ಟಿಲೇರಿವೆ. 5 ಚದರ ಕಿ.ಮೀ. ವ್ಯಾಪ್ತಿಯ ಚೆನ್ನೈನ ಗಿಂಡಿ ರಾಷ್ಟ್ರೀಯ ಉದ್ಯಾನವು ಕೃಷ್ಣಮೃಗ, ಚುಕ್ಕೆ ಜಿಂಕೆ, ವಿವಿಧ ಜಾತಿಯ ಪಕ್ಷಿ, ಚಿಟ್ಟೆಗಳು, ಸಾವಿರಾರು ಹಾವು, ಕೀಟ, ಜೇಡಗಳ ತಾಣವಾಗಿ ವರ್ಷಕ್ಕೆ 7 ಲಕ್ಷ ಜನರನ್ನು ಆಕರ್ಷಿಸುತ್ತಿತ್ತು. ಈಗ ಅದರ ವ್ಯಾಪ್ತಿ 2.7 ಚದರ ಕಿ.ಮೀ.ಗೆ ಇಳಿದಿದೆ.

ಅಡ್ಯಾರ್ ನದಿಯ 42 ಕಿ.ಮೀ. ಉದ್ದದ ದಂಡೆಯನ್ನು ಪುನರ್‌ನಿರ್ಮಿಸುವ ಕಾರ್ಯಕ್ಕೆ ಕೈಹಾಕಿರುವ ಗ್ರೇಟರ್ ಚೆನ್ನೈ ಕಾರ್ಪೊರೇಷನ್, ನದಿ ದಂಡೆಯಲ್ಲೇ ಇರುವ ಕೊಟ್ಟೂರಪುರಂ ಟ್ರೀ ಪಾರ್ಕ್‌ನ ಸಾವಿರಾರು ಮರಗಳನ್ನು ಕಡಿದುಹಾಕಿದೆ. ಸುಪ್ರೀಂ ಕೋರ್ಟ್‌ನ ತಡೆಯಾಜ್ಞೆ ಬರುವ ಮುನ್ನವೇ ಸ್ಥಳೀಯರ ವಿರೋಧವನ್ನು ಲೆಕ್ಕಿಸದೆ ರಾತ್ರೋರಾತ್ರಿ ಮುಂಬೈನ ಮೆಟ್ರೊ ರೈಲಿನ ಶೆಡ್ ನಿರ್ಮಾಣಕ್ಕಾಗಿ ಆರೇ ಮಿಲ್ಕ್ ಕಾಲೊನಿಯ ಅರಣ್ಯ ಪ್ರದೇಶದಲ್ಲಿ ಸಾವಿರಾರು ಮರಗಳಿಗೆ ಕೊಡಲಿ ಹಾಕಿದ ಸರ್ಕಾರ ಮತ್ತು ರೈಲು ನಿಗಮವು ಕಡಿದ ಮರಗಳ ಸ್ಥಳಾಂತರದ ನಾಟಕವನ್ನಾಡಿ, ಅದು ಯಶಸ್ವಿಯಾಗದೆ ಎಲ್ಲರಿಂದಲೂ ಛೀಮಾರಿ ಹಾಕಿಸಿಕೊಂಡವು. 50 ವರ್ಷಗಳ ಹಿಂದೆ ಮುಂಬೈನಲ್ಲಿ ಫಿಲ್ಮ್ ಸಿಟಿ ನಿರ್ಮಾಣಕ್ಕಾಗಿ 200 ಎಕರೆ ಕಾಡನ್ನು ಕಡಿಯಲಾಗಿತ್ತು.

ಸಮೂಹ ಮಾಧ್ಯಮಗಳು ಮರ ಕಡಿಯುವುದರ ಬಗ್ಗೆ ಮಾತ್ರ ತಲೆಕೆಡಿಸಿಕೊಳ್ಳುತ್ತವೆ. ಬೆಂಗಳೂರಿನ ಕಬ್ಬನ್ ಪಾರ್ಕ್, ಲಾಲ್‌ಬಾಗ್, ಕೃಷಿ ವಿಶ್ವವಿದ್ಯಾಲಯ, ಭಾರತೀಯ ವಿಜ್ಞಾನ ಸಂಸ್ಥೆ, ಹೆಸರಘಟ್ಟ ಹುಲ್ಲುಗಾವಲು, ಕೆರೆಗಳು ಇಲ್ಲೆಲ್ಲಾ 200ಕ್ಕೂ ಹೆಚ್ಚು ಪಕ್ಷಿ ಪ್ರಭೇದ, ನೂರಕ್ಕೂ ಹೆಚ್ಚು ಜಾತಿಯ ಮರಗಳು, 150ಕ್ಕೂ ಹೆಚ್ಚು ಜಾತಿಯ ನೀರ ಹಕ್ಕಿಗಳು, ದಕ್ಷಿಣ ಭಾರತ ಮತ್ತು ಶ್ರೀಲಂಕಾಕ್ಕೆ ಮಾತ್ರ ಸೀಮಿತವಾದ ಕಾಡುಪಾಪ, ನೂರಾರು ಬಗೆಯ ಚಿಟ್ಟೆಗಳಿಗೆ ಸದೃಢ ಆವಾಸ ಕಲ್ಪಿಸಿವೆ. ರಸ್ತೆ ಬದಿಯ ಮರಗಳು ವಾತಾವರಣದ ಉಷ್ಣತೆಯನ್ನು 5.6 ಡಿಗ್ರಿ ಸೆಲ್ಸಿಯಸ್‌ವರೆಗೆ ಕಡಿಮೆ ಮಾಡುತ್ತಿವೆ ಮತ್ತು ನೆಲದ ಮೇಲ್ಮೈ ಉಷ್ಣತೆಯನ್ನು 27.5 ಡಿಗ್ರಿ ಸೆಲ್ಸಿಯಸ್‌ನಷ್ಟು ಕಡಿಮೆಗೊಳಿಸುತ್ತಿವೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

60 ವರ್ಷಗಳ ಹಿಂದೆ ಬೆಂಗಳೂರಿನ ಕೀಟ ತಜ್ಞರು ಪರಾವಲಂಬಿ ಕಣಜವನ್ನು ಪತ್ತೆ ಮಾಡಿದ್ದರು. ಅದೇ ವೇಳೆಗೆ ಅಮೆರಿಕದ ಟೆಕ್ಸಾಸ್ ಪ್ರಾಂತ್ಯದಲ್ಲಿ ಕಂಡುಬಂದ ನುಸಿಯೊಂದು ಅಲ್ಲಿನ ಹುಲ್ಲುಗಾವಲು ಮತ್ತು ದನಗಳಿಗೆ ಪ್ರಾಣಾಂತಿಕವಾಗಿ ಪರಿಣಮಿಸಿತ್ತು. ಇಲ್ಲಿ ಪತ್ತೆಯಾದ ಕಣಜವನ್ನು ಅಲ್ಲಿಗೆ ಕಳಿಸಿದಾಗ ನುಸಿ ನಿಯಂತ್ರಣಕ್ಕೆ ಬಂತು. ಹೆಣ್ಣೂರು ಪ್ರದೇಶದ ಕಾಡುಪಾಪಗಳು ರಸ್ತೆ ಬದಿಯ ಮರಗಳನ್ನು ಬಳಸಿಕೊಂಡು ಎಂಟು ಕಿಲೊಮೀಟರ್ ದೂರದ ಭಾರತೀಯ ವಿಜ್ಞಾನ ಸಂಸ್ಥೆಯ ಆವರಣಕ್ಕೆ ಬರುತ್ತಿದ್ದವು. ಮರಗಳು ಇಲ್ಲದ್ದರಿಂದ ಕಾಡುಪಾಪಗಳ ಆವಾಸ ತುಂಡಾಗಿದೆ.

ಮಾತೆತ್ತಿದರೆ ನಮ್ಮ ನಗರಗಳ ಜನಸಂಖ್ಯೆ ಹೆಚ್ಚು, ಅವರು ಬಳಸುವ ವಾಹನಗಳ ದಟ್ಟಣೆ ವಿಪರೀತವಾದ್ದರಿಂದ ರಸ್ತೆ ವಿಸ್ತರಣೆ, ಅಂಡರ್‌ಪಾಸ್ ಮತ್ತು ಫ್ಲೈಓವರ್ ನಿರ್ಮಾಣ ಅನಿವಾರ್ಯ ಎನ್ನುವುದು ನಗರಾಭಿವೃದ್ಧಿ ಅಧಿಕಾರಿಗಳ ವಾದ. ನಗರದ ಹಸಿರಿನ ಜೊತೆಗೆ ಜೀವ ವೈವಿಧ್ಯವನ್ನು ಕಾಪಾಡಿಕೊಂಡಿರುವ ಸಿಂಗಪುರ, ಕೇಪ್‌ಟೌನ್, ಗ್ರೋಗ್ರೀನ್ ಮತ್ತು ಸ್ಪಾಂಜ್ ಸಿಟಿ ಯೋಜನೆ ಹಮ್ಮಿಕೊಂಡಿರುವ ಚೀನಾದ ವುಹಾನ್, ಗ್ರೀನ್ ಸಿಟಿ ಪ್ರಶಸ್ತಿ ಪಡೆದಿರುವ ಹೈದರಾಬಾದ್, ಯುರೋಪಿನ ಮ್ಯಾಂಚೆಸ್ಟರ್, ಅಮೆರಿಕದ ವಾಷಿಂಗ್ಟನ್ ಡಿ.ಸಿ ನಮ್ಮ ಸರ್ಕಾರಗಳಿಗೆ ನೆನಪಾಗುವುದೇ ಇಲ್ಲ.



ಚುರುಮುರಿ



ಪರ್ಸೆಂಟೇಜ್ ಪ್ರವರ!

• ಎಸ್.ಬಿ. ರಂಗನಾಥ್

'ಈ ಪರ್ಸೆಂಟೇಜ್ ಗದ್ದಲಕ್ಕೆ ಯಾವಾಗಯ್ಯ ಕೊನೆ?' ಚೆಡ್ಡಿ ದೋಸ್ತನನ್ನು ಕೇಳಿದೆ.

'ಸದ್ಯಕ್ಕಂತೂ ಇಲ್ಲ. ಇನ್ನೂ ಮೂರು– ನಾಲ್ಕು ತಿಂಗಳು ಅದು ಎಲ್ಲರ ನಾಲಿಗೆ ಮೇಲೆ ನಲಿದಾಡ್ತಿರುತ್ತೆ. ಈಗ ಅದು ಬೇರೆ ಬೇರೆ ರಂಗಕ್ಕೂ ವ್ಯಾಪಿಸ್ತಿದೆಯಲ್ಲ' ಎಂದ.

'ಅದ್ಯಾವ ರಂಗವೋ?'

'ಪ್ರಾಮಾಣಿಕತೆಯೂ ಈ ಪರ್ಸೆಂಟೇಜ್ ಲೆಕ್ಕಕ್ಕೇ ಬಂದ್ಬಿಟ್ಟಿದೆ. ನಮ್ಮ ಮಾನ್ಯ ಸಚಿವರೊಬ್ಬರು, ನಾನು ಒಂದು ಪರ್ಸೆಂಟ್ ಪ್ರಾಮಾಣಿಕ ಅಂತ ಹೇಳಿರೋದನ್ನ ನೋಡಿದೆಯ?'

'ಭೇಷ್! ಸತ್ಯ ಹೇಳಿದ ಅವರ ಪ್ರಾಮಾಣಿಕತೆಯನ್ನು ನಾವು ಮೆಚ್ಚಲೇಬೇಕು'.

'ಅಷ್ಟೇ ಅಲ್ಲ, 'ಕೆಲವೊಮ್ಮೆ ತಪ್ಪುಗಳೂ ಆಗುತ್ತವೆ. ಆಗ ದೇವರಲ್ಲಿ ಕ್ಷಮೆ ಕೇಳುತ್ತೇನೆ. ಪುನಃ ಒಂದು ಪರ್ಸೆಂಟ್ ಕೆಲಸ ಮಾಡುತ್ತೇನೆ' ಎಂದಿದಾರೆ!'

'ಅಂದ್ರೆ, ಪ್ರಾಮಾಣಿಕತೇನೂ ಒಂದು ಪರ್ಸೆಂಟ್, ಮಾಡೋ ಕೆಲ್ಸಾನೂ ಒಂದು ಪರ್ಸೆಂಟ್! ಎಷ್ಟು ಸರಿಯಾಗಿ ಹೇಳಿದಾರಲ್ಲೋ'

'ಅಲ್ವೆ ಮತ್ತೆ?! ಕೆಟ್ಟು ನಿಂತ ಗಡಿಯಾರವೂ ದಿನಕ್ಕೆ ಎರಡು ಬಾರಿ ಸರಿಯಾದ ಸಮಯ ತೋರಿಸುತ್ತಲ್ಲಾ ಹಾಗೆ'.

'ಅದ್ಸರಿ, ಎರಡು– ಮೂರು ದಿನ ಕಾಣಲಿಲ್ಲ, ಎಲ್ಲಿಗಯ್ಯಾ ಮಾಯವಾಗಿದ್ದೆ?'

'ಎಲೆಕ್ಷನ್ ಬ್ಯುಸೀನಪ್ಪ. ನಮ್ಮ ಬಾಸು ಪುನಃ ಚುನಾವಣೆಗೆ ನಿಲ್ತಾರೆ'.

'ಎಲೆಕ್ಷನ್ ಇನ್ನೂ ಮೂರು ತಿಂಗಳು ದೂರ ಇದೆ!'

'ಆದ್ರೆ, ಅದಕ್ಕೆ ಪೂರ್ವತಯಾರಿ ಮಾಡ್ಕೊಬೇಕಲ್ಲ'.

'ಏನಯ್ಯಾ ಅಂಥಾ ತಯಾರಿ?'

'ಎರಡು ಲೋಡ್ ಕುಕ್ಕರ್, ಡಿನ್ನರ್ ಸೆಟ್ ಬಂದಿದ್ದವಪ್ಪಾ, ಅವುಗಳನ್ನ ಸರಿಯಾದವ್ರಿಗೆ ತಲುಪಿಸೋ ಹೊತ್ತಿಗೆ ಸಾಕಾಗಿಹೋಯ್ತು'.

'ಅದ್ರಲ್ಲಿ ಎಷ್ಟು ಪರ್ಸೆಂಟ್ ವಿತರಣೆ ಮಾಡಿದೆಯೋ?... ನಮ್ಮ ಮಂತ್ರಿಗಳು ಹೇಳಿದಂತೆ ಪ್ರಾಮಾಣಿಕವಾಗಿ ಹೇಳಯ್ಯಾ'.

'ಅಂಥಾ ಪ್ರಶ್ನೆ ಕೇಳಬಾರದು... ಗಣರಾಜ್ಯೋತ್ಸವ ನೋಡಲು ದಿಲ್ಲಿಗೆ ಹೋಗೋಣ ಬರ್ತೀಯಾ?'

ದಿನದ ಟ್ವೀಟ್

ಬಯಸಿದ್ದು ದಕ್ಕಿತು!



ಬಿಬಿಸಿ ಸಾಕ್ಷ್ಯಚಿತ್ರದ ಬಗ್ಗೆ ಬಹಳಷ್ಟು ಜನರಿಗೆ ತಿಳಿದಿರಲೇ ಇಲ್ಲ. ಆದರೆ ಈಗ ಹೆಚ್ಚು ಹೆಚ್ಚು ಜನರು ಅದನ್ನು ಹುಡುಕಲು ಪ್ರಯತ್ನಿಸುತ್ತಿದ್ದಾರೆ. ಬಿಬಿಸಿಗೆ ಪ್ರಚಾರ ಬೇಕಿತ್ತು ಮತ್ತು ಅದನ್ನೀಗ ಪಡೆಯಿತು.

ಸಂಘಮಿತ್ರ, ಚಿತ್ರ ನಿರ್ಮಾಪಕಿ, ಲೇಖಕಿ

ಕಿಡಿನುಡಿ



ನಮ್ಮ ಒಳಿತಿಗೆ ಹಸಿರು ಪ್ರದೇಶಗಳು ಅತ್ಯಗತ್ಯ. ರಸ್ತೆ ವಿಸ್ತರಣೆಯ ಸಲುವಾಗಿ ನಾವು ಅವುಗಳನ್ನು ಕಳೆದುಕೊಳ್ಳಲು ಸಾಧ್ಯವಿಲ್ಲ. ರಸ್ತೆ ವಿಸ್ತರಣೆ ಯೋಜನೆಗಳಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವಾಗ ಸಮುದಾಯವನ್ನು ತೊಡಗಿಸಿಕೊಳ್ಳಿ ಮತ್ತು ಮರ ಕಡಿಯುವ ಬಗೆಗಿನ ಅವರ ಕಳವಳವನ್ನು ಆಲಿಸಿ.
#FlyoverYaake

ಪ್ರಕಾಶ್ ಬೆಳವಾಡಿ, ಚಿತ್ರನಟ, ರಂಗಕರ್ಮಿ

25 ವರ್ಷಗಳ ಹಿಂದೆ

ಶುಕ್ರವಾರ, 23-1-1998

• **'ವಿಧಾನಸಭೆ ವಿಸರ್ಜನೆ ಇಲ್ಲ'**

ಬಳ್ಳಾರಿ, ಜ. 22– ಯಾವುದೇ ಕಾರಣಕ್ಕೂ ಪ್ರಸಕ್ತ ವಿಧಾನಸಭೆಯನ್ನು ವಿಸರ್ಜಿಸಲು ತಾವು ಶಿಫಾರಸು ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಜಿಲ್ಲಾ ಜನತಾದಳ ಕಾರ್ಯಕರ್ತರ ಸಮಾವೇಶದಲ್ಲಿ ಭಾಗವಹಿಸಲು ಇಲ್ಲಿಗೆ ಆಗಮಿಸಿದ್ದ ಅವರು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

'ಯಾರೋ ಒಬ್ಬರು ಹೇಳಿದರು ಎಂದ ಮಾತ್ರಕ್ಕೆ, ಸಾರ್ವಜನಿಕರ ಕೋಟ್ಯಂತರ ರೂಪಾಯಿ ಹಣವನ್ನು ಚುನಾವಣೆ ನಡೆಸುವುದಕ್ಕೆ ಪೋಲು ಮಾಡಲು ನಾನು ಇಚ್ಛಿಸುವುದಿಲ್ಲ' ಎಂದು ಅವರು ನುಡಿದರು.

'ಎಐಸಿಸಿ ಅಧ್ಯಕ್ಷ ಸೀತಾರಾಂ ಕೇಸರಿ ಅವರ ಸ್ವಾರ್ಥ ಮನೋಭಾವ, ದುಡುಕಿನಿಂದ ಕೇವಲ 18 ತಿಂಗಳಲ್ಲಿ ಮತ್ತೆ ಲೋಕಸಭೆಗೆ ಮಧ್ಯಂತರ ಚುನಾವಣೆ ಎದುರಿಸುವ ಪರಿಸ್ಥಿತಿ ಒದಗಿದೆ. ಇದು ಯಾವುದೇ ಪಕ್ಷಕ್ಕೆ ಶೋಭೆ ತರುವ ಕೆಲಸವಲ್ಲ' ಎಂದರು.

• **ಜಲಂಧರ್‌ನಲ್ಲಿ ಗುಜ್ರಾಲ್ ನಾಮಪತ್ರ**

ಜಲಂಧರ್, ಜ. 22 (ಪಿಟಿಐ)– ಪ್ರಧಾನಿ ಐ.ಕೆ. ಗುಜ್ರಾಲ್ ಅವರು ಜಲಂಧರ್ ಲೋಕಸಭಾ ಕ್ಷೇತ್ರದಲ್ಲಿ ಜನತಾದಳದ ಅಭ್ಯರ್ಥಿಯಾಗಿ ಇಂದು ತಮ್ಮ ನಾಮಪತ್ರ ಸಲ್ಲಿಸಿದರು.

ಪ್ರಧಾನಿ ಗುಜ್ರಾಲ್ ಅವರು ಸಹಿ ಮಾಡಿದ ನಾಮಪತ್ರಗಳನ್ನು ಕೇಂದ್ರ ಸಚಿವ ಬಲವಂತ್ ಸಿಂಗ್ ರಾಮೂ ವಾಲಿಯ ಅವರು ಚುನಾವಣಾಧಿಕಾರಿ ಎಂ.ಪಿ. ಸಿಂಗ್ ಅವರಿಗೆ ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಅಕಾಲಿದಳ ಮುಖ್ಯಸ್ಥ ಹಾಗೂ ಪಂಜಾಬ್‌ನ ಮುಖ್ಯಮಂತ್ರಿ ಪ್ರಕಾಶ್ ಸಿಂಗ್ ಬಾದಲ್, ಜಮ್ಮು ಮತ್ತು ಕಾಶ್ಮೀರದ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ, ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷ ಮಧು ದಂಡವತೆ ಮತ್ತಿತರರು ಹಾಜರಿದ್ದರು.

50 ವರ್ಷಗಳ ಹಿಂದೆ

ಮಂಗಳವಾರ, 23-1-1973

• **ವಿಜಯವಾಡದಲ್ಲಿ ಕರ್ಫ್ಯೂ ಉಲ್ಲಂಘನೆ: ಲೂಟಿ-ಗೋಲಿಬಾರ್**

ಹೈದರಾಬಾದ್, ಜ. 22– ಪ್ರತ್ಯೇಕ ಆಂಧ್ರ ಚಳವಳಿಯ ಕೇಂದ್ರವಾದ ವಿಜಯವಾಡದಲ್ಲಿ ಇಂದು ಮತ್ತೆ ಉದ್ರಿಕ್ತ ಗುಂಪು ಹೊಸ ಹಿಂಸಾ ಕಾರ್ಯಗಳಲ್ಲಿ ತೊಡಗಿದಾಗ ಪೊಲೀಸರು ಮತ್ತು ಸೇನಾಪಡೆ ಗುಂಡು ಹಾರಿಸಿದ ಕಾರಣ ಕನಿಷ್ಠಪಕ್ಷ ಎಂಟು ಮಂದಿ ಗಾಯಗೊಂಡರು.

ಗಾಂಧಿನಗರದಲ್ಲಿ ಹಿಂಸಾಚರಣೆಯಲ್ಲಿ ತೊಡಗಿದ್ದ ಗುಂಪು ಚದುರಿಸಲು ಲಾಠಿ ಮತ್ತು ಅಶ್ರುವಾಯು ವಿಫಲವಾದಾಗ ಗುಂಡು ಹಾರಿಸಲಾಯಿತು. ಸಮಾಜಘಾತುಕ ವ್ಯಕ್ತಿಗಳ ಗುಂಪು ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿ, ಟೌನಿನಲ್ಲಿ ಒಂದು ಶ್ರೀಮಂತ ಚಿತ್ರಮಂದಿರ ಮತ್ತು ಅಂಚೆ ಕಚೇರಿಗೆ ಬೆಂಕಿ ಹಚ್ಚಿತೆಂದು ವರದಿಯಾಗಿದೆ. ಅಲ್ಲದೆ ಉದ್ರಿಕ್ತ ಗುಂಪು ಹಲವಾರು ಕಡೆ ಲೂಟಿ ಸಹ ಮಾಡಿತೆಂದೂ ತಿಳಿದುಬಂದಿದೆ.

• **ನೈಜೀರಿಯಾದಲ್ಲಿ ವಿಮಾನ ಅಪಘಾತ: 192 ಸಾವು**

ಲೇಗಾಸ್, ಜ. 22– ಮೆಕ್ಕಾದಿಂದ 202 ಜನ ಮುಸ್ಲಿಂ ಯಾತ್ರಾರ್ಥಿಗಳನ್ನು ಕರೆತರುತ್ತಿದ್ದ ಜೋರ್ಡಾನಿನ ಬೋಯಿಂಗ್–707 ವಿಮಾನವೊಂದು ಇಂದು ಉತ್ತರ ನೈಜೀರಿಯಾದಲ್ಲಿ ಅಪಘಾತಕ್ಕೀಡಾಗಿ ವಿಮಾನದಲ್ಲಿದ್ದ 192 ಜನ ಪ್ರಯಾಣಿಕರು ಸತ್ತರೆಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

ಕಾನೊನಗರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಾಗ ವಿಮಾನವು ರನ್‌ವೇಯಿಂದ ಸರಿದು ಹತ್ತಿಕೊಂಡು ಉರಿಯತೊಡಗಿತು ಎಂದು ಅಧಿಕಾರಿಗಳು ಹೇಳಿದರು.

ಸಂಗತ

ಪಂಚಾಯಿತಿಗೇಕಿಲ್ಲ ಮೌಲ್ಯಮಾಪನ?

ಗ್ರಾಮ ಪಂಚಾಯಿತಿ ಸದಸ್ಯರು ಜಾರಿಗೆ ತರಲು ಶ್ರಮಿಸಬೇಕಾದ ಪಂಚಶೀಲ ಕರ್ತವ್ಯಗಳು ಎಷ್ಟರಮಟ್ಟಿಗೆ ಪಾಲನೆಯಾಗುತ್ತಿವೆ ಎಂಬುದನ್ನು ಪರಿಶೀಲಿಸಬೇಕಾಗಿದೆ

• ಪ.ರಾಮಕೃಷ್ಣ ಶಾಸ್ತ್ರಿ

ಸಚಿವರಾಗಿ ಕೆಲಸ ಮಾಡಿದವರ ಮೌಲ್ಯಮಾಪನ ಮಾಡಿ, ಅಸಮರ್ಥರೆನಿಸಿದವರನ್ನು ಬದಲಾಯಿಸುವ ವಿಧಾನವಿದೆ. ಆದರೆ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮತದಾರರು ಪಂಚಾಯಿತಿ ಮಟ್ಟದಲ್ಲಿ ಸಾಮಾನ್ಯರಿಗೆ ಮತ ನೀಡಿ ಗೆಲ್ಲಿಸಿದ ಬಳಿಕ, ಅವರೇನು ಸಾಧನೆ ಮಾಡಿದ್ದಾರೆ ಎಂದು ನೋಡಲಾಗುತ್ತಿದೆಯೇ?

ಕರ್ನಾಟಕದಲ್ಲಿ 5,659 ಗ್ರಾಮ ಪಂಚಾಯಿತಿಗಳು ಆಡಳಿತ ನಡೆಸುತ್ತಿವೆ. ಇದರ ಹತ್ತು ಪಟ್ಟಿಗೂ ಹೆಚ್ಚು ಸದಸ್ಯರಿದ್ದಾರೆ. ಅವರು ನಿರ್ವಹಿಸಬೇಕಾದ ಕೆಲಸಗಳ ಬಗೆಗೆ ಅವರಿಗೆ ತರಬೇತಿ ನೀಡಲಾಗುತ್ತದೆ. ಗೌರವಧನ ನೀಡುವ ವ್ಯವಸ್ಥೆಯೂ ಇದೆ. ತಾನು ಗೆದ್ದು ಬಂದ ಪ್ರದೇಶದ ಮೂಲಭೂತ ಸಮಸ್ಯೆಗಳು ಏನೇನಿವೆ, ಅವುಗಳ ಪರಿಹಾರಕ್ಕೆ ತಾನು ಏನು ಮಾಡಬೇಕು ಎಂಬುದರ ಅರಿವು, ಆರಿಸಿಬಂದ ಜನಪ್ರತಿನಿಧಿಗೆ ಇರಲೇಬೇಕಾಗುತ್ತದೆ.

ರಾಜ್ಯದಲ್ಲಿ ಹಸುಗಳ ಗಂಟುರೋಗವು ಹೈನುಗಾರರ ಪಾಲಿಗೆ ಬೃಹತ್ ಸಮಸ್ಯೆ ತಂದೊಡ್ಡಿದೆ. ಈ ರೋಗಪೀಡಿತ ಹಸುಗಳು ಕೈಕಾಲುಗಳ ಸ್ವಾಧೀನ ಕಳೆದುಕೊಂಡು ಮಲಗಿರುತ್ತವೆ. ಇಂತಹ ಸ್ಥಿತಿ ಬರುವ ಮೊದಲೇ ಪಶು ವೈದ್ಯಾಧಿಕಾರಿಗಳನ್ನು ಸಂಪರ್ಕಿಸಿ ಲಸಿಕಾ ಶಿಬಿರ ಏರ್ಪಡಿಸುವ ಮುತುವರ್ಜಿಯನ್ನು, ಸ್ಥಳೀಯ ಸರ್ಕಾರ ಎನಿಸಿಕೊಂಡ ಗ್ರಾಮ ಪಂಚಾಯಿತಿ ಸದಸ್ಯರು ತೋರಬೇಕಿತ್ತು. ಎಷ್ಟು ಕಡೆ ಅಂತಹ ಕಾಳಜಿ ಸದಸ್ಯರಿಂದ ವ್ಯಕ್ತವಾಗಿದೆ?

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯಿತಿಯ ಒಂದು ವಿಶಿಷ್ಟ ಕಾರ್ಯಕ್ರಮ ಮಾಧ್ಯಮಗಳಲ್ಲಿ ಪ್ರಶಂಸೆ ಪಡೆದಿತ್ತು. ಅದು, ಬಸ್ ತಂಗುದಾಣಗಳಲ್ಲಿ ಬಸ್ಸಿಗಾಗಿ ಕಾದಿರುವವರನ್ನು ಓದಿಗೆ ಪ್ರಚೋದಿಸುವ 'ಪುಸ್ತಕ ಗೂಡು' ಯೋಜನೆ. ಮನೆಮನೆಗಳಲ್ಲಿ ಬೇಡಿ ತಂದ ಪುಸ್ತಕಗಳು ಯಾರೋ ದಾನಿಗಳು ಕೊಟ್ಟ ಕಪಾಟುಗಳಲ್ಲಿ ತುಂಬಿಕೊಂಡವು. ಈ ಯೋಜನೆ ಆರಂಭವಾಗಿ ಬಹು ವರ್ಷಗಳೇನೂ ಕಳೆದಿಲ್ಲ. ಈಗೊಮ್ಮೆ ಹೋಗಿ ನೋಡಿದರೆ, ಯಾರಿಗೂ ಅಗತ್ಯವಿಲ್ಲದ ಸಹಕಾರ ಸಂಘಗಳ ವಾರ್ಷಿಕ ವರದಿಯ ಪುಸ್ತಕಗಳನ್ನು ಬಿಟ್ಟರೆ ಗೂಡುಗಳೊಳಗೆ ಬೇರೆ ಪುಸ್ತಕಗಳಿಲ್ಲ. ಹೆಚ್ಚಿನ ನಿಲ್ದಾಣಗಳಲ್ಲಿ ದೂಳು ತುಂಬಿದ ಬರಿದಾದ ಗೂಡುಗಳಿವೆ.

ಮತ್ತೆ ಮತ್ತೆ ಪುಸ್ತಕಗಳನ್ನು ಯಾಚಿಸಿ ತಂದು ಗೂಡುಗಳನ್ನು ತುಂಬುವ ಕೆಲಸವನ್ನು ಆಡಳಿತಾರೂಢ ಸದಸ್ಯರು ಮಾಡಬೇಕಿತ್ತಲ್ಲವೇ? ಒಂದು ವಿಶಿಷ್ಟ ಯೋಜನೆ ಅನುಷ್ಠಾನಗೊಂಡರೂ ಅದರ ಮಹತ್ವವನ್ನು ತಿಳಿಯದಿರುವ ದೌರ್ಭಾಗ್ಯ ಪ್ರಾಪ್ತವಾಗಬಾರದು ತಾನೆ? ಪ್ರತಿಯೊಬ್ಬ ಗ್ರಾಮ ಪಂಚಾಯಿತಿ ಸದಸ್ಯನೂ ತಿಳಿದುಕೊಂಡು ಜಾರಿಗೆ ತರಲು ಶ್ರಮಿಸಬೇಕಾದ ಪಂಚಶೀಲ ಕರ್ತವ್ಯಗಳಿವೆ. ಅವುಗಳಲ್ಲಿ ನೈರ್ಮಲ್ಯವೂ ಒಂದು. ಪ್ರತೀ ಗ್ರಾಮದಲ್ಲಿ ಸಮುದಾಯ ಶೌಚಾಲಯಗಳನ್ನು ನಿರ್ಮಿಸುವುದು, ನಿರ್ವಹಿಸುವುದು ಅವರ ಕರ್ತವ್ಯಗಳ ಸಾಲಿಗೆ ಸೇರುತ್ತದೆ. ಒಂದೇ ಒಂದು ಸಾರ್ವಜನಿಕ ಶೌಚಾಲಯವನ್ನೂ ನಿರ್ಮಿಸದ ಪಂಚಾಯಿತಿಗಳು ಇನ್ನೂ ಇದ್ದರೂ ಅದರ ಕುರಿತು ಮೌಲ್ಯಮಾಪನ ಮಾಡಿ, ಅದರ ವ್ಯಾಪ್ತಿಯ ಸದಸ್ಯರ ಕರ್ತವ್ಯಲೋಪವನ್ನು ಗುರುತಿಸಬೇಕಾಗಿತ್ತು.

ಕಸ ಸಂಗ್ರಹಕ್ಕೆ ಬಹುತೇಕ ಪಂಚಾಯಿತಿಗಳಿಗೆ ಮಿನಿ ವಾಹನ ಒದಗಿಸಲಾಗಿದೆ. ಸ್ವಚ್ಛತೆಯ ಬಗೆಗೆ ಜನರ ಮನ ಅರಳಿಸುವ ಹಾಡಿನ ಜೊತೆಗೆ ಬರುವ ಈ ವಾಹನದಲ್ಲಿ ಗ್ರಾಮೀಣ ಪ್ರದೇಶದ ಅಂಗಡಿಗಳಿಂದ ಮಾತ್ರ ಕಸ ಸಂಗ್ರಹಿಸಲಾಗುತ್ತದೆ. ಹೀಗಾದರೆ ಮನೆಗಳಲ್ಲಿ ಸಂಗ್ರಹವಾಗುವ ಕಸದ ರಾಶಿಯ ಗತಿ ಏನು? ರಸ್ತೆಗಳಲ್ಲಿ ಸಾಗುವ ಯಾತ್ರಿಕರು, ಕೋಳಿ ಮತ್ತು ಮಾಂಸದ ಅಂಗಡಿಯವರು ತ್ಯಾಜ್ಯಗಳನ್ನು ಪಾಲಿಥಿನ್ ಚೀಲಗಳಲ್ಲಿ ತುಂಬಿಸಿ ತಂದು ರಸ್ತೆಯ ಇಕ್ಕೆಲಗಳ ಚರಂಡಿಗಳಲ್ಲಿ ಹಾಕಿ ಹೋಗುತ್ತಾರೆ.

ಇಂತಹ ತ್ಯಾಜ್ಯವನ್ನು ತಂದೆಸೆಯಲು ಪ್ರತೀ ಪಂಚಾಯಿತಿಯೂ ಒಂದು ದೊಡ್ಡ ಕಸದ ತೊಟ್ಟಿಯನ್ನು ನಿಗದಿತ ಸ್ಥಳದಲ್ಲಿ ಯಾಕೆ ನಿರ್ಮಿಸುವುದಿಲ್ಲ? ಸದಸ್ಯರು ತಮ್ಮ ವ್ಯಾಪ್ತಿಗೆ ಒಳಪಡುವ ಪ್ರದೇಶದ ನೈರ್ಮಲ್ಯವನ್ನು ಕಾಪಾಡಲು ಶ್ರಮಿಸಬೇಕು ತಾನೆ?



ಇನ್ನು ಗ್ರಾಮ ಪಂಚಾಯಿತಿಯ ಮುಖ್ಯ ಕಾರ್ಯಕ್ರಮಗಳಲ್ಲಿ ಕುಡಿಯುವ ನೀರಿನ ಪೂರೈಕೆಯೂ ಒಂದು. ನೀರಿನ ಲಭ್ಯತೆಯಿರುವ ಸ್ಥಳದಲ್ಲಿ ಮಳೆಗಾಲದ ನೀರಿಂಗಿಸಲು ಸದಸ್ಯರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದುದು ಅವರು ಪಾಲಿಸಬೇಕಾದ ಪಂಚಶೀಲ ತತ್ವಗಳಲ್ಲಿ ಒಂದು. ಎಷ್ಟು ಪಂಚಾಯಿತಿ ಸದಸ್ಯರು ಈ ಕೆಲಸಕ್ಕೆ ಹೆಗಲು ಕೊಟ್ಟಿದ್ದಾರೆ ಎಂದು ತಿಳಿಯಬೇಕಾಗಿದೆ.

ನೀರು ಸಾಬರೆಂದೇ ಖ್ಯಾತಿ ಪಡೆದ ನಜೀರಸಾಬರು ಗ್ರಾಮೀಣ ಭಾರತದ ಅದ್ಭುತ ಕನಸು ಕಂಡರು. ನಾಲ್ಕು ಗ್ರಾಮಗಳನ್ನು ಒಂದುಗೂಡಿಸಿ ಮಂಡಲ ಪಂಚಾಯಿತಿಗಳ ರಚನೆ ಮಾಡಿದರು. ತೆರಿಗೆಯ ಹಣವು ಗ್ರಾಮಗಳ ಅಭಿವೃದ್ಧಿಗೆ ಪೂರ್ಣ ಬಳಕೆಯಾಗುವಂತಹ ಕಾರ್ಯಕ್ರಮಗಳನ್ನು ರಾಮಕೃಷ್ಣ ಹೆಗಡೆ ನೇತೃತ್ವದ ಅಂದಿನ ಸರ್ಕಾರ ರೂಪಿಸಿತು. ಅಧಿಕಾರ ವಿಕೇಂದ್ರೀಕರಣದ ಕಲ್ಪನೆ ಹೊಸ ಆಶೋದಯವನ್ನು ಮೂಡಿಸಿದ್ದಂತೂ ಸತ್ಯವೇ.

ಆದರೆ ಆಡಳಿತದ ಚುಕ್ಕಾಣಿ ಹಿಡಿದವರು ಬದಲಾಗುತ್ತಾ ಹೋದಂತೆ ಗ್ರಾಮ ಪಂಚಾಯಿತಿಗಳೂ ರಾಜಕೀಯ ಪಕ್ಷಗಳ ಕೈಗೊಂಬೆಗಳಾದವು. ಗೆದ್ದು ಬಂದವರಿಗೆ ವೈಯಕ್ತಿಕ ಸೇಡು, ಮರಳು ದಂಧೆ, ಪಕ್ಷಪಾತ ಇವೆಲ್ಲಕ್ಕೂ ವಿಶಾಲ ಮೈದಾನಗಳಾದವು. ಕೆಲವೆಡೆ ಕಮಿಷನ್ ಆರೋಪವೂ ಕೇಳಿಬಂತು. ಸ್ಥಳೀಯರನ್ನೇ ಆಡಳಿತದ ಕುರ್ಚಿಗೇರಿಸಿ ಹಿತಕರವಾದ ಸುಖೀರಾಜ್ಯ ನಿರ್ಮಿಸುವ ಯೋಚನೆ ಭ್ರಮೆಯಷ್ಟೇ ಅನಿಸಿದೆ. ಈ ಹೊತ್ತಿನಲ್ಲಿ ಏನೂ ಮಾಡದ ನಿಷ್ಕ್ರಿಯ ಪಂಚಾಯಿತಿ ಮತ್ತು ಅದರ ಸದಸ್ಯರ ಕೆಲಸಗಳ ಬಗೆಗೆ ಮೌಲ್ಯಮಾಪನ ನಡೆದರೆ, ಮತ ನೀಡಿದವರಿಗೊಂದು ಸಮಾಧಾನವಾದರೂ ಸಿಗಬಹುದು.

ವಾಚಕರ ವಾಣಿ

ವಿದ್ಯಾರ್ಥಿ ಜೀವನದಿಂದಲೇ ರಾಜಕೀಯ ಮೈಗೂಡಲಿ

ವಿದ್ಯಾರ್ಥಿ ಜೀವನದಲ್ಲಿ ರಾಜಕೀಯ ಸಲ್ಲದು ಎಂಬ ಮುಖ್ಯಮಂತ್ರಿಯವರ ಹಿತನುಡಿ ಹಾಸ್ಯಾಸ್ಪದವಾಗಿದೆ. ರಾಜಕೀಯ ಅನ್ನುವುದು ವಿದ್ಯಾರ್ಥಿ ದೆಸೆಯಿಂದ ಬಂದರಷ್ಟೇ ಸಮಾಜದ ಎಲ್ಲ ಸ್ತರಗಳಿಂದ ಉತ್ತಮ ನಾಯಕರು ರೂಪುಗೊಳ್ಳಲು ಸಾಧ್ಯ. ಇಲ್ಲವಾದಲ್ಲಿ ರಾಜಕೀಯವು ಬಹುತೇಕ ವಂಶಾಡಳಿತಕ್ಕಷ್ಟೇ ಸೀಮಿತವಾಗಲಿದೆ. ಈಗಿರುವವರ ನಂತರ ಅವರ ಮಕ್ಕಳು, ಮೊಮ್ಮಕ್ಕಳು, ಸೊಸೆಯಂದಿರು, ಅಳಿಯಂದಿರಿಗಷ್ಟೇ ಮೀಸಲಾಗಬಹುದು. ಹಾಗಾದರೆ ಅದು ಜನಸಾಮಾನ್ಯರ ದೌರ್ಭಾಗ್ಯ. ಈಗಿನ ಜನಪ್ರತಿನಿಧಿಗಳಲ್ಲಿ ಕೆಲವರು ವಿದ್ಯಾರ್ಥಿ ಜೀವನದಿಂದಲೇ ರಾಜಕೀಯ ಮೈಗೂಡಿಸಿಕೊಂಡವರು. ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳಾಗಿ ಆಯ್ಕೆಯಾಗಿದ್ದವರು ನಂತರ ಸಕ್ರಿಯ ಚುನಾವಣಾ ರಾಜಕೀಯಕ್ಕೆ ಬಂದು ದೊಡ್ಡ ನಾಯಕರಾಗಿ ಬೆಳೆದ ನಿದರ್ಶನಗಳು ನಮ್ಮಲ್ಲಿ ಅನೇಕ ಇವೆ.

ಆ ಬಳಿಕ ಕಾಲೇಜುಗಳಲ್ಲಿ ಚುನಾವಣೆಯನ್ನು ನಿಷೇಧಿಸಿದ ಪರಿಣಾಮವಾಗಿ ಉಳ್ಳವರು ಹಾಗೂ ರಾಜಕೀಯ ಹಿನ್ನೆಲೆ ಇದ್ದವರು ರಾಜಕೀಯವನ್ನು ಉದ್ಯಮವನ್ನಾಗಿಸಿಕೊಂಡರು. ವಿಧಾನಸಭಾ ಕ್ಷೇತ್ರಗಳು ಕೆಲವೇ ಕುಟುಂಬಗಳ ಹಿಡಿತಕ್ಕೆ ಒಳಗಾದವು. ಸದ್ಯದ ಪರಿಸ್ಥಿತಿಯಲ್ಲಿ ವಿದ್ಯಾರ್ಥಿ ಜೀವನದ ರಾಜಕೀಯ ಅತ್ಯಗತ್ಯವಾಗಿದೆ. ಕಾಲೇಜುಗಳಲ್ಲಿ ಚುನಾವಣೆಗೆ ಇರುವ ನಿರ್ಬಂಧವನ್ನು ತೆರವುಗೊಳಿಸಬೇಕು. ಭ್ರಷ್ಟಮುಕ್ತ ನಾಡು ಕಟ್ಟಲು ಹೊಸ ಪ್ರತಿಭೆಗಳಿಗೆ ಅವಕಾಶ ಸಿಗಲಿ.

ಚಂದ್ರಶೇಖರ ಪುಟ್ಟಪ್ಪ, ಬೆಂಗಳೂರು

'ಶುಚಿ' ಯೋಜನೆ: ಗುಣಮಟ್ಟ ಕಾಯ್ದುಕೊಳ್ಳಿ

'ಶುಚಿ' ಯೋಜನೆಯಡಿ ಶಾಲಾ ಕಾಲೇಜು ವಿದ್ಯಾರ್ಥಿನಿಯರಿಗೆ ಸ್ಯಾನಿಟರಿ ನ್ಯಾಪ್‌ಕಿನ್ ನೀಡುವುದು ಸರಿ. ಆದರೆ ಕೆಲವೊಮ್ಮೆ ಈ ನ್ಯಾಪ್‌ಕಿನ್‌ಗಳ ಗುಣಮಟ್ಟ ಉತ್ತಮವಾಗಿ ಇರುವುದಿಲ್ಲ. ಇಂತಹ ಪ್ಯಾಡ್‌ಗಳನ್ನು ಬಳಸಿದರೆ ಹೆಣ್ಣು ಮಕ್ಕಳು ಅನಾರೋಗ್ಯಕ್ಕೆ ತುತ್ತಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಹೆಣ್ಣು ಮಕ್ಕಳ ಸುರಕ್ಷತೆಯನ್ನು ಗಮನದಲ್ಲಿ ಇಟ್ಟುಕೊಂಡು ಗುಣಮಟ್ಟದ ನ್ಯಾಪ್‌ಕಿನ್‌ಗಳನ್ನು ವಿತರಿಸಬೇಕು.

ಸಾವಿತ್ರಿ, ಹೊಸಪೇಟೆ

ಅಧಿಕಾರಕ್ಕೆ ಅಂಟಿಕೊಳ್ಳದ ಈ ಪರಿ

ನ್ಯೂಜಿಲೆಂಡ್ ಪ್ರಧಾನಿ ಜಸಿಂದಾ ಆರ್ಡೆರ್ನ್ ಅವರು ಹುದ್ದೆ ಬಯಸಿದ್ದನ್ನು ನೀಡುವ ಶಕ್ತಿ ತಮ್ಮಲ್ಲಿ ಖಾಲಿಯಾಗಿದೆ ಎಂದು ಹೇಳುತ್ತಾ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಲು ಮುಂದಾಗಿರುವುದು ಸೋಜಿಗವನ್ನುಂಟು ಮಾಡಿದೆ. ಕ್ಲಿಷ್ಟ ಸಂದರ್ಭದಲ್ಲಿ ತಮ್ಮ ದೇಶವನ್ನು ಸಮರ್ಥವಾಗಿ ಮುನ್ನಡೆಸಿದ ಕೀರ್ತಿ ಅವರಿಗೆ ಇದೆ. ಆದರೂ ಅವರು ಅಧಿಕಾರಕ್ಕೆ ವಿದಾಯ ಹೇಳುತ್ತಿದ್ದಾರೆ. ಪದ್ಮಪತ್ರದ ಮೇಲಿನ ಜಲಬಿಂದುವಿನಂತೆ ಅಧಿಕಾರಕ್ಕೆ ಅಂಟಿಕೊಳ್ಳದ ಪರಿ ಇದು. ಜಗತ್ತಿನ ಎಲ್ಲ ಅಧಿಕಾರಸ್ಥ ನೇತಾರರಿಗೆ ಇದೊಂದು ಮಾದರಿ ನಡವಳಿಕೆಯಾಗಿದೆ.

ಕೆಲವು ದೇಶಗಳಲ್ಲಿ ಸಂವಿಧಾನದ ವಿಧಿ ವಿಧಾನಗಳಿಗೆ ಅನುಗುಣವಾಗಿ ಅಧಿಕಾರದ ಅವಧಿ ನಿಗದಿಯಾಗಿದ್ದರೆ, ಇಂಥ ಯಾವುದೇ ನಿರ್ಬಂಧಗಳಿರದ ಕೆಲವು ದೇಶಗಳ ನೇತಾರರು ಹಲವಾರು ವಾಮಮಾರ್ಗಗಳ ಮೂಲಕ ಅಧಿಕಾರಕ್ಕೆ ಏರಲು ಮತ್ತು ಅಧಿಕಾರದಲ್ಲಿ ಉಳಿಯಲು ಯತ್ನಿಸುತ್ತಿರುವುದನ್ನು ನಾವು ನೋಡುತ್ತೇವೆ. ಇನ್ನು ನಮ್ಮ ದೇಶದಲ್ಲಂತೂ ರಾಜಕೀಯ ನೇತಾರರು ಎಷ್ಟೇ ವಯಸ್ಸಾಗಲಿ, ತಮಗೆ ಅಗತ್ಯ ಸಾಮರ್ಥ್ಯ, ಶಕ್ತಿ ಇರಲಿ ಬಿಡಲಿ, ಸಲ್ಲದ ಮಾರ್ಗಗಳ ಮೂಲಕ ಅಧಿಕಾರಕ್ಕೆ ಏರಲು ಮತ್ತು ಅಧಿಕಾರಕ್ಕೆ ಅಂಟಿಕೊಂಡಿರಲು ಯತ್ನಿಸುವುದು ಹೇವರಿಕೆ ಹುಟ್ಟಿಸುತ್ತದೆ. ಹಿಂದೆ ನೈತಿಕ ಹೊಣೆ ಹೊತ್ತು ಅಥವಾ ವಯಸ್ಸಿನ ಕಾರಣದಿಂದ ರಾಜಕೀಯದಿಂದ ನಿವೃತ್ತಿ ಹೊಂದಿದ ಕೆಲವು ಅಪರೂಪದ ರಾಜಕಾರಣಿಗಳು ಇದ್ದರು. ಆದರೆ ಆ ಸಂತತಿ ಇಂದು ಉಳಿದಿಲ್ಲ. ಇಂದು ಹಲವರಿಗೆ ಅನೈತಿಕತೆಯೇ ದೈನಂದಿನ ರಾಜಕೀಯ ಮಾರ್ಗವಾಗಿರುವಾಗ ಮತ್ತು ಅಧಿಕಾರದ ಗದ್ದುಗೆಗೆ ಏರುವುದೇ ಸರ್ವಸ್ವ ಆಗಿರುವಾಗ ನ್ಯೂಜಿಲೆಂಡ್ ಪ್ರಧಾನಿಯವರ ನಡೆ ಎಂದಾದರೂ ನಮ್ಮ ರಾಜಕೀಯ ಪ್ರಭುಗಳಿಗೆ ಮಾದರಿಯಾಗಬಲ್ಲದೇ?

ವೆಂಕಟೇಶ ಮಾಚಕನೂರ, ಧಾರವಾಡ

ಸುರಿಮಳೆ

ಉಚಿತ ಕೊಡುಗೆಗಳ
ಮಳೆಯನ್ನೇ ಸುರಿಸುತ್ತಿದ್ದಾರೆ
ನಮ್ಮ ಹಾಲಿ ಮಾಜಿ ಭಾವಿ ನಾಯಕರು
ಕಣ್ಣು ಕಿವಿ ಮುಚ್ಚಿಕೊಂಡು
ಬಲಿಯಾಗದಿರಲಿ
ಮತ ನೀಡುವ ಅಮಾಯಕರು!

ಮಹಾಂತೇಶ ಮಾಗನೂರ
ಬೆಂಗಳೂರು

ವಿರೋಧ ಪಕ್ಷವನ್ನು ಮರೆತರೇಕೆ?

ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡುವ ಸುಪ್ರೀಂ ಕೋರ್ಟ್‌ನ ಕೊಲಿಜಿಯಂನಲ್ಲಿ ಕೇಂದ್ರ ಸರ್ಕಾರದ ಪ್ರತಿನಿಧಿಯೂ ಇರಬೇಕೆಂದು ಕೇಂದ್ರ ಸಚಿವ ಕಿರಣ್ ರಿಜಿಜು ಹೇಳಿದ್ದಾರೆ. ಕೊಲಿಜಿಯಂನಲ್ಲಿ ಆಡಳಿತ ನಡೆಸುವವರು ಇದ್ದರೆ, ಪ್ರತಿಪಕ್ಷದ ಪ್ರತಿನಿಧಿ ಕೂಡಾ ಇರಬೇಕಲ್ಲವೇ? ಇದು ಪ್ರಜಾಪ್ರಭುತ್ವಕ್ಕೆ ಪೂರಕವಲ್ಲವೇ?

ಕೆ.ಎನ್.ಭಗವಾನ್, ಬೆಂಗಳೂರು

ಕಾನೂನು ಗೌರವಿಸುವ ಮಾದರಿ ನಡೆ

ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಸೀಟ್ ಬೆಲ್ಟ್ ತೆಗೆದ ಕಾರಣಕ್ಕೆ ಅಲ್ಲಿನ ಪೊಲೀಸರು ದಂಡ ವಿಧಿಸಿ ನೋಟಿಸ್ ಜಾರಿ ಮಾಡಿರುವುದು ವರದಿಯಾಗಿದೆ (ಪ್ರ. ವಾ., ಜ. 22). ಕಾನೂನನ್ನು ಎಲ್ಲರಿಗೂ ಅನ್ವಯಿಸಿ ನಿರ್ಭಯದಿಂದ ಕಾರ್ಯ ನಿರ್ವಹಿಸುವ ಸ್ವಾತಂತ್ರ್ಯ ಬ್ರಿಟನ್ ದೇಶದ ಪೊಲೀಸ್ ಅಧಿಕಾರಿಗಳಿಗೆ ಇರುವಂತೆ, ನಮ್ಮ ದೇಶದಲ್ಲಿ ಇಂತಹ ಕಠಿಣ ಕಾನೂನು ಗೌರವಿಸುವ ಪರಿಪಾಟ ಬರಲು ಇನ್ನೂ ಎಷ್ಟು ಶತಮಾನಗಳು ಬೇಕಾಗಬಹುದೋ? ಕಾನೂನುಗಳನ್ನು ಮುರಿಯುವುದೇ ಒಂದು ದೊಡ್ಡ ಸಾಹಸವೆಂಬಂತೆ ಅಥವಾ ದಂಡಕ್ಕೆ ಬದಲಾಗಿ ವಶೀಲಿಗೆ ಒಗ್ಗಿ ಹೋಗಿರುವ ನಮ್ಮ ದೇಶದಲ್ಲಿ ಕಾನೂನುಗಳು ನಾಮಕಾವಸ್ತೆ ಆಗಿ ಪರಿಣಮಿಸಿವೆ. ಪ್ರಧಾನಿಯೊಬ್ಬರಿಗೆ ದಂಡ ವಿಧಿಸುವಂಥ ಕಾನೂನು ಕ್ರಮ ಜರುಗಿಸಿರುವ ಬ್ರಿಟನ್ ಪೊಲೀಸರ ಕಾರ್ಯ ಶ್ಲಾಘನೀಯ ಮತ್ತು ಅನುಕರಣೀಯ.

ಡಿ.ಪ್ರಸನ್ನಕುಮಾರ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಲೈಂಗಿಕ ದೌರ್ಜನ್ಯದ ವಿರುದ್ಧ 'ಕುಸ್ತಿ'

ಲೈಂಗಿಕ ಶೋಷಣೆ ಎಲ್ಲ ಕ್ಷೇತ್ರಗಳಲ್ಲಿಯೂ ನಡೆಯುತ್ತಿವೆ. ಸಿನಿಮಾ ರಂಗದಲ್ಲಿ ಕಾಸ್ಟಿಂಗ್ ಕೌಚ್ ನಡೆದರೆ, ಮಠಾಧೀಶರೊಬ್ಬರು ವಿದ್ಯಾರ್ಥಿನಿಯರ ಮೇಲೆ ದೌರ್ಜನ್ಯ ಎಸಗಿದ ಆರೋಪದಲ್ಲಿ ಇತ್ತೀಚೆಗೆ ಜೈಲು ಸೇರಿದ್ದಾರೆ. ಇದು ಕ್ರೀಡಾ ಕ್ಷೇತ್ರವನ್ನೂ ಬಿಟ್ಟಿಲ್ಲ. ಅದರ ವಿರುದ್ಧ ಖ್ಯಾತನಾಮ ಕುಸ್ತಿಪಟುಗಳು ತೊಡೆತಟ್ಟಿದ್ದಾರೆ

• ಗಿರೀಶ ದೊಡ್ಡಮನಿ

ಸಾಕ್ಷಿ ಮಲಿಕ್, ವಿನೇಶಾ ಪೋಗಟ್ ಮತ್ತು ಬಜರಂಗ್ ಪೂನಿಯಾ ಅವರು ಕುಸ್ತಿ ಅಖಾಡದಲ್ಲಿ ಪದಕ ಗೆದ್ದು ಆನಂದಭಾಷ್ಪ ಸುರಿಸಿದ್ದನ್ನು ಭಾರತದ ಕುಸ್ತಿಪ್ರಿಯರು ಹಲವು ಬಾರಿ ನೋಡಿದ್ದಾರೆ.

ಆದರೆ ಕಳೆದ ಮೂರ್ನಾಲ್ಕು ದಿನಗಳಿಂದ ಈ ಕುಸ್ತಿಪಟುಗಳು ಬೇರೆಯದೇ ಕಾರಣಕ್ಕೆ ಕಣ್ಣೀರಿಟ್ಟಿದ್ದಾರೆ. ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಕುರಿತು ಆಘಾತಕಾರಿ ವಿಷಯಗಳನ್ನು ಬಹಿರಂಗಪಡಿಸಿದ್ದಾರೆ. ಫೆಡರೇಷನ್‌ನಲ್ಲಿ ಅಧ್ಯಕ್ಷರು ಮತ್ತು ಕೆಲವು ತರಬೇತುದಾರರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗುತ್ತಿದ್ದಾರೆಂದು ವಿನೇಶಾ ಮತ್ತು ಕೆಲವು ಮಹಿಳಾಪಟುಗಳು ಆರೋಪಿಸಿದ್ದಾರೆ. ಸರ್ವಾಧಿಕಾರಿ ಧೋರಣೆಯಿಂದ ಪ್ರತಿಭೆಗಳನ್ನು ತುಳಿಯುತ್ತಿದ್ದಾರೆ ಎಂದೂ ಬಜರಂಗ್ ಪೂನಿಯಾ ಸೇರಿ ಹಲವರು ದೂರಿದ್ದಾರೆ.

ನವದೆಹಲಿಯ ಜಂತರ್ ಮಂಥರ್‌ನಲ್ಲಿ ಕೊರೆಯುವ ಚಳಿಯನ್ನೂ ಲೆಕ್ಕಿಸದೇ ಮೂರು ದಿವಸ ಧರಣಿ ನಡೆಸಿದ ಈ ಕುಸ್ತಿಪಟುಗಳಿಗೆ ಕೊನೆಗೂ ಮಣಿದ ಕೇಂದ್ರ ಕ್ರೀಡಾ ಇಲಾಖೆಯು ತನಿಖಾ ಸಮಿತಿ ರಚಿಸಲು ಮುಂದಾಗಿದೆ. ಬ್ರಿಜ್‌ಭೂಷಣ್ ಅವರನ್ನು ತಾತ್ಕಾಲಿಕವಾಗಿ ಪದಚ್ಯುತಗೊಳಿಸಲಾಗಿದೆ. ಕುಸ್ತಿಪಟುಗಳು ಧರಣಿ ಹಿಂತೆಗೆದುಕೊಂಡಿದ್ದಾರೆ. ಆದರೆ ಈ ಪ್ರಕರಣವು ತಾರ್ಕಿಕ ಅಂತ್ಯ ಕಾಣುವುದೇ ಅಥವಾ ಈ ಹಿಂದೆ ಬೇರೆ ಕ್ರೀಡೆಗಳಲ್ಲಿ ಇತ್ಯರ್ಥವಾಗದೇ ಉಳಿದ ಲೈಂಗಿಕ ಕಿರುಕುಳ ಪ್ರಕರಣಗಳ ಸಾಲಿಗೆ ಸೇರುವುದೇ ಎಂಬ ಅನುಮಾನವೂ ಮೂಡಿದೆ.

ಈ ಪ್ರಕರಣದಲ್ಲಿ ಬೀದಿಗಿಳಿದು ಆರೋಪ ಮಾಡಿದವರು ಸಾಮಾನ್ಯರಲ್ಲ. ಕಾಮನ್‌ವೆಲ್ತ್ ಕ್ರೀಡಾಕೂಟದ ಪದಕವಿಜೇತರಾದ ವಿನೇಶಾ ಪೋಗಟ್, ರಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತೆ ಸಾಕ್ಷಿ ಮಲಿಕ್, ಟೋಕಿಯೊ ಒಲಿಂಪಿಕ್ಸ್ ಪದಕವಿಜೇತರಾದ ಬಜರಂಗ್ ಪೂನಿಯಾ, ರವಿ ದಹಿಯಾ, ಮಹಿಳಾ ಕುಸ್ತಿಪಟುಗಳಾದ ಬಬಿತಾ ಪೋಗಟ್, ಅನ್ಶು ಮಲಿಕ್ ಸೇರಿದಂತೆ ಸುಮಾರು 200 ಕುಸ್ತಿಪಟುಗಳು. ಇದು ಇಡೀ ವಿಶ್ವದ ಮಾಧ್ಯಮಗಳ ಗಮನ ಸೆಳೆಯಿತು. ದೇಶದ ಗೌರವಕ್ಕೆ ಧಕ್ಕೆಯಾಯಿತು ಎಂದು ಗೊತ್ತಿದ್ದರೂ ಕೇಂದ್ರ ಕ್ರೀಡಾ ಇಲಾಖೆ ತಕ್ಷಣ ಯಾಕೆ ಕ್ರಮಕ್ಕೆ ಮುಂದಾಗಲಿಲ್ಲ? 'ನಮ್ಮನ್ನು ನಂಬಿ. ನಾವು ಸುಳ್ಳು ಹೇಳುತ್ತಿಲ್ಲ. ನಮ್ಮ ಬಳಿ ಎಲ್ಲ ಸಾಕ್ಷ್ಯಾಧಾರಗಳಿವೆ' ಎಂದು ವಿನೇಶಾ ಮತ್ತಿತರರು ಕೂಗಿ ಹೇಳಿದರೂ ತಕ್ಷಣಕ್ಕೆ ಯಾವುದೇ ಕ್ರಮ ಜರುಗಲಿಲ್ಲ. ಬದಲಿಗೆ ಪ್ರತಿಭಟನೆ ವಾಪಸ್ ಪಡೆಯುವಂತೆ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಕುಸ್ತಿಪಟುಗಳ ಮನವೊಲಿಸಲು ಹೆಚ್ಚು ಶ್ರಮಪಟ್ಟರು. ಪಿ.ಟಿ. ಉಷಾ ನೇತೃತ್ವದ ಭಾರತ ಒಲಿಂಪಿಕ್ ಸಂಸ್ಥೆಯು ಏಳು ಜನರ ತನಿಖಾ ಸಮಿತಿಯನ್ನು ಈಗಾಗಲೇ ರಚಿಸಿದೆ. ಹಾಗಿದ್ದರೂ ಕ್ರೀಡಾ ಇಲಾಖೆಯು ಮತ್ತೊಂದು ಸಮಿತಿ ರಚನೆಗೆ ಮುಂದಾಗಿದೆ.

ಪ್ರಭಾವಿ ಸಂಸದ: ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರು ಉತ್ತರಪ್ರದೇಶದವರು. ಆಡಳಿತಾರೂಢ ಭಾರತೀಯ ಜನತಾ ಪಕ್ಷದ ಸಂಸದರೂ ಹೌದು. ಒಟ್ಟು ಆರು ಸಲ ಸಂಸದರಾಗಿದ್ದಾರೆ. ಕೆಲವು ವರ್ಷಗಳ ಹಿಂದೆ ಟಾಡಾ ಕಾಯ್ದೆಯಡಿ ಬಂಧನಕ್ಕೂ ಒಳಗಾಗಿದ್ದರು.


ಬ್ರಿಜ್‌ಭೂಷಣ್

> **ಕುಸ್ತಿ ಕ್ಷೇತ್ರದಲ್ಲಿ ಲೈಂಗಿಕ ಶೋಷಣೆಯ ಬಿಸಿ ನನಗೂ ತಟ್ಟಿದೆ. ಆ ಕಾರಣಕ್ಕಾಗಿಯೇ ನಾನು ಕುಸ್ತಿ ಬಿಟ್ಟು ಡಬ್ಲ್ಯುಡಬ್ಲ್ಯುಇ ಸ್ಪರ್ಧೆಗಳಿಗೆ ಸೇರಿಕೊಂಡೆ. ಅಧಿಕಾರಶಾಹಿಯು ಕ್ರೀಡಾಪಟುಗಳನ್ನು ಅನಿವಾರ್ಯಕ್ಕೆ ತಳ್ಳಿ ದುರ್ಲಾಭ ಪಡೆಯುವಲ್ಲಿ ನಿಷ್ಣಾತವಾಗಿದೆ.**
> **ಕವಿತಾ ದೇವಿ,** ಡಬ್ಲ್ಯುಡಬ್ಲ್ಯುಇ ಸ್ಪರ್ಧಿ

ತತ್‌ಕ್ಷಣ ಕ್ರಮ ಜರುಗಿಸಿದರೆ ಸರ್ಕಾರ ಮತ್ತು ಪಕ್ಷದ ವರ್ಚಸ್ಸು ಕುಂದಬಹುದು ಎಂಬ ಆತಂಕವಿದೆ ಎಂಬ ಮಾತುಗಳೂ ಕೇಳಿಬಂದವು. ಆದರೆ, 'ರಾಷ್ಟ್ರೀಯತೆ' ಮತ್ತು 'ಯುವಶಕ್ತಿಯಿಂದಲೇ ಅಭಿವೃದ್ಧಿ' ಎಂಬುದಕ್ಕೆ ಒತ್ತು ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ಆದರೆ, ಬ್ರಿಜ್‌ಭೂಷಣ್ ಅವರು ಪ್ರಭಾವಿಯಾಗಿರುವ ಕಾರಣ ಅವರ ವಿರುದ್ಧ ಕ್ರಮ ಕೈಗೊಳ್ಳಲು ಹಿಂದೇಟು ಹಾಕಲಾಯಿತು ಎಂಬ ಆರೋಪವೂ ಇದೆ. ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಹಲವು ಕುಸ್ತಿಪಟುಗಳು ಬಿಜೆಪಿಯೊಂದಿಗೆ ಗುರುತಿಸಿಕೊಂಡವರು.

ಹಿನ್ನಡೆಯ ಆತಂಕ?: ಒಲಿಂಪಿಕ್ ಕೂಟದ ಇತಿಹಾಸದ ಪುಟಗಳನ್ನು ತೆಗೆದು ನೋಡಿದರೆ ಭಾರತಕ್ಕೆ ಹಾಕಿ ಕ್ರೀಡೆ ಬಿಟ್ಟರೆ ಅತಿ ಹೆಚ್ಚು ಪದಕಗಳನ್ನು ಗೆದ್ದುಕೊಟ್ಟ ಶ್ರೇಯ ಕುಸ್ತಿಪಟುಗಳಿಗೇ ಸಲ್ಲಬೇಕು. ಎರಡು ಬೆಳ್ಳಿ ಮತ್ತು ಐದು ಕಂಚಿನ ಪದಕಗಳನ್ನು ಗೆದ್ದಿದ್ದಾರೆ. ಇದರಲ್ಲಿ ಮಹಿಳೆಯರ ವಿಭಾಗದಲ್ಲಿರುವುದು ಒಂದು ಕಂಚು ಮಾತ್ರ.

ಹರಿಯಾಣದಲ್ಲಿ ಮಹಿಳೆಯರ ಮೇಲಿದ್ದ ಅತ್ಯಂತ ಕಠಿಣ ಕಟ್ಟುಪಾಡುಗಳಿಗೆ ಸೆಡ್ಡು ಹೊಡೆದು ನಿಂತ ಪೋಗಟ್ ಕುಟುಂಬದ ಕುಡಿಗಳಾದ ಗೀತಾ, ಬಬಿತಾ, ವಿನೇಶಾ, ಸಂಗೀತಾ ಅವರು ದಂತಕಥೆಯೇ ಆಗಿದ್ದಾರೆ. ಹಲವು ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಪದಕ ಸಾಧನೆ ಮಾಡಿದ್ದಾರೆ. ಅವರ ಯಶೋಗಾಥೆಯಿಂದ ಪ್ರಭಾವಿತರಾದ ದೇಶದ ಮೂಲೆಮೂಲೆಯಲ್ಲಿರುವ ಹೆಣ್ಣುಮಕ್ಕಳು ಕುಸ್ತಿ ಕ್ರೀಡೆಯತ್ತ ಆಕರ್ಷಿತರಾಗುತ್ತಿದ್ದಾರೆ. ಬಡ ಕುಟುಂಬಗಳ ಗ್ರಾಮೀಣ ಪ್ರತಿಭೆಗಳ ಸಂಖ್ಯೆಯೇ ಇಲ್ಲಿ ಹೆಚ್ಚು.

'ಕಳೆದ ಹತ್ತು ವರ್ಷಗಳಿಂದ ರಾಷ್ಟ್ರೀಯ ತರಬೇತಿ ಶಿಬಿರದಲ್ಲಿ ಲೈಂಗಿಕ ಶೋಷಣೆಗೊಳಗಾಗಿರುವ 10–20 ಹುಡುಗಿಯರು ನನಗೆ ಗೊತ್ತಿದ್ದಾರೆ. ಆದರೆ ತಮ್ಮ ಮೇಲಾಗುತ್ತಿರುವ ದೌರ್ಜನ್ಯದ ವಿರುದ್ಧ ದನಿಯೆತ್ತುವಷ್ಟು ಶಕ್ತಿ ಈ ಮಕ್ಕಳಿಗೆ ಇರುವುದಿಲ್ಲ. ಲಖನೌನಲ್ಲಿ ನಡೆದ ರಾಷ್ಟ್ರೀಯ ತರಬೇತಿ ಶಿಬಿರಗಳಲ್ಲಿ ಕೆಲವು ಕೋಚ್‌ಗಳೂ ಮಹಿಳಾ ಪಟುಗಳನ್ನು ಲೈಂಗಿಕವಾಗಿ ಶೋಷಣೆ ಮಾಡಿದ್ದಾರೆ' ಎಂದೂ ವಿನೇಶಾ ಆರೋಪಿಸಿದ್ದಾರೆ. ಇದನ್ನು ಹಗುರವಾಗಿ ಪರಿಗಣಿಸುವಂತಿಲ್ಲ.

ಈ ಪ್ರಕರಣದಲ್ಲಿ ಪಾರದರ್ಶಕವಾದ ತನಿಖೆ ಅತ್ಯಂತ ಅವಶ್ಯಕ. ಏಕೆಂದರೆ, ಬೇರೆ ಪ್ರಕರಣಗಳಂತೆ ಇದು ಕೂಡ ಮೂಲೆಗುಂಪಾದರೆ ದೇಶದ ಕುಸ್ತಿ ಕ್ರೀಡೆಯು ಮಣ್ಣುಮುಕ್ಕುವ ಅಪಾಯವಿದೆ. ಹೆಣ್ಣುಮಕ್ಕಳು ಕ್ರೀಡೆಯಿಂದ ವಿಮುಖರಾಗುವ ಸಾಧ್ಯತೆಯನ್ನೂ ಅಲ್ಲಗಳೆಯಲಾಗದು. ವಿಶ್ವಾಸಾರ್ಹತೆ, ಸುರಕ್ಷತೆ ಮತ್ತು ಜೀವನಭದ್ರತೆ ನೀಡದ ಯಾವ ಕ್ರೀಡೆಯೂ ವೃತ್ತಿಪರವಾಗಲು ಸಾಧ್ಯವಿಲ್ಲ. ವೃತ್ತಿಪರವಾಗದ ಕ್ರೀಡೆ ಬೆಳೆಯಲು ಸಾಧ್ಯವಿಲ್ಲ. ಈ ಪ್ರಕರಣ ಕುಸ್ತಿಗೆ ಮಾತ್ರ ಸೀಮಿತವಲ್ಲ. ಭಾರತದ ಇಡೀ ಕ್ರೀಡಾಕ್ಷೇತ್ರದ ವಿಶ್ವಾಸಾರ್ಹತೆಯ ಪ್ರಶ್ನೆಯಾಗಿದೆ.




ನವದೆಹಲಿಯ ಜಂತರ್ ಮಂಥರ್‌ನಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಮತ್ತು ವಿನೇಶಾ ಪೋಗಟ್ —ಪಿಟಿಐ ಚಿತ್ರ

ಏನು ಹೇಳುತ್ತದೆ ಕ್ರೀಡಾ ನೀತಿ?

• ಬಸವರಾಜ ದಳವಾಯಿ

ಕ್ರೀಡಾ ಕ್ಷೇತ್ರದಲ್ಲಿ ಮಹಿಳೆಯರು ಹಲವು ದಶಕಗಳಿಂದ ಲೈಂಗಿಕ ಶೋಷಣೆ ಎದುರಿಸುತ್ತಿದ್ದಾರೆ. ಇಂತಹ ದೌರ್ಜನ್ಯಗಳ ತಡೆ ಕುರಿತು ಕೇಂದ್ರ ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ 2011ರಲ್ಲಿ ರೂಪಿಸಿರುವ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ನೀತಿ ಹೀಗೆ ಹೇಳುತ್ತದೆ.

- ಮಹಿಳಾ ಕ್ರೀಡಾಪಟುಗಳ ಸುರಕ್ಷತೆ ಮತ್ತು ದೌರ್ಜನ್ಯ ತಡೆಗೆ ಕ್ರಮಗಳನ್ನು ತೆಗೆದುಕೊಳ್ಳುವುದು ರಾಷ್ಟ್ರೀಯ ಕ್ರೀಡಾ ಫೆಡರೇಷನ್‌ಗಳು (ಎನ್‌ಎಸ್‌ಎಫ್), ಭಾರತ ಒಲಿಂಪಿಕ್ಸ್ ಸಂಸ್ಥೆ ಮತ್ತು ಇತರ ಕ್ರೀಡಾ ಸಂಸ್ಥೆಗಳ ಜವಾಬ್ದಾರಿಯಾಗಿದೆ
- ಎನ್‌ಎಸ್‌ಎಫ್‌ಗಳು ತಾವು ರೂಪಿಸುವ ಕಾಯ್ದೆ ಅಥವಾ ನಿಯಮಗಳಲ್ಲಿ ಲೈಂಗಿಕ ದೌರ್ಜನ್ಯ ತಡೆ ನಿಯಮಗಳನ್ನೂ ಸೇರಿಸಬೇಕು. ನಿಯಮಗಳನ್ನು ಉಲ್ಲಂಘಿಸಿದವರಿಗೆ ತಕ್ಕ ದಂಡನೆ ವಿಧಿಸಬೇಕು
- ಆರೋಗ್ಯ, ನೈರ್ಮಲ್ಯದ ಕುರಿತು ಮಹಿಳಾ ಕ್ರೀಡಾಪಟುಗಳಿಗೆ ಯಾವುದೇ ಪ್ರತಿಕೂಲ ವಾತಾವರಣವಿಲ್ಲ ಎಂಬುದನ್ನು ಖಚಿತಪಡಿಸಬೇಕು
- ತಮ್ಮ ಮೇಲಾಗುತ್ತಿರುವ ಲೈಂಗಿಕ ಕಿರುಕುಳದ ಬಗ್ಗೆ ದೂರು ನೀಡಲು ಮಹಿಳೆಯರಿಗೆ ಮುಕ್ತ ವಾತಾವರಣ ರೂಪಿಸಬೇಕು. ಅದಕ್ಕಾಗಿ ಸೂಕ್ತ ವೇದಿಕೆ ಹಾಗೂ ಅವಕಾಶ ಕಲ್ಪಿಸಬೇಕು
- ಸಂತ್ರಸ್ತೆ ನೀಡಿದ ದೂರು ಕುರಿತು ಕ್ರಮ ಕೈಗೊಳ್ಳಲು ಎನ್‌ಎಸ್‌ಎಫ್‌ಗಳು ದೂರು ಪರಿಹಾರ ವ್ಯವಸ್ಥೆ ರೂಪಿಸಬೇಕು. ಸಮಯಮಿತಿಯಲ್ಲಿ ಪರಿಹಾರ ಕಂಡುಕೊಳ್ಳಬೇಕು. ಆರೋಪಿಯ ನಡವಳಿಕೆಯು ದುಷ್ಕೃತ್ಯಕ್ಕೆ ಸಮಾನ ಎಂದು ಕಂಡುಬಂದರೆ ನಿಯಮಗಳನುಸಾರ ಶಿಸ್ತು ಕ್ರಮ ಕೈಗೊಳ್ಳಬೇಕು
- **ಕ್ರಿಮಿನಲ್ ಮೊಕದ್ದಮೆ:** ಭಾರತೀಯ ದಂಡಸಂಹಿತೆಯ ಪ್ರಕಾರ ಅಥವಾ ಇತರ ಯಾವುದೇ ಕಾನೂನಿನಡಿ ಆರೋಪಿಯ ಕೃತ್ಯವು ನಿರ್ದಿಷ್ಟ ಅಪರಾಧಕ್ಕೆ ಸಮಾನವಾದಾಗ ಎನ್‌ಎಸ್‌ಎಫ್‌ಗಳು ಸಂಬಂಧಿಸಿದ ಪ್ರಾಧಿಕಾರದಲ್ಲಿ ದೂರು ನೀಡಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಈ ಹಂತದಲ್ಲಿ ಸಂತ್ರಸ್ತರಿಗೆ ಅನ್ಯಾಯ ಅಥವಾ ತಾರತಮ್ಯ ಆಗುತ್ತಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು
- **ಸಮಿತಿ ರಚನೆ:** ಸಂತ್ರಸ್ತ ಕ್ರೀಡಾಪಟುವಿನ ದೂರು ಕುರಿತು ಕ್ರಮ ಕೈಗೊಳ್ಳಲು ಸಮಿತಿಯ ಅಗತ್ಯವಿದೆ ಎಂದಾದರೆ, ಸಮಿತಿ ರಚಿಸಬೇಕು. ವಿಶೇಷ ಸಮಾಲೋಚಕರನ್ನು ನೇಮಿಸಬೇಕು, ಗೋಪ್ಯತೆ ಕಾಯ್ದುಕೊಳ್ಳಬೇಕು ಮತ್ತು ಇತರ ನೆರವು ಒದಗಿಸಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು. ಸಮಿತಿಗೆ ಮಹಿಳೆಯ ನೇತೃತ್ವ ಇರಬೇಕು. ಅಲ್ಲದೆ ಅರ್ಧದಷ್ಟು ಸದಸ್ಯರು ಮಹಿಳೆಯರಾಗಿರಬೇಕು. ಇದಲ್ಲದೆ, ಯಾವುದೇ ಅನಗತ್ಯ ಒತ್ತಡ ಅಥವಾ ಪ್ರಭಾವದ ಸಾಧ್ಯತೆಯನ್ನು ತಡೆಗಟ್ಟಲು, ಅಂತಹ ದೂರುಗಳ ಸಮಿತಿಯು ಲೈಂಗಿಕ ಕಿರುಕುಳದ ವಿಷಯದ ಬಗ್ಗೆ ಪರಿಣತಿ ಹೊಂದಿರುವ ಎನ್‌ಜಿಒ ಅಥವಾ ಇತರ ಸಂಸ್ಥೆಯನ್ನು ಒಳಗೊಂಡಿರಬೇಕು.


ಕ್ರೀಡಾ ಸಚಿವ ಅನುರಾಗ್ ಠಾಕೂರ್

'ಇದು ರಾಜಕೀಯಪ್ರೇರಿತ, ದುರುದ್ದೇಶದ ಧರಣಿ'

ಕುಸ್ತಿಪಟುಗಳು ಮಾಡಿದ ಆರೋಪಗಳೆಲ್ಲವೂ ಸತ್ಯಕ್ಕೆ ದೂರವಾಗಿವೆ. ಮುಂದಿನ ತಿಂಗಳು ಡಬ್ಲ್ಯುಎಫ್‌ಐ ಚುನಾವಣೆ ನಡೆಯಲಿದೆ. ಅದರಲ್ಲಿ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರಿಗೆ ಹಿನ್ನಡೆಯುಂಟು ಮಾಡುವ ಹುನ್ನಾರ ಇದು. ಪ್ರತಿಭಟನೆಯ ಮುಂಚೂಣಿಯಲ್ಲಿದ್ದ ಕುಸ್ತಿಪಟುಗಳು ಅಂತರರಾಷ್ಟ್ರೀಯ ಪದಕವಿಜೇತರು. ಪ್ರಧಾನಿಯವರಿಗೆ ನಿಕಟವಾಗಿದ್ದಾರೆ. ಆದರೂ ಪ್ರಧಾನಿಯವರಿಗೇಕೆ ದೂರು ನೀಡಿಲ್ಲ? ತಮ್ಮ ತವರು ರಾಜ್ಯದ ಕುಸ್ತಿ ಸಂಸ್ಥೆಗಾದರೂ ದೂರು ಕೊಟ್ಟಿಲ್ಲವೇಕೆ?

ಬ್ರಿಜ್ ಭೂಷಣ್ ಅಧ್ಯಕ್ಷರಾದ ನಂತರ ಜಾರಿಗೊಳಿಸಿರುವ ಕೆಲವು ನಿಯಮಗಳ ಬಗ್ಗೆ ಈ ಕುಸ್ತಿಪಟುಗಳಿಗೆ ತಕರಾರು ಇದೆ. ಅಂತರರಾಷ್ಟ್ರೀಯ ಪದಕವಿಜೇತರಿಗೆ ನಂತರದ ವರ್ಷ ರಾಷ್ಟ್ರೀಯ ಶಿಬಿರಕ್ಕೆ ನೇರಪ್ರವೇಶ ಇತ್ತು. ಆದರೆ ಹೊಸ ನಿಯಮದಲ್ಲಿ ರಾಷ್ಟ್ರೀಯ ಚಾಂಪಿಯನ್‌ಷಿಪ್ ಮತ್ತು ಟ್ರಯಲ್ಸ್‌ನಲ್ಲಿ ಸ್ಪರ್ಧಿಸುವುದು ಕಡ್ಡಾಯ. ಒಬ್ಬ ಕುಸ್ತಿಪಟು ಒಂದು ರಾಜ್ಯವನ್ನು ಮಾತ್ರ ಪ್ರತಿನಿಧಿಸಬೇಕು ಎಂಬ ನಿಯಮದಿಂದ ನಕಲಿ ಪ್ರಮಾಣಪತ್ರಗಳನ್ನು ನೀಡಿ ಅಕ್ಕಪಕ್ಕದ ರಾಜ್ಯಗಳಿಂದಲೂ ಭಾಗವಹಿಸುವ ಚಾಳಿ ನಿಂತಿದೆ. ಇದರಿಂದಾಗಿ ದೇಶದ ಎಲ್ಲ ರಾಜ್ಯದವರಿಗೂ ಸಮಾನ ಅವಕಾಶ ಕಲ್ಪಿಸಲಾಗಿದೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ್ದವರೆಲ್ಲರೂ ಹರಿಯಾಣದವರು ಮತ್ತು ಮುಂದಾಳತ್ವ ವಹಿಸಿದ್ದವರು ಒಂದೇ ಕುಟುಂಬದವರು. ಆದರೆ ಅದೇ ರಾಜ್ಯದ ಕುಸ್ತಿಪಟು ಯೋಗೇಶ್ವರ್ ದತ್ ತಟಸ್ಥವಾಗಿದ್ದಾರೆ. ಪ್ರಕರಣದ ತನಿಖೆ ಪಾರದರ್ಶಕವಾಗಿ ನಡೆದು ಸತ್ಯಾಂಶ ಹೊರಬರಲಿದೆ ಎಂಬ ಭರವಸೆ ನಮಗಿದೆ.

ವಿನೋದ್‌ಕುಮಾರ್ ಕೆ.
ಜಂಟಿ ಕಾರ್ಯದರ್ಶಿ, ಕರ್ನಾಟಕ ಕುಸ್ತಿ ಸಂಸ್ಥೆ

'ಹೆಬ್ಬಕಗಳ ಸಂಖ್ಯೆ 150ಕ್ಕಿಂತ ಕಡಿಮೆ'

ದೇಶದಲ್ಲಿ ಹೆಬ್ಬಕಗಳ (ಗ್ರೇಟ್ ಇಂಡಿಯನ್ ಬಸ್ಟರ್ಡ್) ಸಂಖ್ಯೆ 150ಕ್ಕಿಂತ ಕಡಿಮೆ ಮತ್ತು ಕರಿ ನವಿಲುಗಳ ಸಂಖ್ಯೆ 700ಕ್ಕಿಂತ ಕಡಿಮೆ ಇದೆ. ಸರ್ಕಾರವು ಈಗಲೇ ಎಚ್ಚೆತ್ತುಕೊಳ್ಳದಿದ್ದರೆ, ಎರಡೂ ಪ್ರಭೇದದ ಪಕ್ಷಿಗಳು ನಾಮಾವಶೇಷವಾಗಲಿವೆ ಎಂದು 'ದಿ ಕಾರ್ಬೆಟ್ ಫೌಂಡೇಷನ್' ತನ್ನ ವಾರ್ಷಿಕ ವರದಿಯಲ್ಲಿ ಹೇಳಿದೆ. ಈ ಪಕ್ಷಿಗಳ ಅವಸಾನಕ್ಕೆ ಕಾರಣವಾಗುತ್ತಿರುವ ಅಂಶಗಳು ಮತ್ತು ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳನ್ನು ಪ್ರತಿಷ್ಠಾನವು ತನ್ನ ವಾರ್ಷಿಕ ವರದಿಯಲ್ಲಿ ಉಲ್ಲೇಖಿಸಿದೆ


ಹೆಬ್ಬಕ

ಕಾರಣಗಳು

ಗುಜರಾತಿನ ಕಛ್ ಮತ್ತು ರಾಜಸ್ಥಾನದ ಕೆಲವು ಪ್ರದೇಶಗಳನ್ನು ಹೆಬ್ಬಕ ಮತ್ತು ಕರಿ ನವಿಲುಗಳ ಆವಾಸ ಸ್ಥಾನ ಎಂದು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿ ಬೃಹತ್ ಪ್ರಮಾಣದಲ್ಲಿ ಪವನ ವಿದ್ಯುತ್ ಮತ್ತು ಸೌರವಿದ್ಯುತ್ ಘಟಕಗಳ ಸ್ಥಾಪನೆಗೆ ಸರ್ಕಾರ ಮುಂದಾಗಿದೆ. ಇಂತಹ ಘಟಕಗಳಿಂದ ವಿದ್ಯುತ್ ಸಾಗಣೆಗೆ ಬಳಸುವ ಹೈಟೆನ್ಷನ್ ವಿದ್ಯುತ್ ಲೇನ್‌ಗಳು ಈ ಪಕ್ಷಿಗಳಿಗೆ ಮಾರಕವಾಗಿವೆ. ಇಂತಹ ಲೇನ್‌ಗಳನ್ನು ನೆಲದಡಿಯಲ್ಲಿ ಹಾಕಬೇಕು ಎಂದು ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನವು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಕ್ಕೆ ಬಂದಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಜತೆಗೆ ಈ ಪಕ್ಷಿಗಳಿಗೆ ಮಾರಕವಾಗಿರುವ ಇತರ ಕಾರಣಗಳನ್ನೂ ವರದಿಯಲ್ಲಿ ಪಟ್ಟಿ ಮಾಡಲಾಗಿದೆ.

- ಆವಾಸ ಸ್ಥಾನದ ಸ್ವರೂಪವನ್ನು ಬದಲಿಸುವಂತಹ ಅಭಿವೃದ್ಧಿ ಚಟುವಟಿಕೆಗಳು ಮತ್ತು ಹುಲ್ಲುಗಾವಲಿನಲ್ಲಿ ಜಾನುವಾರುಗಳನ್ನು ಅತಿಯಾಗಿ ಮೇಯಿಸುವುದು. ಇದರಿಂದ ಈ ಪಕ್ಷಿಗಳು ಗೂಡುಕಟ್ಟಲು, ಮೊಟ್ಟೆ ಇಡಲು ಮತ್ತು ಮರಿಗಳನ್ನು ಮಾಡಲು ಮರೆ ಇಲ್ಲದಂತಾಗುತ್ತಿದೆ
- ಈ ಪ್ರದೇಶಗಳಲ್ಲಿ ನಾಯಿಗಳ ಸಂಖ್ಯೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಪಕ್ಷಿಗಳನ್ನು ಈ ನಾಯಿಗಳು ಬೇಟೆಯಾಡುತ್ತವೆ, ಮೊಟ್ಟೆಗಳನ್ನು ತಿನ್ನುತ್ತವೆ. ಜನರೂ ಈ ಪಕ್ಷಿಗಳನ್ನು ಬೇಟೆಯಾಡಿದ ನಿದರ್ಶನಗಳಿವೆ
- ಆವಾಸ ಸ್ಥಾನದಲ್ಲಿ, ಕೃಷಿಯಲ್ಲಿ ರಾಸಾಯನಿಕ ಕೀಟನಾಶಕಗಳ ಬಳಕೆ ತೀವ್ರಮಟ್ಟದಲ್ಲಿ ಏರಿಕೆಯಾಗಿದೆ. ಇದರಿಂದ ಹೆಬ್ಬಕ ಮತ್ತು ಕರಿನವಿಲುಗಳ ಆಹಾರಗಳಾದ ಕೀಟಗಳು, ಹುಳಗಳು, ಮಿಡತೆಗಳು, ಹಲ್ಲಿಗಳು, ಇಲಿಗಳ ಸಂಖ್ಯೆ ಕಡಿಮೆಯಾಗಿದೆ. ಆಹಾರದ ಕೊರತೆ ಎದುರಾಗಿರುವ ಕಾರಣ ಈ ಪಕ್ಷಿಗಳು ನಾಶವಾಗುತ್ತಿವೆ

ಪರಿಹಾರೋಪಾಯಗಳು

- ಎಲ್ಲಾ ಹೈಟೆನ್ಷನ್ ಲೇನ್‌ಗಳನ್ನು ಕ್ಷಿಪ್ರವಾಗಿ ನೆಲದಡಿಗೆ ಹಾಕುವುದು ಸಾಧ್ಯವಿಲ್ಲ. ಹಾಗಾಗಿ ಈ ಲೇನ್‌ಗಳತ್ತ ಹಕ್ಕಿಗಳು ಬರದಂತೆ 'ಬರ್ಡ್ ಫ್ಲೈಟ್ ಡೈವರ್ಟರ್'ಗಳನ್ನು ಹಾಕಬೇಕು. ಹೊಳೆಯುವ ಸಾಮರ್ಥ್ಯವಿರುವ ಈ ಸಾಧನಗಳು ಪಕ್ಷಿಗಳು ತಮ್ಮತ್ತ ಹಾರಿಬರುವುದನ್ನು ತಡೆಯುತ್ತವೆ
- ಈ ಪಕ್ಷಿಗಳ ಆವಾಸ ಸ್ಥಾನದಲ್ಲಿರುವ ಸ್ಥಳೀಯರಲ್ಲಿ ಪಕ್ಷಿಗಳ ಸಂರಕ್ಷಣೆ ಬಗ್ಗೆ ಅರಿವು ಮೂಡಿಸಬೇಕು. ಕೃಷಿ, ಹೈನುಗಾರಿಕೆಯಲ್ಲಿ ಈ ಪಕ್ಷಿಗಳಿಗೆ ಇರುವ ಅಪಾಯವನ್ನು ಹೋಗಲಾಡಿಸುವ ಕ್ರಮಗಳನ್ನು ತೆಗೆದುಕೊಳ್ಳಬೇಕು
- ಕೃತಕವಾಗಿ ಈ ಪಕ್ಷಿಗಳ ಸಂತಾನೋತ್ಪತ್ತಿ ನಡೆಸಲು ಕ್ರಮ ತೆಗೆದುಕೊಳ್ಳಬೇಕು


ಕರಿ ನವಿಲು

ಆಧಾರ: ದಿ ಕಾರ್ಬೆಟ್ ಫೌಂಡೇಷನ್‌ನ ವಾರ್ಷಿಕ ವರದಿ: 2019–22

ಬೇರೆ ಕ್ರೀಡೆಗಳಲ್ಲಿ ನಡೆದ ಪ್ರಕರಣಗಳು

- ಹರಿಯಾಣದ ಕ್ರೀಡಾ ಸಚಿವ ಸಂದೀಪ್ ಸಿಂಗ್ (ಮಾಜಿ ಹಾಕಿಪಟುವೂ ಹೌದು) ವಿರುದ್ಧ ಮಹಿಳಾ ಅಥ್ಲೆಟಿಕ್ ತರಬೇತುದಾರರೊಬ್ಬರು ಹೋದ ತಿಂಗಳು ಎಫ್‌ಐಆರ್ ದಾಖಲಿಸಿದ್ದರು. ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ ಸಂದೀಪ್ ಸಿಂಗ್ ಅವರನ್ನು ಇನ್ನೊಂದು ಖಾತೆಯ ಸಚಿವರನ್ನಾಗಿ ನೇಮಕ ಮಾಡಲಾಯಿತು
- ಸೈಕ್ಲಿಂಗ್ ಕೋಚ್ ಆರ್.ಕೆ. ಶರ್ಮಾ ಅವರು ಮಹಿಳಾ ಸೈಕ್ಲಿಸ್ಟ್ ಒಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೋದ ಜೂನ್‌ನಲ್ಲಿ ಸದ್ದು ಮಾಡಿತ್ತು
- ವಿದೇಶದಲ್ಲಿಯೂ ಇಂತಹ ಪ್ರಕರಣಗಳಾಗಿವೆ. ಹೋದ ವರ್ಷ ಅಮೆರಿಕದ ತಾರಾ ಜಿಮ್ನಾಸ್ಟ್ ಸಿಮೋನ್ ಬೈಲ್ಸ್ ಮತ್ತು ಜಿಮ್ನಾಸ್ಟ್‌ಗಳು ತಮ್ಮ ಕೋಚ್ ವಿರುದ್ಧ ಮಾಡಿದ್ದ ಆರೋಪ ಸುದ್ದಿಯಾಗಿತ್ತು. ಜಿಮ್ನಾಸ್ಟ್‌ಗಳು ತಮಗೆ ಆದ ದೌರ್ಜನ್ಯದ ವಿವರಗಳನ್ನು ಅಲ್ಲಿಯ ನ್ಯಾಯಾಲಯದ ಗಮನಕ್ಕೆ ತಂದಿದ್ದರು. ಅದರಲ್ಲಿ ಆಘಾತಕಾರಿ ವಿಚಾರಗಳಿದ್ದವು



ಕುಸ್ತಿ ಬರೀ ಕ್ರೀಡೆಯಲ್ಲ; ಸಂಸ್ಕೃತಿ

ಭಾರತದಲ್ಲಿ ಕುಸ್ತಿಯು ಕ್ರೀಡೆಯಷ್ಟೇ ಅಲ್ಲ. ಸಂಸ್ಕೃತಿಯೂ ಹೌದು. ಕುಸ್ತಿ ತಾಲೀಮು ಮಾಡುವ ಮಟ್ಟಿಯನ್ನು ಅನಾದಿ ಕಾಲದಿಂದಲೂ ಅಂಬಾಭವಾನಿ ದೇವಿಯಂತೆ ಪೂಜಿಸುವ ಪರಂಪರೆ ಇದೆ. ಅಷ್ಟೇ ಅಲ್ಲ. ಕೆಲವು ದಶಕಗಳ ಹಿಂದೆ ಹಳ್ಳಿಹಳ್ಳಿಗಳಲ್ಲಿಯೂ ಇದ್ದ ಗರಡಿಮನೆಗಳ ಪೈಲ್ವಾನರು ತಮ್ಮ ಊರಿನ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಯುವ ರಕ್ಷಕರೂ ಆಗಿದ್ದರು.

ಆಧುನಿಕತೆ ಬೆಳೆದಂತೆ ಮಹಿಳೆಯರೂ ಕುಸ್ತಿಪಟುಗಳಾದರು. ಒಲಿಂಪಿಕ್ ಮತ್ತು ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿಯೂ ಪದಕ ಗೆದ್ದು ಭಾರತದ ಕೀರ್ತಿ ಬೆಳಗಿದರು.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ



ನಿಜವಾದ ಸಾರ್ವಭೌಮ

ಸಾರ್ವಭೌಮನು ಸೃಷ್ಟಿಯೊಳಗದೊರ್ವನೆ ಕಾಣೊ |
ಸರ್ವವನು ತನ್ನಾತ್ಮವೆಂದು ಬದುಕುವನು ||
ನಿರ್ವಿಕಾರಾಂತರಂಗದಿ ಜಗವ ಧರಿಸುವನು |
ಸರ್ವಮಂಗಳನವನು – ಮಂಕುತಿಮ್ಮ || 805 ||

ಪದ-ಅರ್ಥ: ಸೃಷ್ಟಿಯೊಳಗದೊರ್ವನೆ = ಸೃಷ್ಟಿಯೊಳಗೆ + ಅದು + ಓರ್ವನೆ(ಒಬ್ಬನೇ), ನಿರ್ವಿಕಾರಾಂತರಂಗದಿ = ನಿರ್ವಿಕಾರ(ವಿಕಾರ ರಹಿತ) + ಅಂತರಂಗದಿ.

ವಾಚ್ಯಾರ್ಥ: ಸರ್ವವನ್ನೂ ತನ್ನ ಆತ್ಮವೆಂದೇ ತಿಳಿದು ಬದುಕುವವನು ಇಡೀ ಸೃಷ್ಟಿಯೊಳಗೆ ಅವನೊಬ್ಬನೇ ಸಾರ್ವಭೌಮ. ಅವನು ನಿರ್ವಿಕಾರವಾದ ಅಂತರಂಗವನ್ನು ಹೊಂದಿ ಜಗತ್ತಿನಲ್ಲಿ ಬಾಳುತ್ತಾನೆ. ಅವನ ಬಾಳು ಸದಾ ಮಂಗಳಕರವಾದದ್ದು.

ವಿವರಣೆ: ಪ್ರಜಾಪ್ರೇಮಿ ರಾಜನೊಬ್ಬ ಬೇಟೆಗೆಂದು ಕಾಡಿಗೆ ಹೋದ. ಜಿಂಕೆಗಳನ್ನು ಬೆನ್ನಟ್ಟಿದಾಗ ಪರಿವಾರದಿಂದ ದೂರವಾಗಿ ಒಬ್ಬನೇ ಗಾಢವಾದ ಅರಣ್ಯಪ್ರದೇಶವನ್ನು ಸೇರಿದ. ವಿಪರೀತನೀರಡಿಕೆ, ಹಸಿವು ಕಾಡಿತು. ಅಲ್ಲೊಂದು ಗುಡಿಸಲು ಕಂಡಿತು. ಅಲ್ಲಿ ಒಬ್ಬಸನ್ಯಾಸಿ. ರಾಜನಿಗೆ ಹಣ್ಣು, ನೀರು ಕೊಟ್ಟ. ರಾಜನ ಅನೇಕಸಮಸ್ಯೆಗಳಿಗೆ ಪರಿಹಾರ ಸೂಚಿಸಿದ. ರಾಜನಿಗೆ ಅವನ ಮೇಲೆ ತುಂಬವಿಶ್ವಾಸ ಹುಟ್ಟಿತು. ಮೇಲಿಂದ ಮೇಲೆ ಅಲ್ಲಿಗೆ ಹೋಗತೊಡಗಿದ.ಆಗಾಗ ಅಲ್ಲಿಗೆ ಹೋಗುವುದಕ್ಕಿಂತ ಅವನನ್ನೇ ರಾಜಧಾನಿಗೆ ಕರೆತರುವುದು ಒಳ್ಳೆಯದೆಂದು ಭಾವಿಸಿ ಕರೆದ. ಸನ್ಯಾಸಿ ತಕ್ಷಣವೇ ಸಿದ್ಧನಾದ. ರಾಜನಿಗೆ ಆಶ್ಚರ್ಯ. ರಾಜಧಾನಿಯಲ್ಲಿ ಸನ್ಯಾಸಿಗೊಂದು ಸುಂದರವಾದ ಮನೆ, ದಾಸ, ದಾಸಿಯರನ್ನು ಕೊಟ್ಟ. ಒಂದು ವಾರದ ನಂತರ ಸನ್ಯಾಸಿಗಳು ಹೇಗಿದ್ದಾರೆಂದು ಮಂತ್ರಿಗಳನ್ನು ಕೇಳಿದ. ಅವರು ಹೇಳಿದರು, "ಅವನೆಂಥ ಸನ್ಯಾಸಿ? ರಾಜಭೋಗದಲ್ಲಿ ತನ್ಮಯನಾಗಿದ್ದಾನೆ. ಯಾವ ಸಂಭ್ರಮವನ್ನೂ ತಪ್ಪಿಸಿಕೊಳ್ಳುವುದಿಲ್ಲ". ರಾಜ ಸನ್ಯಾಸಿಯನ್ನೇ ಕೇಳಿದ, "ಸ್ವಾಮಿ, ನೀವಿರುವುದನ್ನು ಕಂಡರೆ ನನಗೂ, ನಿಮಗೂ ಯಾವ ವ್ಯತ್ಯಾಸವೂ ಕಾಣುತ್ತಿಲ್ಲ. ಯಾಕೆ ಹೀಗೆ?" ಸನ್ಯಾಸಿ, "ನಮ್ಮ ನಡುವಿನ ವ್ಯತ್ಯಾಸ ತೋರಿಸುತ್ತೇನೆ. ಬಾ". ರಾಜನನ್ನು ಕರೆದುಕೊಂಡು ಅರಮನೆಯಿಂದ ಹೊರಟ. ನಗರವನ್ನು ದಾಟಿದ. ಮುಂದಿದ್ದ ನದಿಯನ್ನು ದಾಟಿದ. "ಇನ್ನೂ ಎಷ್ಟು ದೂರ?" ರಾಜ ಕೇಳಿದ. "ನನ್ನ ಜೊತೆಗೆ ಬಾ. ವ್ಯತ್ಯಾಸವನ್ನು ತೋರಿಸುತ್ತೇನೆ" ರಾಜ್ಯದ ಗಡಿ ಬಂದಿತು. ರಾಜ ನಿಂತ. "ನಾನು ಇನ್ನು ಮುಂದೆ ಬರಲಾರೆ. ನನ್ನ ರಾಜ್ಯದ ಸೀಮೆಯನ್ನು ಮೀರಲಾರೆ". ಸನ್ಯಾಸಿ ನಕ್ಕ. "ನನಗೂ, ನಿನಗೂ ಇದೇ ವ್ಯತ್ಯಾಸ. ನಿನಗೆ ಒಂದು ಸೀಮೆ ಇದೆ. ಅದನ್ನು ನೀನು ದಾಟಲಾರೆ. ಆದರೆ ನನಗೆ ಯಾವ ಸೀಮೆಯೂ ಇಲ್ಲ. ನನಗೆ ಯಾವ ರಾಜ್ಯವಾದರೂ ಅಷ್ಟೇ. ನಿನಗೆ ಅರಮನೆ ಬೇಕು, ಸಿಂಹಾಸನ ಬೇಕು. ನನಗೆ ಇದ್ದದ್ದೇ ಅರಮನೆ, ಕುಳಿತದ್ದೇ ಸಿಂಹಾಸನ. ನಾನು ಅರಮನೆಯಲ್ಲಿದ್ದೆ. ಆದರೆ ಅರಮನೆ ನನ್ನಲ್ಲಿರಲಿಲ್ಲ. ಗುಡಿಸಲಿನಲ್ಲೂ ಇದ್ದೆ, ಆದರೆ ಗುಡಿಸಲು ನನ್ನದಾಗಿರಲಿಲ್ಲ. ಒಂದು ರೀತಿಯಲ್ಲಿ ಎಲ್ಲವೂ ನನ್ನದೇ, ಆದರೆ ಯಾವುದೂ ನನ್ನದಲ್ಲ". ರಾಜ ಸನ್ಯಾಸಿಯ ಕ್ಷಮೆ ಕೋರಿ ಮರಳಿ ಬರಲು ಕೇಳಿದ. ಸನ್ಯಾಸಿ, "ಮುಗಿಯಿತು ನನ್ನ ಆ ಮನೆಯ ವಾಸ. ನಿನಗೆ ವ್ಯತ್ಯಾಸ ತೋರಿಸಲು ಈ ನಡೆ" ಎಂದು ಹೇಳಿ ಹೊರಟ. ರಾಜ ಚಿಂತಿಸಿದ, ಸಾರ್ವಭೌಮನು ತಾನೋ, ಸನ್ಯಾಸಿಯೋ? ಕಗ್ಗ ಅದನ್ನೇ ಧ್ವನಿಸುತ್ತದೆ. ಯಾವನು ಎಲ್ಲರಲ್ಲಿಯೂ ತನ್ನಾತ್ಮವನ್ನೇ ಕಾಣುತ್ತಾನೋ ಅವನಿಗೆ ಮಿತಿಗಳಿಲ್ಲ. ಅವನೇ ನಿಜವಾದ ಸಾರ್ವಭೌಮ. ಅವನು ನಿರ್ವಿಕಾರವಾಗಿ, ಸಮಚಿತ್ತದಿಂದ, ರಾಗ, ದ್ವೇಷಗಳಿಲ್ಲದೆ ಜಗತ್ತಿನಲ್ಲಿ ವ್ಯವಹರಿಸುತ್ತಾನೆ. ಅವನು ಮಾಡಿದ್ದು, ಚಿಂತಿಸಿದ್ದು ಪ್ರಪಂಚಕ್ಕೆ ಶುಭವೇ ಆದ್ದರಿಂದ ಅವನು ಸಕಲರಿಗೆ ಮಂಗಳಕರನಾದವನು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜನವರಿ 23, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಶುಕ್ಲ ದ್ವಿತೀಯ ಗಂ. 18-44 ನಕ್ಷತ್ರ: ಧನಿಷ್ಠಾ ಗಂ. 24-27 ಯೋಗ: ವ್ಯತೀಪಾತ ಗಂ. 25-28, ಕರಣ: ಬಾಲವ ಗಂ. 08-34, ಮಕರ ಮಾಸದ 09 ನೇ ದಿನ. ರಾಹುಕಾಲ : ಬೆಳಿಗ್ಗೆ 07-30 -09-00
ಸೂರ್ಯೋದಯ : 07-01 ಸೂರ್ಯಾಸ್ತ : 06-23
ಮುಸ್ಲಿಂ ದಿನಾಂಕ : 30 ಜುಮಾದುಸ್ಸಾನಿ
ದಿನ ವಿಶೇಷ : ನೇತಾಜಿಯವರ ಜನ್ಮದಿನ
ಅದೃಷ್ಟ ಸಂಖ್ಯೆ : 5, 6

ಮೇಷ: ಕೆಲಸಕ್ಕಾಗಿ ಹೊಸ ಅಧಿಕಾರಿಗಳನ್ನು ಭೇಟಿ ಮಾಡಲು ಇಂದು ಒಳ್ಳೆಯ ದಿನ. ಸಮಸ್ಯೆಯಲ್ಲಿ ಸಿಲುಕಿರುವ ಎಂಥ ಪರಿಸ್ಥಿತಿಯಿಂದ ಹೊರ ಬರುವ ಸಾಮರ್ಥ್ಯ ನಿಮ್ಮಲ್ಲಿದೆ ಎಂಬುವುದು ನೆನಪಿರಲಿ.

ವೃಷಭ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ದೈನಂದಿನ ಬದುಕಿನಲ್ಲಿ ಮತ್ತೊಬ್ಬರನ್ನು ಗೌರವಿಸುವುದರಿಂದ ನಿಮ್ಮ ಗೌರವ ಕೂಡ ಹೆಚ್ಚುವುದು.

ಮಿಥುನ: ಮುಂಜಾನೆ ಏಳುವಾಗಲೇ ನೀವು ಉತ್ಸಾಹಿಗಳಾಗಿರುತ್ತೀರಿ, ಸಂತಸ ಭರಿತ ಒಂದು ಸುದ್ದಿ ನಿಮ್ಮನ್ನು ತಲುಪುತ್ತದೆ. ರಕ್ಷಣಾ ವಿಭಾಗದಲ್ಲಿ ಕಾರ್ಯ ನಿರ್ವಹಿಸಲು ಆಯ್ಕೆಗೊಳ್ಳುವಿರಿ. ಹಳದಿ ಬಣ್ಣ ಶುಭ ತರಲಿದೆ.

ಕರ್ಕಾಟಕ: ಹೊಸ ಮನೆಯ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳಿಗೆ ಓಡಾಟ ನಡೆಸಬೇಕಾಗುವುದು. ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ, ಪೋಷಣೆಯ ಬಗ್ಗೆ ಸಂಬಂಧಪಟ್ಟವರಲ್ಲಿ ಚರ್ಚಿಸುವುದು ಉತ್ತಮ.

ಸಿಂಹ: ದಿನದ ಮೊದಲ ಭಾಗ ಶ್ರಮ ಭರಿತವಾಗಿದ್ದರೂ ನಂತರ ಬಹಳ ವಿರಾಮ ದೊರೆಯುವುದು. ಎಲ್ಲಾ ಕಿರಿ ಕಿರಿಗಳನ್ನೂ ಶಾಂತ ರೀತಿಯಿಂದ ಎದುರಿಸಿ. ನೆರೆಯವರೊಂದಿಗಿನ ಸಂಬಂಧ ಉತ್ತಮಗೊಳ್ಳುವುದು.

ಕನ್ಯಾ: ಜವಳೀ ವ್ಯಾಪಾರಿಗಳು ಪ್ರಚಾರದಿಂದಾಗಿ ಉತ್ತಮ ವ್ಯಾಪಾರವನ್ನು ನಡೆಸಬಹುದು. ಕಾಗದ ಕಾರ್ಖಾನೆ ಕೆಲಸಗಾರರಿಗೆ ಹೆಚ್ಚಿನ ಕೆಲಸ ಇರುವುದು. ವ್ಯಾಪಾರದಲ್ಲಿ ಸ್ಪರ್ಧಾತ್ಮಕ ರೀತಿಯ ವಾತಾವರಣ ಇರುತ್ತದೆ.

ತುಲಾ: ಬಹಳ ಬೇಗ ಗುರಿ ತಲುಪಬೇಕು ಎಂಬ ಹಂಬಲವು, ಆತುರವು ಕೆಲಸಕ್ಕೆ ಅಡ್ಡಿ ಮಾಡಬಹುದು. ಸಾರಿಗೆ ವೃತ್ತಿಯಲ್ಲಿರುವವರಿಗೆ ಜೀವನೋಪಾಯಕ್ಕೆ ಪರ್ಯಾಯ ಮಾರ್ಗ ಕಂಡುಕೊಳ್ಳುವುದು ಅನಿವಾರ್ಯ.

ವೃಶ್ಚಿಕ: ಹಿಂದೆಂದೂ ಮಾಡದ ಕೆಲಸಗಳನ್ನು ಈಗ ಮಾಡಬೇಕಾಗುವುದು. ತಂದೆಯವರ ಆರೋಗ್ಯ ಸ್ಥಿರವಾಗಿರಲಿದೆ, ಯಾವುದೇ ರೀತಿಯ ಗಾಬರಿ ಬೇಡ. ಮಹಾವಿಷ್ಣುವಿನ ಸ್ಮರಣೆಯಿಂದ ಮಾನಸಿಕವಾಗಿ ಸದೃಢರಾಗುವಿರಿ.

ಧನು: ವೃತ್ತಿಪರ ಸಮಸ್ಯೆಗಳು ಬದಲಾವಣೆ ಬೇಕೆಂದು ಸೂಚಿಸುತ್ತವೆ. ಸಾಮಾಜಿಕ ಸಮಾರಂಭಗಳಲ್ಲಿ ಅತ್ಯುತ್ತಮ ನಾಯಕತ್ವವನ್ನು ವಹಿಸಿಕೊಳ್ಳುವಿರಿ. ಶ್ರಮಕ್ಕೆ ತಕ್ಕಂತೆಯೇ ಧನ ಸಂಪಾದನೆ ಹೆಚ್ಚುವುದು.

ಮಕರ: ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ತಂತ್ರಗಾರಿಕೆಯನ್ನು ನಡೆಸಬೇಕಾಗುತ್ತದೆ. ವಕೀಲೀ ವೃತ್ತಿ ನಡೆಸುವವರಿಗೆ, ನ್ಯಾಯಾಂಗ ಇಲಾಖೆಯವರಿಗೆ ಉತ್ತಮ ದಿನ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ.

ಕುಂಭ: ನಿಮ್ಮ ಆಸೆಯಂತೆ ವಿದೇಶಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುವುದು. ವೃತ್ತಿ ಜೀವನ ಹಾಗೂ ದಿನಚರಿಯು ಎಂದಿನಂತೆಯೇ ವ್ಯವಸ್ಥಿತವಾಗಿರುವುದು. ಸುಗಂಧ ವಸ್ತುಗಳ ಮಾರಾಟದಲ್ಲಿ ಲಾಭವು ಹೆಚ್ಚಳ


ಮೀನ: ನೇರ ನುಡಿಯ ಸ್ವಭಾವದಿಂದಾಗಿ ಸಹೋದ್ಯೋಗಿಗಳಲ್ಲಿ ಮನಸ್ತಾಪ ಉಂಟಾಗಬಹುದು. ಆಟಿಕೆ ವಸ್ತುಗಳನ್ನು ತಯಾರಿಸುವವರಿಗೆ ಅಥವಾ ರಫ್ತು ವ್ಯವಹಾರ ಮಾಡುವವರಿಗೆ ಅಧಿಕ ಮಟ್ಟದ ಲಾಭಾಂಶ ಕಂಡುಬರಲಿದೆ.

ಪದಬಂಧ 5208

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೆರೆಮನೆಯಲ್ಲ! ಇದು ಕಾರಾಗೃಹ! (4)
3.ತೊಡಲು ಖರೀದಿಸಿರುವ ಲುಂಗಿ (3)
5.ಮಲಗುವಾಗ ಕಾಣಿಸಿದ ಸೇವಕ (3)
7.ಒಮ್ಮೊಂದೊಮ್ಮೆ ನರ ಮಿಡಿದು ಉಂಟಾಗುವ ನೋವು (3)
8.ನಂಬಿಕೆ ದ್ರೋಹವಿದು (5)
11.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
12.ಮಗನಿಗೆ ತಿಳಿದಿರುವ ವೇದ (3)
15.ವಸ್ತುಗಳನ್ನು ಸಂಗ್ರಹಿಸುವ ಸ್ಥಳ (3)
16.ಈತ ಪರೀಕ್ಷೆ ಮಾಡುವವನು (4)

ಮೇಲಿಂದ ಕೆಳಕ್ಕೆ
1.ಸೀರೆಯ ಹೊದಿಯುವ ಭಾಗ (3)
2.ಹೀಗೆ ಜ್ಞಾಪಕ ಮಾಡಿಕೊ (2)
3.ಸಿಕ್ಕು ಇಲ್ಲಿಕಾಣುತ್ತಿದೆ (3)
4.ಚಿಲ್ಲರೆ ಹಣವಿದು (4)
6.ಲಿಖಿತ ಮೂಲಕ ಮಾಡಿಕೊಳ್ಳುವ ಅರಿಕೆ (3)
7.ಹರಾಜಿನಲ್ಲಿ ಹೆಚ್ಚಿನ ಬೆಲೆಗೆ ಸವಾಲು ಹಾಕುವುದು (5)
9.ತೋರು ಬೆರಳಿದು (3)
10.ಕೃತಿಮವಾದ ಮಂದಹಾಸ (4)
11.ಕೊಡತಕ್ಕ ಹಣ (3)
13.ಕಡಸು ಅಥವಾ ಮರಿ ಎಂದರೂ ಸರಿಯೇ (3)
14.ಬೇಕೂಫ ಇಣುಕಿದ ಬಾವಿ! (2)



5207ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಸ್ವಹಸ್ತಾಕ್ಷರ 3.ವಿಜೇತ
5.ಗಾಯ 6.ಅವಿರತ
8.ತಲೆ 10.ಸಮಜಾಯಿಷಿ
12.ಬಾಹು 14.ಹಗರಣ
15.ಕಜ್ಜಿ 16.ಯದೃಚ್ಛೆ
17.ಭೋಜನಕೂಟ.

ಮೇಲಿಂದ ಕೆಳಕ್ಕೆ:
1.ಸ್ವಯಂಕೃತ 2.ಕ್ಷತ್ರಿಯ
4.ತರತಮ 7.ವಿದುಷಿ
9.ಹಜಾರ 10.ಸತ್ಕಾರ
11.ಮಹನೀಯ 13.ಹುಡುಕಾಟ
15.ಕಣಜ

ಸುಡೊಕು 5594

1		3	5		6		4	7
				4			8	
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5593 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಬಜೆಟ್: ಬ್ಯಾಂಕ್‌ಗಳಿಗೆ ನೆರವು ಅನುಮಾನ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಆರ್ಥಿಕ ಸ್ಥಿತಿಯು ಸುಧಾರಿಸುತ್ತಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಅವುಗಳ ಒಟ್ಟು ನಿವ್ವಳ ಲಾಭವು ₹ 1 ಲಕ್ಷ ಕೋಟಿ ಆಗುವ ನಿರೀಕ್ಷೆ ಇದೆ. ಹೀಗಾಗಿ ಕೇಂದ್ರ ಸರ್ಕಾರವು 2023–24ನೇ ಸಾಲಿನ ಬಜೆಟ್‌ನಲ್ಲಿ ಬಂಡವಾಳ ನೆರವು ಘೋಷಣೆ ಮಾಡುವುದು ಅನುಮಾನ ಎಂದು ಮೂಲಗಳು ಹೇಳಿವೆ.

ಬ್ಯಾಂಕ್‌ಗಳ ಬಂಡವಾಳ ಲಭ್ಯತೆ ಪ್ರಮಾಣವು ಅಗತ್ಯಕ್ಕಿಂತಲೂ ಹೆಚ್ಚಿಗೆ ಇದ್ದು, ಶೇ 14 ರಿಂದ ಶೇ 20ರ ಒಳಗೆ ಇದೆ. ಮಾರುಕಟ್ಟೆಯಿಂದ ಬಂಡವಾಳ ಸಂಗ್ರಹ ಮಾಡುತ್ತಿರುವುದಷ್ಟೇ ಅಲ್ಲದೆ, ಪ್ರಮುಖವಲ್ಲದ ಆಸ್ತಿಗಳನ್ನು ಸಹ ಮಾರಾಟ ಮಾಡುತ್ತಿವೆ ಎಂದು ತಿಳಿಸಿವೆ.

ಕೇಂದ್ರ ಸರ್ಕಾರವು ಈ ಹಿಂದೆ 2021–22ರಲ್ಲಿ ಬ್ಯಾಂಕ್‌ಗಳಿಗೆ ₹20 ಸಾವಿರ ಕೋಟಿ ನೆರವು ನೀಡಿತ್ತು. 2016–17 ರಿಂದ 2020–21ರ ಅವಧಿಯಲ್ಲಿ ಸರ್ಕಾರಿ ಬ್ಯಾಂಕ್‌ಗಳಿಗೆ ಒಟ್ಟು ₹3.10 ಲಕ್ಷ ಕೋಟಿ ಬಂಡವಾಳ ನೆರವನ್ನು ಸರ್ಕಾರ ನೀಡಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆಬ್ರುವರಿ 1ರಂದು ಬಜೆಟ್ ಮಂಡಿಸಲಿದ್ದಾರೆ. ಸರ್ಕಾರಿ ಸ್ವಾಮ್ಯದ 12 ಬ್ಯಾಂಕ್‌ಗಳು ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಒಟ್ಟು ₹15,306 ಕೋಟಿ ಲಾಭ ಗಳಿಸಿವೆ. ಎರಡನೇ ತ್ರೈಮಾಸಿಕದ ಒಟ್ಟು ಲಾಭವು ₹25,685 ಕೋಟಿ ಆಗಿದೆ. ವರ್ಷದಿಂದ ವರ್ಷಕ್ಕೆ ಮೊದಲ ತ್ರೈಮಾಸಿಕದಲ್ಲಿ ಲಾಭವು ಶೇ 9ರಷ್ಟು ಬೆಳವಣಿಗೆ ಕಂಡಿದೆ. ಎರಡನೇ ತ್ರೈಮಾಸಿಕದಲ್ಲಿ ಶೇ 50ಕ್ಕೆ ಏರಿಕೆ ಆಗಿದೆ.

ಎರಡನೇ ತ್ರೈಮಾಸಿಕದಲ್ಲಿ ಎಸ್‌ಬಿಐ ₹13,265 ಕೋಟಿಯಷ್ಟು ಗರಿಷ್ಠ ಲಾಭ ಗಳಿಸಿದೆ.

ಹಣಕಾಸು ವರ್ಷದ ಮೊದಲಾರ್ಧದಲ್ಲಿ ನಿವ್ವಳ ಲಾಭವು ಶೇ 32ರಷ್ಟು ಹೆಚ್ಚಾಗಿ ₹40,991 ಕೋಟಿಗೆ ತಲುಪಿದೆ. 2021–22ನೇ ಹಣಕಾಸು ವರ್ಷದಲ್ಲಿ ಕೋವಿಡ್ ಸೃಷ್ಟಿಸಿದ್ದ ಒತ್ತಡದ ಹೊರತಾಗಿಯೂ ನಿವ್ವಳ ಲಾಭ ₹66,539 ಕೋಟಿಯಷ್ಟು ಆಗಿತ್ತು.

ಕಂಪನಿಗಳ ಬಂಡವಾಳ ಮೌಲ್ಯ ಹೆಚ್ಚಳ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ನೋಂದಾಯಿತ ಅತ್ಯಂತ ಮೌಲ್ಯಯುತ 10 ಕಂಪನಿಗಳ ಮಾರುಕಟ್ಟೆ ಮೌಲ್ಯವು ಕಳೆದ ವಾರ ಕೊನೆಗೊಂಡ ವಹಿವಾಟಿನಲ್ಲಿ ₹82,481 ಕೋಟಿಯಷ್ಟು ಹೆಚ್ಚಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್‌ನ ಮೌಲ್ಯ ₹ 33,432 ಕೋಟಿ ಮತ್ತು ಅದಾನಿ ಟೋಟಲ್ ಗ್ಯಾಸ್ ಮೌಲ್ಯ ₹ 22,667 ಕೋಟಿಯಷ್ಟು ಭಾರಿ ಹೆಚ್ಚಳ ಕಂಡುಬಂದಿದೆ.

ಜಿಆರ್‌ಟಿಗೆ ವಿನ್ಯಾಸ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಆರ್‌ಟಿ ಜುವೆಲರ್ಸ್‌ನ ಬ್ರೇಸ್ಲೆಟ್‌ಗೆ ಇಂಡಿಯನ್ ಜುವೆಲರ್ ಮ್ಯಾಗಜಿನ್ (ಐಜೆ) ನೀಡುವ ಉತ್ತಮ ವಿನ್ಯಾಸ ಪ್ರಶಸ್ತಿ ಲಭಿಸಿದೆ.

ಐಜೆ ಪ್ರಶಸ್ತಿಯ 13ನೇ ಆವೃತ್ತಿಯಲ್ಲಿ ದೇಶದ 21 ನಗರಗಳ ಒಂದು ಸಾವಿರಕ್ಕೂ ಅಧಿಕ ವಿನ್ಯಾಸಗಳು ಪ್ರಶಸ್ತಿಗೆ ಪೈಪೋಟಿ ನಡೆಸಿದ್ದವು. ಅವುಗಳಲ್ಲಿ ಜಿಆರ್‌ಟಿಯ ಪ್ರಶಸ್ತಿ ಗೆದ್ದುಕೊಂಡಿತು ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಎಸ್‌ಐಪಿಯೋ, ಲಮ್‌ಸಮ್ ಹೂಡಿಕೆಯೋ?



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಎಸ್‌ಐಪಿ ಮೂಲಕ ಹೂಡಿಕೆ ಮಾಡುವುದೋ ಇಲ್ಲ, ಒಂದೇ ಬಾರಿ ಲಮ್‌ಸಮ್ ಹೂಡಿಕೆ ಮೊರೆ ಹೋಗುವುದೋ? ಪ್ರತಿಯೊಬ್ಬ ಮ್ಯೂಚುಯಲ್ ಫಂಡ್ ಹೂಡಿಕೆದಾರನಿಗೂ ಈ ಪ್ರಶ್ನೆ ಕಾಡುತ್ತದೆ. ಬನ್ನಿ ಯಾವುದು ಸರಿಯಾದ ಆಯ್ಕೆ ಎನ್ನುವುದರ ಬಗ್ಗೆ ವಿವರವಾಗಿ ತಿಳಿಯೋಣ.

ಏನಿದು ‘ಎಸ್‌ಐಪಿ’?

ಹೂಡಿಕೆ ವಲಯದಲ್ಲಿ ಸಾಮಾನ್ಯವಾಗಿ ಕೇಳಿ ಬರುವ ಪದ ಸಿಸ್ಟಮ್ಯಾಟಿಕ್ ಇನ್ವೆಸ್ಟ್‌ಮೆಂಟ್ ಪ್ಲಾನ್ (ಎಸ್‌ಐಪಿ). ಕನ್ನಡದಲ್ಲಿ ‘ವ್ಯವಸ್ಥಿತ ಹೂಡಿಕೆ ಯೋಜನೆ’ ಎಂದು ಕರೆಯಬಹುದು. ಮ್ಯೂಚುಯಲ್ ಫಂಡ್‌ನಲ್ಲಿ ಪ್ರತಿ ತಿಂಗಳು ನಿರ್ದಿಷ್ಟ ದಿನಾಂಕದಂದು ನಿಗದಿತ ಮೊತ್ತವನ್ನು ಸ್ವಯಂಚಾಲಿತವಾಗಿ ತುಂಬುತ್ತಾ ಹೋಗುವ ವ್ಯವಸ್ಥೆ ಇದಾಗಿದೆ. ಉದಾಹರಣೆಗೆ ಮ್ಯೂಚುಯಲ್ ಫಂಡ್ ಒಂದನ್ನು ಆಯ್ಕೆ ಮಾಡಿ ₹ 2 ಸಾವಿರ ಎಸ್‌ಐಪಿ ಹೂಡಿಕೆ ಮಾಡಲು ತೀರ್ಮಾನಿಸಿದರೆ ಪ್ರತಿ ತಿಂಗಳು ₹ 2 ಸಾವಿರ ತೊಡಗಿಸುತ್ತಾ ಹೋಗಬೇಕಾಗುತ್ತದೆ.

ಅನುಕೂಲಗಳು:

ಸರಾಸರಿ ಲೆಕ್ಕಾಚಾರದ ಲಾಭ: ಮಾರುಕಟ್ಟೆ ಏರುಗತಿಯಲ್ಲಿರುವಾಗ ಮತ್ತು ಮಾರುಕಟ್ಟೆ ಇಳಿಕೆ ಹಾದಿಯಲ್ಲಿರುವಾಗ ಎಸ್‌ಐಪಿ ಮುಂದುವರಿಸುವುದರಿಂದ ಏರಿಳಿತದ ಲಾಭ ನಿಮಗೆ ಸಿಗುತ್ತದೆ. ಉದಾಹರಣೆಗೆ ಮ್ಯೂಚುಯಲ್ ಫಂಡ್ ವೊಂದರಲ್ಲಿ ನೀವು ಮೊದಲ ಸಲ ಹೂಡಿಕೆ ಮಾಡುವಾಗ ಅದರ ಯುನಿಟ್ ಬೆಲೆ (ಎನ್‌ಎವಿ) ₹ 100 ಇರುತ್ತೆ ಎಂದುಕೊಳ್ಳಿ. ಎರಡನೇ ಬಾರಿ ಹೂಡುವಾಗ ಮಾರುಕಟ್ಟೆ ಕುಸಿತದ ಪರಿಣಾಮವಾಗಿ ಯುನಿಟ್‌ನ ಬೆಲೆ ₹ 80 ಆಗುತ್ತದೆ ಎಂದು ಭಾವಿಸಿ. ಇಂತಹ ಸನ್ನಿವೇಷದಲ್ಲಿ, ಸರಾಸರಿ ನಿಮಗೆ ₹ 90ಕ್ಕೆ ಪ್ರತಿ ಯುನಿಟ್ ಸಿಕ್ಕಂತಾಗುತ್ತದೆ. ಸರಳವಾಗಿ ಹೇಳುವುದಾದರೆ ಮಾರುಕಟ್ಟೆಯ ಏರಿಳಿತದ ಲಾಭ ಎಸ್‌ಐಪಿಯಲ್ಲಿ ಸಿಗುತ್ತದೆ.

ಶಿಸ್ತುಬದ್ಧ ಹೂಡಿಕೆ ಸಾಧ್ಯ: ಪ್ರತಿ ತಿಂಗಳು ನಿರ್ದಿಷ್ಟ ಮೊತ್ತ ಮ್ಯೂಚುಯಲ್ ಫಂಡ್ ಎಸ್‌ಐಪಿಗೆ ಹೋಗುವುದರಿಂದ ಶಿಸ್ತುಬದ್ಧ ಹೂಡಿಕೆ ಸಾಧ್ಯವಾಗುತ್ತದೆ. ಮಾಸಿಕ ಆದಾಯದಲ್ಲಿ ಎಸ್‌ಐಪಿಗಾಗೇ ನಾವು ಒಂದಿಷ್ಟು ಮೊತ್ತವನ್ನು ಎತ್ತಿಡುತ್ತೇವೆ. ದೀರ್ಘಾವಧಿಯಲ್ಲಿ ಇದರಿಂದ ದೊಡ್ಡ ಮೊತ್ತ ಗಳಿಸಲು ಸಾಧ್ಯವಾಗುತ್ತದೆ.

ಅನುಕೂಲಕ್ಕೆ ತಕ್ಕಂತೆ ಎಸ್‌ಐಪಿ: ಎಸ್‌ಐಪಿಗಳನ್ನು ನಿಮ್ಮ ಅನುಕೂಲಕ್ಕೆ ಮತ್ತು ಆದಾಯಕ್ಕೆ ತಕ್ಕಂತೆ ರೂಪಿಸಿಕೊಳ್ಳಬಹುದು. ಒಂದೊಮ್ಮೆ ಒಂದು ತಿಂಗಳು ಹಣಕಾಸಿನ ಪರಿಸ್ಥಿತಿ ಬಿಗಡಾಯಿಸಿದರೆ ಆ ತಿಂಗಳು ಎಸ್‌ಐಪಿ ನಿಲ್ಲಿಸಲು ಸಾಧ್ಯವಿದೆ.

ಯಾವಾಗ ಎಸ್‌ಐಪಿ ಆಯ್ಕೆ ಮಾಡಿಕೊಳ್ಳಬೇಕು: ಮಾಸಿಕ ಸಂಬಳದ ಕೆಲಸದಲ್ಲಿರುವವರು ಅಥವಾ ಪ್ರತಿ ತಿಂಗಳು ನಿರ್ದಿಷ್ಟ ಆದಾಯ ಪಡೆಯುವವರು ಮ್ಯೂಚುಯಲ್ ಫಂಡ್ ಹೂಡಿಕೆಗೆ ಎಸ್‌ಐಪಿ ಆಯ್ಕೆ ಮಾಡಿಕೊಳ್ಳುವುದು ಉತ್ತಮ. ಕಡಿಮೆ ಮೊತ್ತ ಅಂದ್ರೆ, ₹ 500 ಹೂಡಿಕೆ ಸಹ ಸಾಧ್ಯವಿದೆ. ಕನಿಷ್ಠ 5 ವರ್ಷ ಹೂಡಿಕೆ ಮಾಡುವ ಉದ್ದೇಶವಿದ್ದವರಿಗೆ ಇದು ಮಾರ್ಗ ಸೂಕ್ತ. ಇದನ್ನು ಆರಂಭಿಸಲು ಒಳ್ಳೆಯ ಸಮಯಕ್ಕಾಗಿ ಕಾಯುತ್ತಾ ಕೂರುವ ಅಗತ್ಯವಿಲ್ಲ. ಎಷ್ಟು ಬೇಗ ಆರಂಭಿಸುತ್ತಿರೋ ಅಷ್ಟು ಅನುಕೂಲ. ಷೇರು ಮಾರುಕಟ್ಟೆ ಬೀಳುವ ಸಂದರ್ಭದಲ್ಲಿ ಎಸ್‌ಐಪಿ ಹೂಡಿಕೆಯಿಂದ ಮತ್ತಷ್ಟು ಲಾಭವಾಗುತ್ತದೆ ಎನ್ನುವುದು ಗಮನಿಸಿಕೊಳ್ಳಬೇಕಾದ ಅಂಶ.

ಏನಿದು ಲಮ್‌ಸಮ್ ಹೂಡಿಕೆ?

ಎಸ್‌ಐಪಿಯಲ್ಲಿ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತವನ್ನು ಮ್ಯೂಚುಯಲ್ ಫಂಡ್‌ಗೆ ಹೂಡಿಕೆ ಮಾಡುತ್ತೇವೆ. ಆದರೆ ಲಮ್ ಸಮ್‌ನಲ್ಲಿ ಒಂದೇ ಬಾರಿಗೆ ದೊಡ್ಡ ಮೊತ್ತದ ಹೂಡಿಕೆ ಮಾಡಲಾಗುತ್ತದೆ. ಲಮ್ ಸಮ್‌ನಲ್ಲಿ ನಿರ್ದಿಷ್ಟ ಸಮಯಕ್ಕೆ ನಿರ್ದಿಷ್ಟ ಮೊತ್ತ ಹಾಕಬೇಕು ಎನ್ನುವ ಕಟ್ಟುಪಾಡುಗಳಿಲ್ಲ. ನಮಗೆ ಸಾಧ್ಯ ಎನಿಸಿದಾಗಲೆಲ್ಲಾ ದೊಡ್ಡ ಮೊತ್ತದ ಹೂಡಿಕೆ ಮಾಡುತ್ತಾ ಹೋಗಬಹುದು.

ಅನುಕೂಲಗಳು:

ಅನುಕೂಲಕ್ಕೆ ತಕ್ಕಂತೆ ಹೂಡಿಕೆ ಸಾಧ್ಯ: ಲಮ್ ಸಮ್ ಹೂಡಿಕೆಯಲ್ಲಿ ಪ್ರತಿ ತಿಂಗಳು ನಿರ್ದಿಷ್ಟ ಮೊತ್ತ ಹೂಡಿಕೆ ಮಾಡಲೇಬೇಕು ಎಂಬ ಯಾವುದೇ ಒತ್ತಡ ಇರುವುದಿಲ್ಲ. ಸಾಧ್ಯವಾದಾಗ ನಿಮ್ಮ ಅನುಕೂಲ ಮತ್ತು ಅಗತ್ಯಕ್ಕೆ ತಕ್ಕಂತೆ ಹೂಡಿಕೆ ಮಾಡಬಹುದು.

ತಕ್ಕ ಮಟ್ಟಿಗೆ ಮಾರುಕಟ್ಟೆ ಟೈಂ ಮಾಡಬಹುದು: ಲಮ್‌ಸಮ್ ಮ್ಯೂಚುಯಲ್ ಫಂಡ್ ಹೂಡಿಕೆ ಮಾಡುವಾಗ ಮಾರುಕಟ್ಟೆಯನ್ನು ತಕ್ಕಮಟ್ಟಿಗೆ ಟೈಂ ಮಾಡಲು ಸಾಧ್ಯ. ಉದಾಹರಣೆಗೆ ಕೋವಿಡ್ ಸಂದರ್ಭದಲ್ಲಿ ಅಂದ್ರೆ ಮಾರ್ಚ್ 2020 ರ ಸಮಯದಲ್ಲಿ ಷೇರು ಮಾರುಕಟ್ಟೆ ಗಣನೀಯ ಕುಸಿತ ಕಂಡಿತ್ತು. ಆ ಸಂದರ್ಭದಲ್ಲಿ ಯಾರು ಲಮ್‌ಸಮ್ ಮೊತ್ತ ಹಾಕಿದ್ದರೋ ಅವರೆಲ್ಲಾ ಈಗ ಉತ್ತಮ ಲಾಭ ಗಳಿಸಿಕೊಂಡಿದ್ದಾರೆ.

ಯಾವಾಗ ಲಮ್‌ಸಮ್ ಆಯ್ಕೆ ಮಾಡಿಕೊಳ್ಳಬೇಕು: ಬಿಸಿನೆಸ್ ನಲ್ಲಿರುವವರು, ಫ್ರೀಲ್ಯಾನ್ಸಿಂಗ್ ಕೆಲಸ ಮಾಡುವವರು ಮತ್ತು ಪ್ರತಿ ತಿಂಗಳು ನಿರ್ದಿಷ್ಟ ಆದಾಯ ಇಲ್ಲದವರು ಈ ಹೂಡಿಕೆ ಆಯ್ಕೆ ಮಾಡುಕೊಳ್ಳುವುದು ಸೂಕ್ತ. ಮಾಸಿಕ ಸಂಬಳ ಪಡೆಯುವವರು ಸಹ ಬೋನಸ್ ಅಥವಾ ಇನ್ಯಾವುದೇ ರೂಪದಲ್ಲಿ ಹೆಚ್ಚುವರಿ ಆದಾಯ ಗಳಿಸಿದರೆ ಇದನ್ನು ಬಳಸಿಕೊಳ್ಳಬಹುದು. ಕನಿಷ್ಠ 5 ವರ್ಷದ ಅವಧಿಗೆ ಈಕ್ವಿಟಿ ಮ್ಯೂಚುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುವ ಉದ್ದೇಶವಿದ್ದರೆ ಲಮ್ ಸಮ್ ಸೂಕ್ತ . ಷೇರು ಮಾರುಕಟ್ಟೆ ಏರಿಕೆಯ ಹಾದಿಯಲ್ಲಿರುವಾಗ ಲಮ್‌ಸಮ್ ಹೂಡಿಕೆ ಮಾಡಿದರೆ ಸರಾಸರಿ ಲಾಭ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ.

(ಲೇಖಕ ಚಾರ್ಟರ್ಡ್ ಅಕೌಂಟೆಂಟ್)

ಸತತ ಎರಡನೇ ವಾರವೂ ಗಳಿಕೆ



ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರ ಏರಿಕೆ ದಾಖಲಿಸಿವೆ. ಜನವರಿ 20ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಅಲ್ಪ ಮೊತ್ತದ ಗಳಿಕೆ ಕಂಡಿವೆ. ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 0.59 ರಷ್ಟು ಹೆಚ್ಚಳ ಕಂಡಿದೆ. ನಿಫ್ಟಿ ಶೇ 0.39 ರಷ್ಟು ಜಿಗಿದಿದೆ. ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ, ಚೀನಾದಲ್ಲಿ ಕೋವಿಡ್ ಲಾಕ್‌ಡೌನ್ ಸಡಿಲ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಚೇತರಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ಬಿಎಸ್‌ಇ ಬಂಡವಾಳ ಸರಕುಗಳ ಸೂಚ್ಯಂಕ ಮತ್ತು ವಿದ್ಯುತ್ ಸೂಚ್ಯಂಕ ತಲಾ ಶೇ 2 ರಷ್ಟು ಗಳಿಸಿಕೊಂಡಿವೆ. ಅನಿಲ-ತೈಲ ಸೂಚ್ಯಂಕ ಮತ್ತು ಮಾಹಿತಿ ತಂತ್ರಜ್ಞಾನ ಸೂಚ್ಯಂಕ ತಲಾ ಸುಮಾರು ಶೇ 2 ರಷ್ಟು ಹೆಚ್ಚಳ ದಾಖಲಿಸಿವೆ. ಬಿಎಸ್‌ಇ ಟೆಲಿಕಾಂ ಮತ್ತು ಆಟೊ ವಲಯ ಶೇ 1 ರಿಂದ ಶೇ 2 ರಷ್ಟು ಕುಸಿದಿವೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಟೋಟಲ್ ಗ್ಯಾಸ್, ಕೋಲ್ ಇಂಡಿಯಾ, ಟೆಕ್ ಮಹೀಂದ್ರ, ಪವರ್ ಗ್ರಿಡ್ ಕಾರ್ಪೊರೇಷನ್ ಆಫ್ ಇಂಡಿಯಾ, ಲಾರ್ಸನ್ ಅಂಡ್ ಟೂಬ್ರೊ ಮತ್ತು ಡಾಬರ್ ಇಂಡಿಯಾ ಗಳಿಕೆ ಕಂಡಿವೆ. ನೈಕಾ, ಅವೆನ್ಯೂ ಸೂಪರ್ ಮಾರ್ಕೆಟ್ಸ್, ಐಸಿಐಸಿಐ ಲೊಂಬಾರ್ಡ್ ಜನರಲ್ ಇನ್ಶೂರೆನ್ಸ್, ಸ್ಟಾರ್ ಹೆಲ್ತ್ ಮತ್ತು ಅಲೈಡ್ ಇನ್ಶೂರೆನ್ಸ್, ಅದಾನಿ ಎಂಟರ್ ಪ್ರೈಸಸ್ ಮತ್ತು ಇಂಡಸ್ ಟವರ್ಸ್ ಕುಸಿದಿವೆ.

ಮುನ್ನೋಟ: ಈ ವಾರ ಎಕ್ಸಿಸ್ ಬ್ಯಾಂಕ್, ಕೆನರಾ ಬ್ಯಾಂಕ್, ಐಡಿಬಿಐ, ಟಾಟಾ ಕಮ್ಯೂನಿಕೇಷನ್ಸ್, ಟಿವಿಎಸ್ ಮೋಟರ್ಸ್, ಬಜಾಜ್ ಆಟೊ, ಟಾಟಾ ಮೋಟರ್ಸ್, ಮಾರುತಿ ಸುಜುಕಿ, ಗೋ ಕಲರ್ಸ್, ಸಿಯೇಟ್ ಲಿ., ಬಜಾಜ್ ಫೈನಾನ್ಸ್, ನಜಾರಾ ಟೆಕ್ನಾಲಜೀಸ್, ಅಪೋಲೊ ಪೈಪ್ಸ್, ಪ್ರೂಡೆಂಟ್, ಶಾಪರ್ಸ್ ಸ್ಟಾಪ್ ಸೇರಿದಂತೆ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸುತ್ತಿವೆ. ಅಮೆರಿಕ ಫೆಡರಲ್ ಬ್ಯಾಂಕ್ ನಿಂದ ಮತ್ತಷ್ಟು ಬಡ್ಡಿ ದರ ಹೆಚ್ಚಳದ ಆತಂಕ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಮಾರಾಟದ ಒತ್ತಡ ಸೇರಿದಂತೆ ಹಲವು ಅಂಶಗಳು ಸೂಚ್ಯಂಕಗಳ ಮೇಲೆ ಪರಿಣಾಮ ಬೀರಲಿವೆ.



ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹550
ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹550

ಸುಧಾ, ಮಯೂರ ಓದಿರಿ

ಚಿನ್ನದ ಇಟಿಎಫ್: ಕುಸಿದ ಹೂಡಿಕೆ

2022ರಲ್ಲಿ ಬಂಡವಾಳ ಒಳಹರಿವು ಶೇ 90ರಷ್ಟು ಇಳಿಕೆ



ಚಿನ್ನದ ಇಟಿಎಫ್ ಖಾತೆಗಳ ವಿವರ

32.09 ಲಕ್ಷ — 2021ರ ಡಿಸೆಂಬರ್ ಅಂತ್ಯಕ್ಕೆ

46.28 ಲಕ್ಷ — 2022ರ ಡಿಸೆಂಬರ್ ಅಂತ್ಯಕ್ಕೆ

ನವದೆಹಲಿ (ಪಿಟಿಐ): ಚಿನ್ನದ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಬಂಡವಾಳ ಹೂಡಿಕೆಯು 2021ಕ್ಕೆ ಹೋಲಿಸಿದರೆ 2022ರಲ್ಲಿ ಶೇ 90ರಷ್ಟು ಕುಸಿತ ಕಂಡಿದೆ.

2021ರಲ್ಲಿ ಹೂಡಿಕೆಯು ₹4,814 ಕೋಟಿಯಷ್ಟು ಆಗಿತ್ತು. ಇದು 2022ರಲ್ಲಿ ₹459 ಕೋಟಿಗೆ ಇಳಿಕೆ ಕಂಡಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಮಾಹಿತಿ ನೀಡಿದೆ.

ಚಿನ್ನದ ದರ ಏರಿಕೆ ಆಗಿರುವುದು ಹಾಗೂ ಹಣದುಬ್ಬರದ ಒತ್ತಡದಿಂದಾಗಿ ಹಲವು ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿದರ ಹೆಚ್ಚಳ ಮಾಡಿರುವ ಕಾರಣಗಳಿಂದಾಗಿ ಒಳಹರಿವು ಭಾರಿ ಪ್ರಮಾಣದಲ್ಲಿ ಕಡಿಮೆ ಆಗಿದೆ ಎಂದು ಅದು ಹೇಳಿದೆ.

ಹೂಡಿಕೆ ಪ್ರಮಾಣ ಇಳಿಕೆ ಕಂಡಿದ್ದರೂ, ಹೂಡಿಕೆಯು ಸಕಾರಾತ್ಮಕವಾಗಿತ್ತು. ಈ ಕಾರಣದಿಂದಾಗಿ ನಿರ್ವಹಣಾ ಸಂಪತ್ತು ಮೌಲ್ಯವು 2022ರ ಡಿಸೆಂಬರ್ ಅಂತ್ಯಕ್ಕೆ ಶೇ 16ರಷ್ಟು ಏರಿಕೆ ಕಂಡು ₹21,455 ಕೋಟಿಗೆ ತಲುಪಿತು. 2021ರ ಡಿಸೆಂಬರ್ ಅಂತ್ಯದಲ್ಲಿ ನಿರ್ವಹಣಾ ಸಂಪತ್ತು ಮೌಲ್ಯ ₹18,405 ಕೋಟಿಯಷ್ಟು ಇತ್ತು ಎಂದು ಅದು ತಿಳಿಸಿದೆ.

ಚಿನ್ನದ ದರ ಹೆಚ್ಚಳವು ಹೂಡಿಕೆದಾರರ ಮೇಲೆ ಒಂದಿಷ್ಟು ಒತ್ತಡ ಉಂಟುಮಾಡಿದೆ. ಬಹಳಷ್ಟು ಮಂದಿ ಹೂಡಿಕೆದಾರರು ಚಿನ್ನದ ದರ ಕಡಿಮೆ ಆಗುವುದಕ್ಕೆ ಕಾಯಲು ಮುಂದಾಗಿದ್ದು, ಹೂಡಿಕೆಯಿಂದ ಹಿಂದೆ ಸರಿದಿದ್ದಾರೆ ಎಂದು ಮಾರ್ನಿಂಗ್‌ಸ್ಟಾರ್ ಇಂಡಿಯಾದ ಹಿರಿಯ ವಿಶ್ಲೇಷಕಿ ಕವಿತಾ ಕೃಷ್ಣನ್ ಹೇಳಿದ್ದಾರೆ.

ದೇಶಿ ಮಟ್ಟದಲ್ಲಿ, ಹೂಡಿಕೆದಾರರು 2022ರಲ್ಲಿ ಷೇರುಗಳ ಖರೀದಿ ಮೇಲೆ ಹೆಚ್ಚಿನ ಬಂಡವಾಳ ತೊಡಗಿಸಿದ್ದಾರೆ. ₹1.6 ಲಕ್ಷ ಕೋಟಿ ಮೊತ್ತದ ಷೇರುಗಳನ್ನು ಖರೀದಿಸಿದ್ದಾರೆ. 2021ರಲ್ಲಿ ಷೇರುಗಳ ಮೇಲಿನ ಹೂಡಿಕೆಯು ₹96,700 ಕೋಟಿಯಷ್ಟು ಇತ್ತು. ವ್ಯವಸ್ಥಿತ ಹೂಡಿಕೆ ಯೋಜನೆಗಳ (ಎಸ್‌ಐಪಿ) ಮೇಲೆಯೂ ಹೂಡಿಕೆ ಹೆಚ್ಚಾಗುತ್ತಿದೆ.

ರಷ್ಯಾ–ಉಕ್ರೇನ್ ಸಮರದಿಂದ ಅನಿಶ್ಚಿತ ಪರಿಸ್ಥಿತಿ ನಿರ್ಮಾಣ ಆಗಿದೆ. ಅಮೆರಿಕದ ಕೇಂದ್ರೀಯ ಬ್ಯಾಂಕ್ ಫೆಡರಲ್ ರಿಸರ್ವ್‌ನ ಹಣಕಾಸು ನೀತಿಯ ಕುರಿತಾದ ಬಿಗಿ ನಿಲುವು ತಳೆದಿದೆ. ಇನ್ನೂ ಹಲವು ಅಂಶಗಳು ದಾಖಲೆ ಪ್ರಮಾಣದಲ್ಲಿ ಬಂಡವಾಳ ಹೊರಹರಿವಿಗೆ ಕಾರಣವಾಗಿವೆ ಎಂದು ಕೃಷ್ಣನ್ ತಿಳಿಸಿದ್ದಾರೆ.

ಸದರ್ನ್ ಟ್ರಾವೆಲ್ಸ್‌ನಿಂದ ಹಾಲಿಡೇ ಮಾರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸದರ್ನ್ ಟ್ರಾವೆಲ್ಸ್ ಕಂಪನಿಯು ಪ್ರವಾಸಿಗರಿಗೆ ‘ಹಾಲಿಡೇ ಮಾರ್ಟ್’ನ ಭಾಗವಾಗಿ ಹಲವು ಕೊಡುಗೆಗಳನ್ನು ಘೋಷಿಸಿದೆ. ಅಲ್ಲದೆ ವಿವಿಧ ನಗರಗಳಲ್ಲಿ ಸೋಮವಾರದಿಂದ ರೋಡ್ ಷೋ ಸಹ ಹಮ್ಮಿಕೊಂಡಿದೆ.

ಅಂತರರಾಷ್ಟ್ರೀಯ ಮತ್ತು ದೇಶಿ ಪ್ರವಾಸ ಕೈಗೊಳ್ಳುವವರಿಗೆ ಭಾರಿ ರಿಯಾಯಿತಿ ನೀಡುವುದಾಗಿ ತಿಳಿಸಿದೆ. ಬುಕಿಂಗ್ ಮಾಡುವವರಿಗೆ ಬೆಳ್ಳಿ ನಾಣ್ಯ, ಕ್ಯಾಷ್ ಬ್ಯಾಕ್ ಒಳಗೊಂಡು ಇನ್ನೂ ಹಲವು ಆಕರ್ಷಕ ಕೊಡುಗೆಗಳು ಇರಲಿವೆ ಎಂದು ಕಂಪನಿ ಹೇಳಿದೆ.

ರೋಡ್ ಷೋ ವೇಳೆ, ಯಾವುದೇ ಪ್ರವಾಸದ ಪ್ಯಾಕೇಜ್ ಬೇಕಿದ್ದರೂ ರಿಯಾಯಿತಿ ದರದಲ್ಲಿ ಬುಕಿಂಗ್ ಮಾಡಬಹುದು. ಪೂರ್ತಿ ಮೊತ್ತವನ್ನು ಪಾವತಿಸಬೇಕಿಲ್ಲ. ಟೋಕನ್ ರೂಪದಲ್ಲಿ ₹5 ಸಾವಿರ ಪಾವತಿಸಿದರೆ ಸಾಕು ಎಂದು ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಎ. ಕೃಷ್ಣ ಮೋಹನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೈಜರ್‌ನ ಲಸಿಕೆ ಬಳಸುವಂತೆ ಪಕ್ಷದ ಮುಖಂಡರು ಒತ್ತಾಯಿಸಿದ ಆರೋಪ

ರಾಜೀವ್ ಚಂದ್ರಶೇಖರ್ ಕ್ಷಮೆ ಕೇಳಲಿ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಫೈಜರ್ ಕಂಪನಿಯ ಕೋವಿಡ್–19 ಲಸಿಕೆ ಬಳಸುವಂತೆ ಕಾಂಗ್ರೆಸ್ ನಾಯಕರು ಒತ್ತಡ ಹೇರಿದ್ದರು’ ಎಂಬ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೇಳಿಕೆಯನ್ನು ಖಂಡಿಸಿರುವ ಕಾಂಗ್ರೆಸ್, ಸಚಿವರು ಕೂಡಲೇ ಕ್ಷಮೆ ಕೇಳಬೇಕು ಎಂದು ಒತ್ತಾಯಿಸಿದೆ.

‘ರಾಜೀವ್ ಚಂದ್ರಶೇಖರ್ ಅವರದು ತಿರುಚಿದ ಹಾಗೂ ದುರುದ್ದೇಶಪೂರಿತ ಹೇಳಿಕೆ. ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಮಾಡುವವರಿಂದ ಇಂಥ ಹೇಳಿಕೆಗಳನ್ನು ನಿರೀಕ್ಷಿಸಬಹುದೇ ಹೊರತು ಸಚಿವರೊಬ್ಬರಿಂದ ಅಲ್ಲ’ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಹೇಳಿದ್ದಾರೆ.

ಈ ಕುರಿತು ಸಚಿವರಿಗೆ ಪತ್ರ ಬರೆದಿರುವ ಜೈರಾಮ್, ‘ಈ ವಿಷಯವಾಗಿ ಕೂಡಲೇ ಕ್ಷಮೆ ಕೇಳಬೇಕು. ಪಕ್ಷದ ಮುಖಂಡರಾದ ರಾಹುಲ್ ಗಾಂಧಿ, ಪಿ.ಚಿದಂಬರಂ ಹಾಗೂ ತಮ್ಮ ವಿರುದ್ಧ ಆರೋಪಿಸಿ ಮಾಡಿರುವ ಟ್ವೀಟ್‌ಅನ್ನು ಅಳಿಸಿ ಹಾಕಬೇಕು. ತಪ್ಪಿದಲ್ಲಿ ನಿಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಸಿದ್ದಾರೆ.

ಟ್ವಿಟರ್‌ನಲ್ಲಿನ ಈ ಪೋಸ್ಟ್‌ಗೆ ಸಂಬಂಧಿಸಿ ಕ್ರಮ ಕೈಗೊಳ್ಳುವಂತೆ ಕಾಂಗ್ರೆಸ್‌ನ ಸಾಮಾಜಿಕ ಮಾಧ್ಯಮ ಹಾಗೂ ಡಿಜಿಟಲ್ ವೇದಿಕೆಗಳ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನಾತೆ ಅವರು ಕೂಡ ಟ್ವಿಟರ್ ಕಂಪನಿಗೆ ಪತ್ರ ಬರೆದಿದ್ದಾರೆ. ಫೈಜರ್ ಲಸಿಕೆ ಪರಿಣಾಮಕಾರಿಯಾಗಿರದ ಕುರಿತು ಕಂಪನಿಯ ಸಿಇಒ ಅವರು ದಾವೋಸ್‌ನಲ್ಲಿ ಪತ್ರಕರ್ತರಿಂದ ಕಠಿಣ ಪ್ರಶ್ನೆಗಳನ್ನು ಎದುರಿಸಿದ್ದರು. ಇದರ ಬೆನ್ನಲ್ಲೇ, ರಾಜೀವ್ ಚಂದ್ರಶೇಖರ್, ‘ಲಸಿಕೆ ಬಳಕೆಗೆ ಸಂಬಂಧಿಸಿ ಕೆಲ ಷರತ್ತುಗಳನ್ನು ಕೈಬಿಡುವಂತೆ ಸರ್ಕಾರವನ್ನು ಫೈಜರ್ ಒತ್ತಾಯಿಸಿತ್ತು. ಅಲ್ಲದೇ, ಕಂಪನಿಯ ಈ ಲಸಿಕೆಯನ್ನು ದೇಶದಲ್ಲಿ ಬಳಕೆಗೆ ಅನುಮೋದಿಸುವಂತೆ ರಾಹುಲ್, ಚಿದಂಬರಂ, ಜೈರಾಮ್ ಒತ್ತಡ ಹೇರುತ್ತಿದ್ದರು ಎಂಬುದನ್ನು ಜನರಿಗೆ ನೆನಪಿಸಲು ಬಯಸುತ್ತೇನೆ’ ಎಂದು ಟ್ವೀಟ್ ಮಾಡಿದ್ದರು.

ಮೃತ ಭಾರತೀಯರ ಗುರುತು ಪತ್ತೆ

ಕಠ್ಮಂಡು (ಪಿಟಿಐ): ‘ಪೊಖರಾದಲ್ಲಿ ನಡೆದಿದ್ದ ವಿಮಾನ ದುರಂತದಲ್ಲಿ ಮೃತಪಟ್ಟಿದ್ದ ಭಾರತೀಯರ ಪೈಕಿ ಮತ್ತೆ ಇಬ್ಬರ ಗುರುತು ಪತ್ತೆಯಾಗಿದೆ’ ಎಂದು ನೇಪಾಳದ ಆರೋಗ್ಯ ಇಲಾಖೆ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ.


‘ದುರಂತದಲ್ಲಿ ಉತ್ತರಪ್ರದೇಶದ ಐವರು ಸಾವಿಗೀಡಾಗಿದ್ದರು. ಈ ಪೈಕಿ ಅಭಿಷೇಕ್ ಕುಶ್ವಾಹ (25) ಮತ್ತು ಅನಿಲ್‌ಕುಮಾರ್ ರಾಜಭರ್ (27) ಅವರ ಗುರುತು ಭಾನುವಾರ ಪತ್ತೆಯಾಗಿದೆ’ ಎಂದು ತ್ರಿಭುವನ್ ವಿಶ್ವವಿದ್ಯಾಲಯ ಆಸ್ಪತ್ರೆಯ ಮೂಲಗಳು ತಿಳಿಸಿವೆ.

‘ಮೃತರ ಪೈಕಿ ಸಂಜಯ್ ಜೈಸ್ವಾಲ್ ಎಂಬುವರ ಮೃತದೇಹವನ್ನು ಅವರ ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಉಳಿದ ನಾಲ್ವರ ಶವಗಳನ್ನು ಸೋಮವಾರ ಅವರ ಕುಟುಂಬದವರಿಗೆ ಒಪ್ಪಿಸಲಾಗುತ್ತದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಕೇರಳದ ಪಾಲಕ್ಕಾಡ್‌ನ ಧೋನಿ ಪ್ರದೇಶದಲ್ಲಿ ಆತಂಕಕ್ಕೆ ಕಾರಣವಾಗಿದ್ದ ‘ಪಿ.ಟಿ. ಸೆವೆನ್ ಎಂಬ ಆನೆಗೆ ಅರಣ್ಯ ಅಧಿಕಾರಿಗಳು ಭಾನುವಾರ ಮಾನಸಿಕ ಸ್ಥಿತಿ ಸ್ಥಿಮಿತಕ್ಕೆ ತರುವ ಔಷಧಗಳನ್ನು ನೀಡಿದರು —ಪಿಟಿಐ ಚಿತ್ರ

‘2047ರ ಹೊತ್ತಿಗೆ ಭಾರತವು ವಿಜ್ಞಾನ ಕ್ಷೇತ್ರದಲ್ಲಿ ಜಗತ್ತಿಗೆ ಮಾದರಿ’



ನಲ್ಲತಂಬಿ ಕಲೈಸೆಲ್ವಿ

ಭೋಪಾಲ್ (ಪಿಟಿಐ): ಭಾರತವು 2047ರ ಹೊತ್ತಿಗೆ ವಿಜ್ಞಾನ, ತಂತ್ರಜ್ಞಾನ ಮತ್ತು ಆವಿಷ್ಕಾರ ಕ್ಷೇತ್ರದಲ್ಲಿ ಜಗತ್ತಿಗೆ ಮಾದರಿಯಾಗಲಿದೆ ಎಂದು ವಿಜ್ಞಾನ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿಯ (ಸಿಎಸ್‌ಐಆರ್) ಮಹಾನಿರ್ದೇಶಕಿ ಡಾ. ನಲ್ಲತಂಬಿ ಕಲೈಸೆಲ್ವಿ ಹೇಳಿದ್ದಾರೆ.

ಎಂಟನೇ ಭಾರತ ಅಂತರ-ರಾಷ್ಟ್ರೀಯ ವಿಜ್ಞಾನ ಉತ್ಸವದಲ್ಲಿ (ಐಐಎಸ್‌ಎಫ್–2022)) ಪಾಲ್ಗೊಳ್ಳಲು ಇಲ್ಲಿಗೆ ಬಂದಿರುವ ಅವರು ಸುದ್ದಿಸಂಸ್ಥೆಗೆ ಈ ವಿಷಯ ತಿಳಿಸಿದ್ದು, 2030ರಲ್ಲಿ ವಿಜ್ಞಾನ ಕ್ಷೇತ್ರದ ಅಗ್ರ ಮೂರು ದೇಶಗಳಲ್ಲಿ ಭಾರತವೂ ಒಂದಾಗಲಿದೆ ಎಂದರು.

ಯುವ ವಿಜ್ಞಾನಿಗಳಿಗೆ ನೀಡುವ ಪ್ರಶಸ್ತಿಗಳನ್ನು ನಿಲ್ಲಿಸಲಾಗಿದೆ ಎಂಬುದನ್ನು ಅಲ್ಲಗಳೆದ ಅವರು, ಮುಂದಿನ ದಿನಗಳಲ್ಲಿ ವಿಜ್ಞಾನ ಕ್ಷೇತ್ರದಲ್ಲಿ ಬಹು ಆಯಾಮದ ಬೆಳವಣಿಗೆಯನ್ನು ಜನರು ಕಾಣಬಹುದು ಎಂದರು.

ವಿಜ್ಞಾನ ಕ್ಷೇತ್ರದಲ್ಲಿ ಭಾರತವು ಆಡಳಿತ ಶಕ್ತಿ ಎಂಬುದನ್ನು 2070 ಹೊತ್ತಿಗೆ ಜಗತ್ತು ಒಪ್ಪಿಕೊಳ್ಳಲಿದೆ ಎಂದೂ ಕಲೈಸೆಲ್ವಿ ಅಭಿಪ್ರಾಯಪಟ್ಟರು.

ಮತಾಂತರಕ್ಕೆ ಒಪ್ಪದ ಹಿಂದೂ ವಿವಾಹಿತೆ ಮೇಲೆ ಅತ್ಯಾಚಾರ

ಕರಾಚಿ (ಪಿಟಿಐ): ಪಾಕಿಸ್ತಾನದ ದಕ್ಷಿಣ ಸಿಂಧ್ ಪ್ರಾಂತ್ಯದಲ್ಲಿ ಅಪಹರಣಕಾರರು ಹಿಂದೂ ವಿವಾಹಿತೆಯನ್ನು ಅಪಹರಿಸಿದ್ದು, ಆಕೆ ಇಸ್ಲಾಂಗೆ ಮತಾಂತರವಾಗಲು ನಿರಾಕರಿಸಿದ್ದಕ್ಕೆ ಅತ್ಯಾಚಾರ ನಡೆಸಿ ಬೆದರಿಕೆ ಹಾಕಿರುವ ಘಟನೆ ನಡೆದಿದೆ.

ಹಿಂದೂ ಯುವತಿಯರ ಅಪಹರಣ ಮತ್ತು ಬಲವಂತದ ಮತಾಂತರ ಘಟನೆಗಳು ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹೆಚ್ಚು ವರದಿಯಾಗುತ್ತಿವೆ.

‘ಇಬ್ರಾಹಿಂ ಮಾಂಗ್ರಿಯೊ, ಪನ್ಹೋ ಮಾಂಗ್ರಿಯೊ ಮತ್ತು ಅವರ ಸಹಚರರು ಅಪಹರಿಸಿ, ಮತಾಂತರಕ್ಕೆ ಒತ್ತಾಯಿಸಿದರು. ಇದಕ್ಕೆ ನಿರಾಕರಿಸಿದ್ದಕ್ಕೆ ಉಮರ್‌ಕೋಟ್ ಜಿಲ್ಲೆಯ ಸಮಾರೊ ಪಟ್ಟಣದಲ್ಲಿ ಮೂರು ದಿನಗಳ ಕಾಲ ಅತ್ಯಾಚಾರ ಎಸಗಿ, ಬೆದರಿಕೆ ಹಾಕಿದರು’ ಎಂದು ಅಪಹರಣಕಾರರಿಂದ ತಪ್ಪಿಸಿಕೊಂಡು ಬಂದಿರುವ ಮಹಿಳೆ ಆರೋಪಿಸಿದ್ದಾರೆ. ಈ ಮಹಿಳೆ ತನ್ನ ಹೇಳಿಕೆಯ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ಮಹಿಳೆ ಮತ್ತು ಆಕೆಯ ಕುಟುಂಬದವರು ಪೊಲೀಸ್ ಠಾಣೆ ಎದುರು ಕುಳಿತಿದ್ದಾರೆ. ಆದರೆ, ಆರೋಪಿಗಳ ಮೇಲೆ ಪೊಲೀಸರು ಈವರೆಗೆ ಪ್ರಕರಣ ದಾಖಲಿಸಿಲ್ಲ ಎಂದು ಸ್ಥಳೀಯ ಹಿಂದೂ ನಾಯಕರು ಹೇಳಿದ್ದಾರೆ.

ಸಡನ್ ಡೆತ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಸೋಲು: ಪ್ರಶಸ್ತಿ ರೇಸ್‌ನಿಂದ ಹೊರಕ್ಕೆ

ಕ್ರಾಸ್‌ಓವರ್ ತಡೆ ದಾಟದ ಭಾರತ

ಭುವನೇಶ್ವರ (ಪಿಟಿಐ): ಎಫ್‌ಐಎಚ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯಲ್ಲಿ ಭಾರತ ತಂಡದ ಅಭಿಯಾನ ಭಾನುವಾರ ಅಂತ್ಯಗೊಂಡಿದೆ.

ಇಲ್ಲಿಯ ಕಳಿಂಗ ಕ್ರೀಡಾಂಗಣದಲ್ಲಿ ನಡೆದ ಕ್ರಾಸ್‌ಓವರ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು ಸಡನ್ ಡೆತ್‌ನಲ್ಲಿ 5–4ರಿಂದ ಭಾರತದ ವಿರುದ್ಧ ಗೆದ್ದು ಎಂಟರಘಟ್ಟ ತಲುಪಿತು. ಗ್ಯಾಲರಿಯಲ್ಲಿದ್ದ ಭಾರತದ 15 ಸಾವಿರಕ್ಕೂ ಅಭಿಮಾನಿಗಳ ಹಾರೈಕೆ ಫಲಿಸಲಿಲ್ಲ.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು ತಲಾ ಮೂರು ಗೋಲು ಗಳಿಸಿದ್ದವು. ಹೀಗಾಗಿ ಪೆನಾಲ್ಟಿ ಶೂಟೌಟ್ ಮೊರೆಹೋಗಲಾಗಿತ್ತು. ಶೂಟೌಟ್‌ನಲ್ಲೂ 3–3 ರಲ್ಲಿ ಸಮಬಲ ಸಾಧಿಸಿದ್ದರಿಂದ, ಸಡನ್ ಡೆತ್‌ನಲ್ಲಿ ವಿಜೇತರನ್ನು ನಿರ್ಧರಿಸಲಾಯಿತು. ರ‍್ಯಾಂಕಿಂಗ್‌ನಲ್ಲಿ ಆರನೇ ಸ್ಥಾನದಲ್ಲಿರುವ ಭಾರತ ತನಗಿಂತ ಕೆಳ ರ‍್ಯಾಂಕಿನ ಕಿವೀಸ್ (12) ಎದುರು ಸಾಧಾರಣ ಸಾಮರ್ಥ್ಯ ತೋರಿತು.

ಮೊದಲಾರ್ಧದಲ್ಲಿ 2–1 ರಿಂದ ಮುನ್ನಡೆ ಗಳಿಸಿದ್ದ ಭಾರತ ಅದೇ ಲಯ ಉಳಿಸಿಕೊಳ್ಳುವಲ್ಲಿ ವಿಫಲವಾಯಿತು.

ನಿಗದಿತ ಅವಧಿಯಲ್ಲಿ ಭಾರತ ತಂಡಕ್ಕಾಗಿ ಲಲಿತ್ ಉಪಾಧ್ಯಾಯ (17ನೇ ನಿಮಿಷ) ಮೊದಲ ಗೋಲು ಹೊಡೆದರು. ಸುಖಜೀತ್ ಸಿಂಗ್ (24ನೇ ನಿ.) ಮತ್ತು ವರುಣ್ ಕುಮಾರ್ (40ನೇ ನಿ.) ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

ನ್ಯೂಜಿಲೆಂಡ್ ಪರ ಸ್ಯಾಮ್ ಲೇನ್ (28ನೇ ನಿ.) ಫೀಲ್ಡ್ ಗೋಲು ದಾಖಲಿಸಿದರೆ, ಕೇನ್ ರಸೆಲ್ (43ನೇ ನಿ.) ಮತ್ತು ಸೀನ್ ಫೈಂಡ್ಲೆ (49ನೇ ನಿ.) ಪೆನಾಲ್ಟಿ ಕಾರ್ನರ್‌ಗಳನ್ನು ಗೋಲುಗಳಲ್ಲಿ ಪರಿವರ್ತಿಸಿದರು.



ಪಂದ್ಯ ಸೋತ ನಿರಾಸೆಯಲ್ಲಿ ಭಾರತ ತಂಡದ ಆಟಗಾರರು– ಪಿಟಿಐ ಚಿತ್ರ



ಭಾರತ ಪೆನಾಲ್ಟಿ ಕಾರ್ನರ್ ಅವಕಾಶಗಳನ್ನು ಗೋಲುಗಳಲ್ಲಿ ಪರಿವರ್ತಿಸುವಲ್ಲಿ ಎಡವಿತು. ದೊರೆತ 11 ಅವಕಾಶಗಳಲ್ಲಿ ಕೇವಲ ಎರಡು ಬಾರಿ ಯಶಸ್ಸು ಸಾಧಿಸಿತು. ಆದರೆ ಎದುರಾಳಿ ತಂಡ ಎರಡೇ ಅವಕಾಶ ದೊರೆತರೂ ಎರಡನ್ನೂ ಗೋಲಿನಲ್ಲಿ ಪರಿವರ್ತಿಸಿತು.

1975ರಲ್ಲಿ ಅಜಿತ್ ಪಾಲ್ ಸಿಂಗ್ ನೇತೃತ್ವದ ತಂಡ ಚಾಂಪಿಯನ್ ಆಗಿತ್ತು. ಆ ಬಳಿಕ ಭಾರತಕ್ಕೆ ಪದಕ ಗೆಲ್ಲಲು ಆಗಿಲ್ಲ. 48 ವರ್ಷಗಳ ನಂತರ ಪದಕ ಗೆಲ್ಲುವ ಕನಸು ಈಡೇರಲಿಲ್ಲ.

ಕ್ವಾರ್ಟರ್‌ಫೈನಲ್‌ನಲ್ಲಿ ನ್ಯೂಜಿಲೆಂಡ್ ತಂಡವು ಹಾಲಿ ಚಾಂಪಿಯನ್ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ಇಂದಿನ ಪಂದ್ಯಗಳು (ಕ್ರಾಸ್ ಓವರ್)

ಜರ್ಮನಿ Vs ಫ್ರಾನ್ಸ್
ಆರಂಭ: ಸಂಜೆ 4.30

ಅರ್ಜೆಂಟೀನಾ Vs ಕೊರಿಯಾ
ಆರಂಭ: ಸಂಜೆ 7

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಹಾಕಿ: ಎಂಟರ ಘಟ್ಟಕ್ಕೆ ಸ್ಪೇನ್

ಭುವನೇಶ್ವರ (ಪಿಟಿಐ): ಸ್ಪೇನ್ ತಂಡವು ಮಲೇಷ್ಯಾ ತಂಡವನ್ನು ಮಣಿಸಿ ವಿಶ್ವಕಪ್ ಹಾಕಿ ಟೂರ್ನಿಯ ಕ್ವಾರ್ಟರ್‌ಫೈನಲ್ ತಲುಪಿತು.

ಭಾನುವಾರ ಇಲ್ಲಿ ನಡೆದ ಕ್ರಾಸ್‌ಓವರ್ ಪಂದ್ಯದಲ್ಲಿ ಸ್ಪೇನ್ ಪೆನಾಲ್ಟಿ ಶೂಟೌಟ್‌ನಲ್ಲಿ 4–3ರಿಂದ ಗೆಲುವು ಸಾಧಿಸಿತು.

ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2ರಿಂದ ಸಮಬಲ ಸಾಧಿಸಿದ್ದವು. ಹೀಗಾಗಿ ಶೂಟೌಟ್ ಮೊರೆ ಹೋಗಲಾಗಿತ್ತು. ಅಲ್ಲಿ ಒತ್ತಡ ಮೀರಿ ಗೆಲ್ಲುವಲ್ಲಿ ಸ್ಪೇನ್ ಯಶಸ್ವಿಯಾಯಿತು.

ಮಲೇಷ್ಯಾ ಪರ ಸಾರಿ ಫೈಜಲ್ (34ನೇ ನಿ.) ಮತ್ತು ಸಿಲ್ವೇರಿಯಸ್ ಶೆಲ್ಲೊ (48ನೇ ನಿ.) ಗೋಲು ಗಳಿಸಿದರೆ, ಸ್ಪೇನ್ ತಂಡಕ್ಕಾಗಿ ಮಿರಾಲೆಸ್ ಮಾರ್ಕ್ (40ನೇ ನಿ.) ಮತ್ತು ಜಿಸ್ಪೆಟ್ ಜೇವಿಯರ್ (41ನೇ ನಿ.) ಚೆಂಡನ್ನು ಗುರಿ ಸೇರಿಸಿದ್ದರು.

ಸ್ಪೇನ್ ತಂಡವು ಎಂಟರಘಟ್ಟದಲ್ಲಿ ಆಸ್ಟ್ರೇಲಿಯಾ ಸವಾಲು ಎದುರಿಸಲಿದೆ.

ಕರ್ನಾಟಕ ಬಾಲಕರಿಗೆ ಗೆಲುವು

72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕದ ಬಾಲಕರ ತಂಡದವರು ಇಲ್ಲಿ ನಡೆಯುತ್ತಿರುವ 72ನೇ ರಾಷ್ಟ್ರೀಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಸತತ ಎರಡನೇ ಗೆಲುವು ಸಾಧಿಸಿದರು. ಆದರೆ ಬಾಲಕಿಯರಿಗೆ ನಿರಾಸೆ ಎದುರಾಯಿತು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಬಾಲಕರ ವಿಭಾಗದ ಲೀಗ್ ಪಂದ್ಯದಲ್ಲಿ ಕರ್ನಾಟಕ 67–55 ರಲ್ಲಿ ಮಹಾರಾಷ್ಟ್ರ ತಂಡವನ್ನು ಮಣಿಸಿತು. ವಿರಾಮದ ವೇಳೆಗೆ ಆತಿಥೇಯ ತಂಡ 39–17 ರಲ್ಲಿ ಮುನ್ನಡೆ ಸಾಧಿಸಿತ್ತು. ಕರ್ನಾಟಕದ ವಿಷ್ಣು 24 ಪಾಯಿಂಟ್ಸ್ ಗಳಿಸಿ ಮಿಂಚಿದರು. ಕೆ.ಲಿಂಗೇಶ್ 14, ಸಂಕೇತ್ ಹಾಗೂ ಶಶಾಂಕ್ ಗೌಡ ತಲಾ 9 ಪಾಯಿಂಟ್ಸ್ ತಂದಿತ್ತರು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕ 62–68 ರಲ್ಲಿ ಮಹಾರಾಷ್ಟ್ರ ಕೈಯಲ್ಲಿ ಸೋತಿತು. ತಲಾ 18 ಪಾಯಿಂಟ್ಸ್ ಗಳಿಸಿದ ಮಾನಸಿ ನಿರ್ಮಲಕರ್ ಮತ್ತು ಆನ್ಯಾ ಭಾಸ್ಕರ್ ಅವರು ಮಹಾರಾಷ್ಟ್ರ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಆತಿಥೇಯ ತಂಡದ ಪರ ಮೇಖಲಾ ಗೌಡ 13, ಆದ್ಯಾ ಗೌಡ 10 ಪಾಯಿಂಟ್ಸ್ ತಂದಿತ್ತರು.

ತಮಿಳುನಾಡಿನ ಪುರುಷರ ಹಾಗೂ ಮಹಿಳೆಯರ ತಂಡಗಳು ಸತತ ಎರಡನೇ ಗೆಲುವು ಪಡೆದು ಎಂಟರಘಟ್ಟದಲ್ಲಿ ಸ್ಥಾನ ಖಚಿತಪಡಿಸಿಕೊಂಡವು.



ಕರ್ನಾಟಕದ ಎಂ.ಬಿ.ಶಶಾಂಕ್ ಗೌಡ (ಎಡದಿಂದ ಎರಡನೆಯವರು) ಪಾಯಿಂಟ್ ಗಳಿಸಲು ಪ್ರಯತ್ನಿಸಿದರು –ಪ್ರಜಾವಾಣಿ ಚಿತ್ರ/ ಬಿ.ಎಚ್.ಶಿವಕುಮಾರ್

ಪುರುಷರ ವಿಭಾಗದಲ್ಲಿ ತಮಿಳುನಾಡು 88–71 ರಲ್ಲಿ ಮಿಜೊರಾಂ ವಿರುದ್ಧ ಗೆದ್ದರೆ, ಮಹಿಳೆಯರು 133–27 ರಲ್ಲಿ ನಾಗಾಲ್ಯಾಂಡ್ ತಂಡವನ್ನು ಮಣಿಸಿದರು.

ಪುರುಷರ ವಿಭಾಗದ ಇತರ ಪಂದ್ಯಗಳಲ್ಲಿ ಚಂಡೀಗಢ 91–65 ರಲ್ಲಿ ಒಡಿಶಾ ವಿರುದ್ಧ; ರಾಜಸ್ಥಾನ 84–63 ರಲ್ಲಿ ಕೇರಳ ವಿರುದ್ಧ; ಉತ್ತರಾಖಂಡ 93–78 ರಲ್ಲಿ ದೆಹಲಿ ವಿರುದ್ಧ; ಪಂಜಾಬ್ 99–45 ರಲ್ಲಿ ಮಣಿಪುರ ವಿರುದ್ಧ; ಮಧ್ಯಪ್ರದೇಶ 82–70 ರಲ್ಲಿ ಆಂಧ್ರಪ್ರದೇಶ ವಿರುದ್ಧ; ಉತ್ತರ ಪ್ರದೇಶ 123–36 ರಲ್ಲಿ ಅಸ್ಸಾಂ ವಿರುದ್ಧವೂ ಜಯಿಸಿದವು.

ಮಹಿಳೆಯರ ವಿಭಾಗದ ಪಂದ್ಯಗಳಲ್ಲಿ ಪಶ್ಚಿಮ ಬಂಗಾಳ 125–32 ರಲ್ಲಿ ಮೇಘಾಲಯ ವಿರುದ್ಧ; ಕೇರಳ 65–62 ರಲ್ಲಿ ಮಧ್ಯಪ್ರದೇಶ ವಿರುದ್ಧ; ಚಂಡೀಗಢ 98–48 ರಲ್ಲಿ ಉತ್ತರಾಖಂಡ ವಿರುದ್ಧ; ಛತ್ತೀಸ್‌ಗಢ 115–20 ರಲ್ಲಿ ಅಸ್ಸಾಂ ವಿರುದ್ಧ; ಉತ್ತರ ಪ್ರದೇಶ 95–82 ರಲ್ಲಿ ಹರಿಯಾಣ ವಿರುದ್ಧ ಗೆದ್ದವು.

ಯಾವುದೇ ಚಟುವಟಿಕೆ ನಡೆಸದಂತೆ ಸೂಚನೆ

ಡಬ್ಲ್ಯುಎಫ್‌ಐ ತುರ್ತು ಸಭೆ ರದ್ದು

ಅಯೋಧ್ಯಾ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಭಾನುವಾರ ಇಲ್ಲಿ ಆಯೋಜಿಸಲು ಉದ್ದೇಶಿಸಿದ್ದ ತುರ್ತು ಸಭೆ, ಕ್ರೀಡಾ ಸಚಿವಾಲಯದ ಸೂಚನೆ ಹಿನ್ನೆಲೆಯಲ್ಲಿ ರದ್ದುಗೊಂಡಿದೆ.

ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮತ್ತು ಫೆಡರೇಷನ್ ವಿರುದ್ಧ ಖ್ಯಾತನಾಮ ಕುಸ್ತಿಪಟುಗಳು ಮಾಡಿದ್ದ ಆರೋಪಗಳ ಬಗ್ಗೆ ಚರ್ಚಿಸಲು ಡಬ್ಲ್ಯುಎಫ್‌ಐ ಸಭೆ ನಡೆಸಲು ನಿರ್ಧರಿಸಿತ್ತು. ಈ ಸಭೆಯ ಬಳಿಕ ಬ್ರಿಜ್‌ಭೂಷಣ್ ಅವರು ಪತ್ರಿಕಾಗೋಷ್ಠಿ ನಡೆಸುವರು ಎಂದು ಅವರ ಪುತ್ರ ಪ್ರತೀಕ್ ಶುಕ್ರವಾರ ಹೇಳಿದ್ದರು.

ಆದರೆ ಕುಸ್ತಿಪಟುಗಳ ಆರೋಪಗಳ ಹಿನ್ನೆಲೆಯಲ್ಲಿ ಕ್ರಮ ಕೈಗೊಂಡಿದ್ದ ಕ್ರೀಡಾ ಸಚಿವಾಲಯ, ಮುಂದಿನ ಆದೇಶದವರೆಗೆ ಯಾವುದೇ ಚಟುವಟಿಕೆ ನಡೆಸದಂತೆ ಫೆಡರೇಷನ್‌ಗೆ ಸೂಚಿಸಿತ್ತು. ತನಿಖೆ ಕೊನೆಗೊಳ್ಳುವವರೆಗೆ ಅಧಿಕಾರದಿಂದ ದೂರವುಳಿಯುವಂತೆ ಬ್ರಿಜ್‌ಭೂಷಣ್ ಅವರಿಗೆ ತಿಳಿಸಿತ್ತು.

ಫೆಡರೇಷನ್‌ನ ಸಹಾಯಕ ಕಾರ್ಯದರ್ಶಿ ವಿನೋದ್ ತೋಮರ್ ಅವರನ್ನು ಕ್ರೀಡಾ ಸಚಿವಾಲಯ ಶನಿವಾರ ಅಮಾನತುಗೊಳಿಸಿತ್ತು. ಉತ್ತರ ಪ್ರದೇಶದ ಗೊಂಡಾದಲ್ಲಿ ಆಯೋಜಿಸಿರುವ ರ‍್ಯಾಂಕಿಂಗ್ ಕುಸ್ತಿ ಸ್ಪರ್ಧೆಯನ್ನು ಸ್ಥಗಿತಗೊಳಿಸುವಂತೆಯೂ ಸೂಚಿಸಿತ್ತು.

‘ಡಬ್ಲ್ಯುಎಫ್‌ಐನ ದೈನಂದಿನ ಚಟುವಟಿಕೆಗಳನ್ನು ನೋಡಿಕೊಳ್ಳಲು ಮೇಲುಸ್ತುವಾರಿ ಸಮಿತಿ ನೇಮಿಸಲಾಗುವುದು. ಹಾಲಿ ಆಡಳಿತವು ಯಾವುದೇ ಚಟುವಟಿಕೆ ನಡೆಸುವಂತಿಲ್ಲ’ ಎಂದು ಕ್ರೀಡಾ ಸಚಿವಾಲಯ ಶನಿವಾರ ಹೊರಡಿಸಿದ್ದ ಪ್ರಕಟಣೆಯಲ್ಲಿ ತಿಳಿಸಿತ್ತು.

ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟುಗಳಾದ ರವಿ ದಹಿಯಾ, ಬಜರಂಗ್ ಪೂನಿಯಾ, ಸಾಕ್ಷಿ ಮಲಿಕ್, ವಿಶ್ವ ಚಾಂಪಿಯನ್‌ಷಿಪ್‌ನ ಪದಕ ವಿಜೇತರಾದ ವಿನೇಶಾ ಫೋಗಟ್ ಮತ್ತು ದೀಪಕ್ ಪೂನಿಯಾ ಅವರು ಬ್ರಿಜ್‌ಭೂಷಣ್ ವಿರುದ್ಧ ಲೈಂಗಿಕ ದೌರ್ಜನ್ಯ ಸೇರಿದಂತೆ ವಿವಿಧ ಆರೋಪಗಳನ್ನು ಮಾಡಿದ್ದರು.

ಹಾಕಿ: ದರ್ಶನ್ ಹ್ಯಾಟ್ರಿಕ್ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದರ್ಶನ್ ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕರ್ನಾಟಕ ಫಾರೆಸ್ಟ್ ಸ್ಪೋರ್ಟ್ಸ್ ಬೋರ್ಡ್ ಸೊಸೈಟಿ (ಕೆಎಫ್‌ಎಸ್‌ಬಿಎಸ್) ತಂಡವು ಕೆಎಸ್‌ಎಚ್‌ಎ ಎ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಕೆಎಫ್‌ಎಸ್‌ಬಿಎಸ್ 3–0ಯಿಂದ ರೈಸಿಂಗ್ ಸ್ಟಾರ್ ಹಾಕಿ ಕ್ಲಬ್ ಎದುರು ಗೆದ್ದಿತು. ದರ್ಶನ್ 20, 28 ಮತ್ತು 43ನೇ ನಿಮಿಷಗಳಲ್ಲಿ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಎಚ್‌ಎಂಟಿ ಬಿ1 ತಂಡವು 6–4ರಿಂದ ಓಂ ಸಾಯಿ ಹಾಕಿ ಕ್ಲಬ್ ಎದುರು ಗೆದ್ದಿತು. ಎಚ್‌ಎಂಟಿ ಪರ ಮೊಸಿನ್ (14 ಮತ್ತು 50ನೇ ನಿ.) ಎರಡು ಗೋಲು ಗಳಿಸಿದರು. ತೇಸ್ವಿನ್ (9ನೇ ನಿ.), ಕಾರ್ತಿಕ್ (17ನೇ ನಿ.), ಅಖಿಲ್ (26ನೇ ನಿ.) ಮತ್ತು ಅಧುಲ್ (36ನೇ ನಿ.) ವಿಜೇತ ತಂಡದ ಪರ ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಓ ಸಾಯಿ ಪರ ಯಶ್ವಿನ್ (12ನೇ ನಿ.), ಅರುಣ್ (28, 47ನೇ ನಿ.) ಮತ್ತು ಕಿರಣ್ (59ನೇ ನಿ.) ಗೋಲು ಹೊಡೆದರು.

ಸೋಮವಾರ ನಡೆಯುವ ಪಂದ್ಯಗಳಲ್ಲಿ ಓಂ ಸಾಯಿ ಧಾರವಾಡ–ಬೆಂಗಳೂರು ಯುನೈಟೆಡ್ ಹಾಕಿ ಕ್ಲಬ್, ರೈಸಿಂಗ್ ಸ್ಟಾರ್ – ಬಾಂಬರ್ಸ್ ಕ್ಲಬ್ ಸೆಣಸಲಿವೆ.

ಕ್ರಿಕೆಟ್: ಕರ್ನಾಟಕ ಸಾಧಾರಣ ಮೊತ್ತ

ಮೈಸೂರು: ಮುಕುಲ್ ನೇಗಿ ಅಮೋಘ ಬೌಲಿಂಗ್‌ನಿಂದಾಗಿ ಕರ್ನಾಟಕ ತಂಡವು ಭಾನುವಾರ ಇಲ್ಲಿನ ಮಾನಸಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆರಂಭವಾದ ಸಿ.ಕೆ.ನಾಯ್ಡು ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಹಿಮಾಚಲಪ್ರದೇಶದ ಎದುರು ಸಾಧಾರಣ ಮೊತ್ತ ಪೇರಿಸಿತು.

ಮುಕುಲ್ ನೇಗಿ (36ಕ್ಕೆ 5) ಅವರ ಮಿಂಚಿನ ಬೌಲಿಂಗ್ ದಾಳಿಗೆ ಕರ್ನಾಟಕ ತಂಡವು ನಲುಗಿತು. ಎ.ಎ.ಲೋಚನ್ (29 ರನ್), ಕೆ.ವಿ. ಅನಿಷ್ (30) ಹೊರತುಪಡಿಸಿದರೆ ಉಳಿದ ಆಟಗಾರರು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ಇರಲಿಲ್ಲ. ದಿನದಾಟದ ಮುಕ್ತಾಯಕ್ಕೆ ಹಿಮಾಚಲ 1 ವಿಕೆಟ್ ಕಳೆದುಕೊಂಡು 24 ರನ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 77.4 ಓವರ್‌ಗಳಲ್ಲಿ 166 (ಕೆ.ವಿ.ಅನಿಷ್ 30, ಮುಕುಲ್ ನೇಗಿ 36ಕ್ಕೆ 5). ಹಿಮಾಚಲ ಪ್ರದೇಶ 7 ಓವರ್‌ಗಳಲ್ಲಿ 1 ವಿಕೆಟ್ ನಷ್ಟಕ್ಕೆ 24 (ವೈಭವ್ ಬ್ಯಾಟಿಂಗ್ 14, ಆರ್.ಐ.ಠಾಕೂರ್ ಬ್ಯಾಟಿಂಗ್ 1)



ಗೆದ್ದ ಸಂಭ್ರಮದಲ್ಲಿ ಕೊರಿಯಾದ ಆನ್ ಸೆಯೊಂಗ್ –ಪಿಟಿಐ ಚಿತ್ರ

ವಿತಿಸರನ್, ಸೆಯೊಂಗ್‌ಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಥಾಯ್ಲೆಂಡ್‌ನ ಕುನ್ಲಾವುತ್ ವಿತಿಸರನ್ ಮತ್ತು ಕೊರಿಯಾದ ಆನ್ ಸೆಯೊಂಗ್ ಅವರು ಇಂಡಿಯಾ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್‌ನಲ್ಲಿ ಕುನ್ಲಾವುತ್ 22–20, 10–21, 21–12 ರಲ್ಲಿ ಒಲಿಂಪಿಕ್ ಚಾಂಪಿಯನ್ ಆಗಿರುವ ಡೆನ್ಮಾರ್ಕ್‌ನ ವಿಕ್ಟರ್ ಅಕ್ಸೆಲ್ಸನ್ ವಿರುದ್ಧ ಗೆದ್ದರು. ಮಹಿಳೆಯರ ವಿಭಾಗದಲ್ಲಿ ಸೆಯೊಂಗ್ 15–21, 21–16, 21–12 ರಲ್ಲಿ ಜಪಾನ್‌ನ ಅಕಾನೆ ಯಮಗುಚಿ ಅವರನ್ನು ಮಣಿಸಿದರು.

ಕುನ್ಲಾವುತ್ ಅವರಿಗೆ ದೊರೆತ ಮೊದಲ ಸೂಪರ್ 750 ಪ್ರಶಸ್ತಿ ಇದಾಗಿದೆ. 64 ನಿಮಿಷ ನಡೆದ ಫೈನಲ್‌ನಲ್ಲಿ ಅವರು ಚುರುಕಿನ ಆಟವಾಡಿದರು.

ಚೀನಾದ ಲಿಯಾಂಗ್ ವಿ ಕೆಂಗ್–ವಾಂಗ್ ಚಾಂಗ್ ಜೋಡಿ 14–21, 21–19, 21–18 ರಲ್ಲಿ ಮಲೇಷ್ಯಾದ ಆ್ಯರನ್ ಚಿಯಾ– ಸೊ ವೂ ಯಿಕ್ ವಿರುದ್ಧ ಗೆದ್ದು ಪುರುಷರ ಡಬಲ್ಸ್ ವಿಭಾಗದಲ್ಲಿ ಚಾಂಪಿಯನ್ ಆಯಿತು.

ಮಿಶ್ರ ಡಬಲ್ಸ್‌ನಲ್ಲಿ ಚೀನಾದ ವಾಂಗ್ ಯಿ ಲಿಯು– ಹುವಾಂಗ್ ಡಾಂಗ್ ಪಿಂಗ್ ಜೋಡಿ ಜಪಾನ್‌ನ ಯುಟ ವತನಾಬೆ– ಅರಿಸಾ ಹಿಗಶಿನೊ ಅವರನ್ನು ಎದುರಿಸಬೇಕಿತ್ತು. ಲಿಯು ಅನಾರೋಗ್ಯಕ್ಕೆ ಒಳಗಾದ್ದರಿಂದ ಚೀನಾದ ಜೋಡಿ ಹಿಂದೆ ಸರಿಯಿತು. ಜಪಾನ್ ಜೋಡಿ ಚಾಂಪಿಯನ್ ಆಯಿತು.

ಮಹಿಳೆಯರ ಡಬಲ್ಸ್‌ನಲ್ಲಿ ಚೀನಾದ ಜಿಯಾ ಯಿ ಫಾನ್ ಜತೆ ಆಡಬೇಕಿದ್ದ ಚೆನ್ ಕ್ವಿಂಗ್ ಚೆನ್ ಅನಾರೋಗ್ಯಕ್ಕೆ ಒಳಗಾದ್ದರಿಂದ ಚೀನಾದ ಜೋಡಿ ಹಿಂದೆ ಸರಿಯಿತು. ವಾಕ್‌ಓವರ್ ಪಡೆದ ಜಪಾನ್‌ನ ನಮಿ ಮತ್ಸುಯಮ– ಚಿಹರು ಶಿದಾ ಪ್ರಶಸ್ತಿ ಗೆದ್ದರು.

ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿ: ಕ್ವಾರ್ಟರ್‌ಫೈನಲ್‌ಗೆ ರಿಬಾಕಿನಾ

ಇಗಾ, ಕೊಕೊ ಗಾಫ್‌ಗೆ ಆಘಾತ

ಮೆಲ್ಬರ್ನ್ (ಎಎಫ್‌ಪಿ): ಅಗ್ರಶ್ರೇಯಾಂಕದ ಆಟಗಾರ್ತಿ ಇಗಾ ಶ್ವಾಂಟೆಕ್ ಮತ್ತು ಅಮೆರಿಕದ ಯುವ ಪ್ರತಿಭೆ ಕೊಕೊ ಗಾಫ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯಿಂದ ಭಾನುವಾರ ಹೊರಬಿದ್ದರು.

ರಾಡ್ ಲೇವರ್ ಅರೆನಾದಲ್ಲಿ ನಡೆದ ಮಹಿಳಾ ಸಿಂಗಲ್ಸ್ ವಿಭಾಗದ 16ರ ಘಟ್ಟದ ಪಂದ್ಯದಲ್ಲಿ ಇಗಾ 5–7, 2–6ರಿಂದ ವಿಂಬಲ್ಡನ್ ಚಾಂಪಿಯನ್ ಕಜಕಸ್ತಾನದ ಎಲೆನಾ ರಿಬಾಕಿನಾ ಎದುರು ಪರಾಭವಗೊಂಡರು. ಶ್ವಾಂಟೆಕ್ ಅವರು 2022ರ ಫ್ರೆಂಚ್ ಓಪನ್ ಮತ್ತು ಅಮೆರಿಕ ಓಪನ್ ಟೂರ್ನಿಯ ಚಾಂಪಿಯನ್ ಆಗಿದ್ದರು.

ಇಗಾ ಅವರ ಸೋಲಿನೊಂದಿಗೆ 1968ರ ಬಳಿಕ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಪುರುಷ ಮತ್ತು ಮಹಿಳಾ ಸಿಂಗಲ್ಸ್‌ನ ಅಗ್ರ ಎರಡು ಶ್ರೇಯಾಂಕಿತರು ಕ್ವಾರ್ಟರ್‌ಫೈನಲ್‌ಗೂ ಮೊದಲೇ ಸೋಲು ಅನುಭವಿಸಿದಂತಾಗಿದೆ.

ಮಹಿಳಾ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕ ಹೊಂದಿದ್ದ ಟ್ಯೂನಿಷಿಯಾದ ಆನ್ಸ್ ಜಬೇರ್ ಅವರು ಎರಡನೇ ಸುತ್ತಿನಲ್ಲೇ ನಿರಾಸೆ ಅನುಭವಿಸಿದ್ದರು. ಪುರುಷರ ಸಿಂಗಲ್ಸ್‌ನಲ್ಲಿ ಅಗ್ರಶ್ರೇಯಾಂಕದ ಸ್ಪೇನ್‌ನ ರಫೆಲ್ ನಡಾಲ್ ಮತ್ತು ಎರಡನೇ ಶ್ರೇಯಾಂಕದ, ನಾರ್ವೆಯ ಕ್ಯಾಸ್ಪರ್ ರೂಡ್ ಕೂಡ ಎರಡನೇ ಸುತ್ತಿನಲ್ಲೇ ಸೋಲು ಕಂಡಿದ್ದರು.

22ನೇ ಶ್ರೇಯಾಂಕದ ರಿಬಾಕಿನಾ ಅವರು ಎಂಟರಘಟ್ಟದ ಪಂದ್ಯದಲ್ಲಿ ಲಾಟ್ವಿಯಾದ ಎಲೆನಾ ಒಸ್ತಪೆಂಕೊ ಅವರನ್ನು ಎದುರಿಸುವರು. 17ನೇ ಶ್ರೇಯಾಂಕದ ಒಸ್ತಪೆಂಕೊ ಪ್ರೀಕ್ವಾರ್ಟರ್‌ನ ಇನ್ನೊಂದು ಸೆಣಸಾಟದಲ್ಲಿ 7-5, 6-3ರಿಂದ ಏಳನೇ ಶ್ರೇಯಾಂಕದ ಗಾಫ್ ಅವರನ್ನು ಮಣಿಸಿದರು. 18 ವರ್ಷದ ಗಾಫ್ ಪಂದ್ಯದ ಬಳಿಕ ನಡೆದ ಪತ್ರಿಕಾಗೋಷ್ಠಿಯಲ್ಲಿ ಕಣ್ಣೀರು ಸುರಿಸಿದರು.

ಮಹಿಳಾ ಸಿಂಗಲ್ಸ್ 16ರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಅಮೆರಿಕದ ಜೆಸ್ಸಿಕಾ ಪೆಗೂಲ 7-5, 6-2ರಿಂದ ಜೆಕ್ ಗಣರಾಜ್ಯದ ಬಾರ್ಬರಾ ಕ್ರೆಜಿಕೊವಾ ಎದುರು ಜಯಭೇರಿ ಮೊಳಗಿಸಿದರು.

ಸೋಲಿನ ಆತಂಕದಿಂದ ಪಾರಾದ ಸಿಟ್ಸಿಪಸ್: ಗ್ರೀಸ್ ಆಟಗಾರ ಸ್ಟೆಫನೊಸ್ ಸಿಟ್ಸಿಪಸ್ ಅವರು ಪ್ರೀಕ್ವಾರ್ಟರ್‌ಫೈನಲ್‌ನ ಮ್ಯಾರಥಾನ್ ಆಟದಲ್ಲಿ 6-4, 6-4, 3-6, 4-6, 6-3ರಿಂದ ಇಟಲಿಯ ಜಾನಿಕ್ ಸಿನ್ನರ್ ಅವರನ್ನು ಸೋಲಿಸಿದರು. ನಾಲ್ಕು ತಾಸು ನಡೆದ ಈ ಹಣಾಹಣಿಯಲ್ಲಿ 15ನೇ ಶ್ರೇಯಾಂಕದ ಸಿನ್ನರ್ ಕಠಿಣ ಹೋರಾಟ ನೀಡಿದರೂ ಸೋಲೊಪ್ಪಿಕೊಂಡರು.

ಪುರುಷರ ಸಿಂಗಲ್ಸ್ ವಿಭಾಗದ ಇನ್ನೊಂದು ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಜೆಕ್ ಗಣರಾಜ್ಯದ ಜಿರಿ ಲೆಹೆಕಾ 4-6, 6-3, 7-6 (7/2), 7-6 (7/3)ರಿಂದ ಕೆನಡಾದ ಫೆಲಿಕ್ಸ್ ಉಜೆರ್ ಅಲಿಯಾಸಿಮ್ ಅವರಿಗೆ ಸೋಲಿನ ಕಹಿ ಉಣಿಸಿದರು. 16ರ ಘಟ್ಟದ ಇನ್ನುಳಿದ ಹಣಾಹಣಿಗಳಲ್ಲಿ ರಷ್ಯಾದ ಕರೆನ್ ಕಚನೊವ್ 6-0, 6-0, 7-6 (7/4)ರಿಂದ ಜಪಾನ್‌ನ ಯೊಶಿಹಿಟೊ ನಿಶಿಯೊಕಾ ಎದುರು ಗೆದ್ದು ಬೀಗಿದರು.



ಕಜಕಸ್ತಾನದ ಎಲೆನಾ ರಿಬಾಕಿನಾ ಆಟದ ಪರಿ– ಎಎಫ್‌ಪಿ ಚಿತ್ರ

ಸಾನಿಯಾ ಜೋಡಿ, ಜೀವನ್–ಬಾಲಾಜಿ ಪರಾಭವ

ಭಾರತದ ಸಾನಿಯಾ ಮಿರ್ಜಾ ಅವರ ಕೊನೆಯ ಗ್ರ್ಯಾನ್‌ಸ್ಲಾಮ್ ಡಬಲ್ಸ್ ಪಂದ್ಯ ಸೋಲಿನೊಂದಿಗೆ ಅಂತ್ಯವಾಯಿತು. ಆಸ್ಟ್ರೇಲಿಯಾ ಓಪನ್ ಟೂರ್ನಿಯ ಮಹಿಳಾ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಸಾನಿಯಾ ಅವರ ಕಜಕಸ್ತಾನದ ಜೊತೆಗಾರ್ತಿ ಅನ್ನಾ ಡ್ಯಾನಿಲಿನಾ 4-6, 6-4, 2-6ರಿಂದ ಬೆಲ್ಜಿಯಂನ ಅಲಿಸನ್ ವ್ಯಾನ್ ಯುತ್ವಂಕ್ ಮತ್ತು ಉಕ್ರೇನ್‌ನ ಅನ್ಹೆಲಿನಾ ಕಲಿನಿನಾ ಎದುರು ಸೋತರು.

ಸಾನಿಯಾ ಅವರು ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಜೊತೆಯಾಗಿ ಆಡಲಿದ್ದಾರೆ. ಪುರುಷರ ಡಬಲ್ಸ್‌ನ ಎರಡನೇ ಸುತ್ತಿನಲ್ಲಿ ಎನ್. ಶ್ರೀರಾಮ್ ಬಾಲಾಜಿ–ಜೀವನ್ ನೆಡುಂಚೇಳಿಯನ್ 4-6 4-6ರಿಂದ ಫ್ರಾನ್ಸ್‌ನ ಜೆರೆಮಿ ಚಾರ್ಡಿ– ಫ್ಯಾಬ್ರಿಕ್ ಮಾರ್ಟಿನ್ ವಿರುದ್ಧ ಸೋತರು.

ನಿತ್ಯ 36 ಸಾವಿರ ಚೀನಿಯರ ಸಾವು?

ಕೋವಿಡ್: ಚೀನಾದ ಸ್ವತಂತ್ರ ಸಂಸ್ಥೆ ‘ಏರ್‌ಫಿನಿಟಿ’ ಅಂದಾಜು

ಬೀಜಿಂಗ್ (ಎಪಿ/ ಎಎಫ್‌ಪಿ): ಚೀನಾದಲ್ಲಿ ಕೋವಿಡ್ ಸಾವುಗಳ ಸಂಖ್ಯೆ ಚಾಂದ್ರಮಾನ ಹೊಸ ವರ್ಷಾಚರಣೆ ದಿನಗಳಲ್ಲಿ ನಿತ್ಯ 36,000ಕ್ಕೆ ತಲುಪಬಹುದು ಎಂದು ಸ್ವತಂತ್ರ ಮುನ್ಸೂಚನೆ ಸಂಸ್ಥೆ ‘ಏರ್‌ಫಿನಿಟಿ’ ಅಂದಾಜಿಸಿದೆ.

ದೇಶದಲ್ಲಿ ಕೋವಿಡ್ ನಿರ್ಬಂಧವನ್ನು ಡಿಸೆಂಬರ್‌ನಲ್ಲಿ ಪೂರ್ಣ ಸಡಿಲಿಸಿದ ನಂತರ 6 ಲಕ್ಷಕ್ಕೂ ಹೆಚ್ಚು ಜನರು ಸೋಂಕಿನಿಂದ ಮೃತಪಟ್ಟಿದ್ದಾರೆ ಎಂದೂ ಸಂಸ್ಥೆಯು ಹೇಳಿದೆ.

ಚಾಂದ್ರಮಾನ ಹೊಸ ವರ್ಷಾಚರಣೆ ಹಿನ್ನೆಲೆ, ಆಪ್ತರ ಭೇಟಿ ಸೇರಿದಂತೆ ಇತ್ತೀಚಿನ ದಿನಗಳಲ್ಲಿ ಲಕ್ಷಾಂತರ ಜನರು ದೇಶದಾದ್ಯಂತ ಪ್ರಯಾಣಿಸಿದ್ದಾರೆ. ಇದು, ಸೋಂಕು ಏರಿಕೆಗೆ ಕಾರಣವಾಗಬಹುದು ಎಂದು ಹೇಳಲಾಗಿದೆ.

ಈ ಮಧ್ಯೆ, ದೇಶದಲ್ಲಿ ಕೋವಿಡ್ ರೋಗಿಗಳ ದಾಖಲಾತಿ ಸಂಖ್ಯೆ ಉತ್ತುಂಗವನ್ನು ತಲುಪಿದೆ ಎಂದು ರಾಷ್ಟ್ರೀಯ ಆರೋಗ್ಯ ಆಯೋಗದ ಅಧಿಕಾರಿ ಗುವೊ ಯಾನ್ಹಾಂಗ್ ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಹೇಳಿದ್ದರು.

ಸೋಂಕು ಪ್ರಮಾಣ ಏರಿಕೆ ಜೊತೆಗೆ ಹೆಚ್ಚಿನ ಕಡೆಗಳಲ್ಲಿ ವೈದ್ಯಕೀಯ ಸಂಪನ್ಮೂಲಗಳ ಕೊರತೆ ಇದೆ ಎಂಬ ಬಗ್ಗೆ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ನಿರ್ಬಂಧ ತೆರವು, ವರ್ಷಾಚರಣೆ ಸಂಭ್ರಮ: ಕೋವಿಡ್ ಭೀತಿ ಮಧ್ಯೆಯೆ ಈ ವಾರಾಂತ್ಯದಲ್ಲಿ ಹೊಸ ವರ್ಷಾಚರಣೆ ಸಂಭ್ರಮದಿಂದ ನಡೆಯಿತು. ಕಠಿಣ ನಿಯಮಗಳಿಂದ ಮೂರು ವರ್ಷಗಳಿಂದ ಸಾರ್ವಜನಿಕ ಆಚರಣೆ ಆಗಿರಲಿಲ್ಲ.

ಸಿರಿಯಾ: ಕಟ್ಟಡ ಕುಸಿತ, 16 ಸಾವು

ಬೈರುತ್ (ಎ.ಪಿ): ಸಿರಿಯಾದ ಅಲೆಪ್ಪೊ ನಗರದಲ್ಲಿ ಭಾನುವಾರ ಬೆಳಗಿನ ಜಾವ ಕಟ್ಟಡವೊಂದು ಕುಸಿದುಬಿದ್ದಿದ್ದು, ಮಗು ಸೇರಿ ಕನಿಷ್ಠ 16 ಮಂದಿ ಮೃತಪಟ್ಟಿದ್ದಾರೆ. ನಾಲ್ಕು ಮಂದಿ ಗಾಯಗೊಂಡಿದ್ದಾರೆ. ಐದು ಅಂತಸ್ತಿನ ಕಟ್ಟಡ ಕುಸಿದಿದ್ದು, ಕಟ್ಟಡದಲ್ಲಿ ಕನಿಷ್ಠ 30 ಮಂದಿ ವಾಸವಿದ್ದರು.

ಈ ಪ್ರದೇಶವು ಅಮೆರಿಕ ಬೆಂಬಲಿತ ಸಿರಿಯಾ ಪ್ರಜಾಸತ್ತಾತ್ಮಕ ಪಡೆಯ ನಿಯಂತ್ರಣದಲ್ಲಿದೆ ಎಂದು ಸಿರಿಯಾದ ಮಾಧ್ಯಮ ವರದಿ ಮಾಡಿದೆ. ನೀರು ಸೋರಿಕೆಯಿಂದಾಗಿ ಕಟ್ಟಡದ ಅಡಿಪಾಯವು ಶಿಥಿಲಗೊಂಡಿತ್ತು ಎಂದು ವರದಿ ತಿಳಿಸಿದೆ.



ಕೆಎಸ್‌ಎಫ್‌ಎ ಯೂತ್ ಪ್ರೀಮಿಯರ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ಅಲ್ಚೆಮಿ ತಂಡ

ಯೂತ್ ಫುಟ್‌ಬಾಲ್: ಅಲ್ಚೆಮಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಲ್ಚೆಮಿ ಇಂಟರ್‌ನ್ಯಾಷನಲ್ ಎಫ್‌ಎ ತಂಡದವರು ಇಲ್ಲಿ ಕೊನೆಗೊಂಡ ಕೆಎಸ್‌ಎಫ್‌ಎ ಯೂತ್ ಪ್ರೀಮಿಯರ್ ಲೀಗ್ 18 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದರು.

ಭಾನುವಾರ ನಡೆದ ಫೈನಲ್‌ನಲ್ಲಿ ಅಲ್ಚೆಮಿ ತಂಡ 2–0 ಗೋಲುಗಳಿಂದ ಕಿಕ್‌ಸ್ಟಾರ್ಟ್ ಎಫ್‌ಸಿ ತಂಡವನ್ನು ಮಣಿಸಿತು. ಎರಡೂ ಗೋಲುಗಳನ್ನು ಜೋಮನ್ ಜೇಕಬ್ ಅವರು 6 ಹಾಗೂ 10ನೇ ನಿಮಿಷದಲ್ಲಿ ತಂದಿತ್ತರು.

ಅಲ್ಚೆಮಿ ತಂಡದ ದಿವ್ಯಜ್ ಠಾಕರ್ ‘ಅತ್ಯುತ್ತಮ ಗೋಲ್‌ಕೀಪರ್’, ಕಿಕ್‌ಸ್ಟಾರ್ಟ್ ತಂಡದ ಅಲೆನ್ ಡಾಮು ‘ಅತ್ಯುತ್ತಮ ಡಿಫೆಂಡರ್’, ಅಲ್ಚೆಮಿ ತಂಡದ ಜೋಮನ್ ಜೇಕಬ್ ‘ಅತ್ಯುತ್ತಮ ಮಿಡ್‌ಫೀಲ್ಡ್’ ಪ್ರಶಸ್ತಿ ಗಳಿಸಿದರು. 17 ಗೋಲುಗಳನ್ನು ಗಳಿಸಿದ ಕಿಕ್‌ಸ್ಟಾರ್ಟ್ ತಂಡದ ಮುಹಮ್ಮದ್ ಸುಹೇಲ್ ಅವರು ಲೀಗ್‌ನ ‘ಟಾಪ್ ಸ್ಕೋರರ್’ ಗೌರವಕ್ಕೆ ಪಾತ್ರರಾದರು.

ಭಾರತ– ದಕ್ಷಿಣ ಆಫ್ರಿಕಾ ಪಂದ್ಯ ಡ್ರಾ

ಕೇಪ್‌ಟೌನ್ (ಪಿಟಿಐ): ಭಾರತ ಮಹಿಳಾ ತಂಡವು ಭಾನುವಾರ ಇಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ನಾಲ್ಕನೇ ಹಾಕಿ ಟೆಸ್ಟ್ ಪಂದ್ಯದಲ್ಲಿ 2–2 ಗೋಲುಗಳ ಡ್ರಾ ಸಾಧಿಸಿತು.

ಭಾರತದ ಪರ ಎರಡೂ ಗೋಲುಗಳನ್ನು ವೈಷ್ಣವಿ ಫಾಲ್ಕೆ ದಾಖಲಿಸಿದರು. ದಕ್ಷಿಣ ಆಫ್ರಿಕಾ ತಂಡಕ್ಕಾಗಿ ಕ್ಯುನಿಟಾ ಬಾಬ್ಸ್ ಮತ್ತು ಟೆರಿನ್ ಲೊಂಬಾರ್ಡ್ ಗೋಲು ಗಳಿಸಿದರು. ಸರಣಿಯ ಮೊದಲ ಮೂರು ಪಂದ್ಯಗಳನ್ನು ಭಾರತ ಗೆದ್ದುಕೊಂಡಿತ್ತು.

ಭಾರತ ತಂಡವು ಸೋಮವಾರ ನೆದರ್ಲೆಂಡ್ಸ್ ಸವಾಲು ಎದುರಿಸಲಿದೆ.

ಶ್ರೀಲಂಕಾ ಮಣಿಸಿದ ಭಾರತ

ಪೊಚೆಫ್‌ಸ್ಟ್ರೂಮ್, ದಕ್ಷಿಣ ಆಫ್ರಿಕಾ: ಪಾರ್ಶವಿ ಚೋಪ್ರಾ (5ಕ್ಕೆ 4) ಮತ್ತು ಮನ್ನತ್ ಕಶ್ಯಪ್ (16ಕ್ಕೆ 2) ಅವರ ಅಮೋಘ ಬೌಲಿಂಗ್ ದಾಳಿಯ ನೆರವಿನಿಂದ ಭಾರತ ತಂಡದವರು 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಜಯ ಗಳಿಸಿದರು.

ಭಾನುವಾರ ಇಲ್ಲಿ ನಡೆದ ಟೂರ್ನಿಯ ಸೂಪರ್ ಸಿಕ್ಸ್ ಪಂದ್ಯದಲ್ಲಿ ಭಾರತ 7 ವಿಕೆಟ್‌ಗಳಿಂದ ಶ್ರೀಲಂಕಾ ತಂಡವನ್ನು ಸೋಲಿಸಿತು.

ಪಂದ್ಯದಲ್ಲಿ ಭಾರತ ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಶ್ರೀಲಂಕಾ ತಂಡವು 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 59 ರನ್ ಗಳಿಸಿತು. ಈ ಗುರಿಯನ್ನು ಶಫಾಲಿ ವರ್ಮಾ ನಾಯಕತ್ವದ ಭಾರತ 7.2 ಓವರ್‌ಗಳಲ್ಲಿ ಮುಟ್ಟಿತು.

ಸೌಮ್ಯಾ ತಿವಾರಿ ಅವರು (ಔಟಾಗದೆ 28) ಭಾರತದ ಬ್ಯಾಟಿಂಗ್‌ನಲ್ಲಿ ಮಿಂಚಿದರು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 20 ಓವರ್‌ಗಳಲ್ಲಿ 9ಕ್ಕೆ 59 (ವಿಶ್ಮಿ ಗುಣರತ್ನೆ 25, ಉಮಾಯಾ ರತ್ನಾಯಕೆ 13; ಮನ್ನತ್ ಕಶ್ಯಪ್ 16ಕ್ಕೆ 2, ಪಾರ್ಶವಿ ಚೋಪ್ರಾ 5ಕ್ಕೆ 4).

ಭಾರತ: 7.2 ಓವರ್‌ಗಳಲ್ಲಿ 3ಕ್ಕೆ 60 (ಶಫಾಲಿ ವರ್ಮಾ 15, ಶ್ವೇತಾ ಶೆರಾವತ್ 13, ಸೌಮ್ಯಾ ತಿವಾರಿ ಔಟಾಗದೆ 28 ; ದೇವಾಮಿ ವಿಹಾಂಗ 34ಕ್ಕೆ 3). ಫಲಿತಾಂಶ: ಭಾರತಕ್ಕೆ 7 ವಿಕೆಟ್‌ಜಯ

‘ರಿಪಬ್ಲಿಕ್ ಡೇ ಕಪ್’ ವೆಟರನ್ಸ್ ಬ್ಯಾಡ್ಮಿಂಟನ್ ಟೂರ್ನಿ

ವಿಪಿನ್, ಅನುರಾಧಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಪಿನ್ ಜಯನಾರಾಯಣ ಮತ್ತು ಅನುರಾಧಾ ಯಡವಳ್ಳಿ ಅವರು ಭಾನುವಾರ ಇಲ್ಲಿ ನಡೆದ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್ ‘ರಿಪಬ್ಲಿಕ್ ಡೇ ಕಪ್’ ವೆಟರನ್ಸ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಚಾಂಪಿಯನ್ ಆದರು.

ಲೆವೆಲ್ ಅಪ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ 40 ವರ್ಷಕ್ಕಿಂತ ಮೇಲಿನವರ ವಿಭಾಗದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ವಿಪಿನ್ 15–10, 15–10 ರಲ್ಲಿ ರವಿ ವರ್ಮಾ ಅವರನ್ನು ಮಣಿಸಿದರು. ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಅನುರಾಧಾ 15–7, 15–11 ರಲ್ಲಿ ಸೂಸನ್ ವಿರುದ್ಧ ಗೆದ್ದರು.

45 ವರ್ಷಕ್ಕಿಂತ ಮೇಲಿನವರ ಸಿಂಗಲ್ಸ್ ವಿಭಾಗದಲ್ಲಿ ಮುರಳಿ ಕೃಷ್ಣ 15–11, 15–11 ರಲ್ಲಿ ಎನ್. ಪಿ.ಆನಂದ್ ವಿರುದ್ಧವೂ; 50 ವರ್ಷಕ್ಕಿಂತ ಮೇಲಿನವರ ವಿಭಾಗದಲ್ಲಿ ಮಧುಸೂದನ್ ರೆಡ್ಡಿ 13–15, 15–11, 15–11 ರಲ್ಲಿ ಅನಿಲ್ ದತ್ತ್ ವಿರುದ್ಧವೂ ಗೆದ್ದು ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪುರುಷರ ಡಬಲ್ಸ್ ವಿಭಾಗದ 40 ವರ್ಷಕ್ಕಿಂತ ಮೇಲಿನವರ ಫೈನಲ್‌ನಲ್ಲಿ ಕೋಳಪ್ಪ– ಸಿಜೊ ಜೋಡಿ 15–10, 15–11 ರಲ್ಲಿ ಪಿ.ಕೆ.ಚಂದ್ರಶೇಖರ್–ಶಿವ ವಿರುದ್ಧ ಗೆದ್ದರೆ, 45 ವರ್ಷಕ್ಕಿಂತ ಮೇಲಿನವರ ವಿಭಾಗದಲ್ಲಿ ಪಿ.ಕೆ. ಚಂದ್ರಶೇಖರ್– ಶ್ರೀಧರ ಜೋಡಿ 15–10, 15–7 ರಲ್ಲಿ ಸುದೀಶ್–ದ್ವಾರಕ್ ಎದುರು ಜಯಿಸಿತು.

ಮಿಶ್ರ ಡಬಲ್ಸ್‌ನಲ್ಲಿ ಪ್ರತಾಪ್–ಸುಷ್ಮಾ, ಮಹಿಳೆಯರ ಡಬಲ್ಸ್‌ನಲ್ಲಿ ನೂತನ್– ಕವಿತಾ ಪ್ರಶಸ್ತಿ ಗೆದ್ದರು.



ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದ (ಎಡದಿಂದ) ರವಿ ವರ್ಮಾ, ವಿಪಿನ್ ಜಯನಾರಾಯಣ, ಅನುರಾಧಾ ಮತ್ತು ಸೂಸನ್ ಅವರೊಂದಿಗೆ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಆಟಗಾರ ಅರವಿಂದ ಭಟ್ (ಮಧ್ಯದಲ್ಲಿ) ಇದ್ದಾರೆ

ಸಂಕ್ಷಿಪ್ತ ಸುದ್ದಿ

ಗುಂಡಿನ ದಾಳಿ, 10 ಮಂದಿ ಸಾವು

ಲಾಸ್ ಏಂಜಲೀಸ್ (ಎ.ಪಿ): ಲಾಸ್ ಏಂಜಲೀಸ್‌ನ ಜನನಿಬಿಡ ಸ್ಥಳದಲ್ಲಿ ಸಾವಿರಾರು ಜನರು ಸೇರಿದ್ದ ಕಾರ್ಯಕ್ರಮದಲ್ಲಿ ಬಂಧೂಕುದಾರಿಯೊಬ್ಬ ಶನಿವಾರ ರಾತ್ರಿ ಸಮೂಹವನ್ನು ಗುರಿಯಾಗಿಸಿ ಗುಂಡಿನ ದಾಳಿಯಲ್ಲಿ 10 ಮಂದಿ ಮೃತಪಟ್ಟಿದ್ದಾರೆ.

ದಾಳಿಗೆ ಕಾರಣ ಗೊತ್ತಾಗಿಲ್ಲ. ದಾಳಿಕೋರ ತಲೆಮರೆಸಿಕೊಂಡಿದ್ದಾನೆ. ಗುಂಡಿನ ದಾಳಿಯಲ್ಲಿ ಇತರೆ 10 ಮಂದಿ ಗಾಯಗೊಂಡಿದ್ದಾರೆ.ಕೆಲವರ ಸ್ಥಿತಿ ಗಂಭೀರವಾಗಿದೆ. ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಲ್ಲಿನ ಮಾಂಟೆರೆ ಪಾರ್ಕ್ ನಗರದ ವಾಣಿಜ್ಯ ಪ್ರದೇಶ ಗಾರ್ವೆ ಅವ್‌ನಲ್ಲಿ ಚೀನಾದ ಸಿಯುಂಗ್ ವೊನ್ ಚೊಯ್ ಎಂಬವರ ಮಾಲೀಕತ್ವದ ರೆಸ್ಟೋರೆಂಟ್ ಬಳಿ ಕೃತ್ಯ ನಡೆದಿದೆ. ಈ ನಗರದಲ್ಲಿ ಏಷ್ಯಾ ಮೂಲದವರ ಜನಸಂಖ್ಯೆ 60 ಸಾವಿರದಷ್ಟಿದೆ.

‘ಮೂವರು ಬಂದು ರೆಸ್ಟೋರೆಂಟ್ ವಹಿವಾಟು ಬಂದ್ ಮಾಡಲು ತಿಳಿಸಿದರು. ಜನರ ಪ್ರಕಾರ, ಒಬ್ಬನ ಬಳಿ ಗನ್ ಇತ್ತು’ ಎಂದು ಚೊಯ್ ತಿಳಿಸಿದ್ದಾರೆ.

ಜೋ ಬೈಡನ್ ನಿವಾಸದಲ್ಲಿ ರಹಸ್ಯ ದಾಖಲೆಗಳ ವಶ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಅಧ್ಯಕ್ಷ ಜೋ ಬೈಡನ್ ವಿಲ್ಮಿಂಗ್ಟನ್ ನಿವಾಸದಲ್ಲಿ 13 ಗಂಟೆ ತಪಾಸಣೆ ನಡೆಸಿರುವ ಎಫ್‌ಬಿಐ ಅಧಿಕಾರಿಗಳು ಇನ್ನಷ್ಟು ರಹಸ್ಯ ದಾಖಲೆಗಳನ್ನು ವಶಕ್ಕೆ ಪಡೆದಿದ್ದಾರೆ. 2024ರ ಚುನಾವಣೆಯಲ್ಲಿ ಮರು ಆಯ್ಕೆಯ ಸಿದ್ಧತೆಯಲ್ಲಿರುವ ಅವರಿಗೆ ರಾಜಕೀಯ ಮತ್ತು ಕಾನೂನು ದೃಷ್ಟಿಯಿಂದ ಇದು ತೊಡಕಾಗುವ ಸಾಧ್ಯತೆಗಳಿವೆ.